ಕನ್ನಡ ವಿಶ್ವವಿದ್ಯಾಲಯ, ಹಂಪಿ

" ವೈದೇಹಿಯವರ ಆಯ್ದ ಕಥೆಗಳು : ಸ್ತ್ರೀವಾದಿ ನೋಟ

ಕಾವ್ಯಮಂಡಲದ ವತಿಯಿಂದ ಎಂ.ಫಿಲ್ ಪದವಿಗಾಗಿ ಹಂಪಿ ಕನ್ನಡ
ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ನಿಬಂಧ

ಕಾವ್ಯಮಂಡಲ
೧೩/೮೫, ರಾಷ್ಟ್ರೀಯ ವಿದ್ಯಾಲಯ ರಸ್ತೆ
ಬಸವನಗುಡಿ, ಬೆಂಗಳೂರು-೦೪.

2008

ಕನ್ನಡ ವಿಶ್ವವಿದ್ಯಾಲಯ, ಹಂಪಿ

" ವೈದೇಹಿಯವರ ಆಯ್ದ ಕಥೆಗಳು : ಸ್ತ್ರೀವಾದಿ ನೋಟ

ಕಾವ್ಯಮಂಡಲದ ವತಿಯಿಂದ ಎಂ.ಫಿಲ್ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ನಿಬಂಧ

ಮಾರ್ಗದರ್ಶಕರು

ಡಾ. ಡಿ. ಮಂಗಳಾ ಪ್ರಿಯದರ್ಶಿನಿ ಎಂ.ಎ. ಎಂ.ಫಿಲ್. ಪಿಹೆಚ್.ಡಿ.

ಪ್ರಾಂಶುಪಾಲರು,

ಮಹಿಳಾ ಪ್ರಥಮ ದರ್ಜೆ ಕಾಲೇಜು,

ವಿದ್ಯಾವರ್ಧಕ ಸಂಘ, ಬಸವೇಶ್ವರ ನಗರ,

ಬೆಂಗಳೂರು

ಸಂಶೋಧನಾ ವಿದ್ಯಾರ್ಥಿನಿ

ಸುಜಾತ ಎನ್.

ಕಾವ್ಯಮಂಡಲ

೧೩/೮೫, ರಾಷ್ಟ್ರೀಯ ವಿದ್ಯಾಲಯ ರಸ್ತೆ

ಬಸವನಗುಡಿ, ಬೆಂಗಳೂರು-೦೪.

2008

ದೃಢೀಕರಣ ಪತ್ರ

ಸುಜಾತ ಎನ್. ರವರು ಎಂ.ಫಿಲ್ ಪದವಿಗಾಗಿ ಬರೆದು ಸಿದ್ಧಪಡಿಸಿರುವ ''ವೈದೇಹಿಯವರ ಆಯ್ದ ಕಥೆಗಳು : ಸ್ತ್ರೀವಾದಿ ನೋಟ'' ಎಂಬ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕಾವ್ಯಮಂಡಲದ ವತಿಯಿಂದ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ನಿಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಇದಕ್ಕೆ ಮೊದಲು ಬೇರೆ ಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲೀ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

16.9.2008

ಮಾರ್ಗದರ್ಶಕರು

ಡಾ. ಡಿ. ಮಂಗಳಾ ಪ್ರಿಯದರ್ಶಿನಿ

ಎಂ.ಎ. ಎಂ.ಫಿಲ್. ಪಿಹೆಚ್.ಡಿ.

ಪ್ರಾಂಶುಪಾಲರು,

ಮಹಿಳಾ ಪ್ರಥಮ ದರ್ಜೆ ಕಾಲೇಜು,

ವಿದ್ಯಾವರ್ಧಕ ಸಂಘ, ಬಸವೇಶ್ವರ ನಗರ,

ಬೆಂಗಳೂರು

ಸ್ಥಳ : ಬೆಂಗಳೂರು

ದಿನಾಂಕ : 15.09.2008

ಪ್ರಮಾಣ ಪತ್ರ

''''ವೈದೇಹಿಯವರ ಆಯ್ದ ಕಥೆಗಳು : ಸ್ತ್ರೀವಾದಿ ನೋಟ'' ಎಂಬ ನಿಬಂಧವನ್ನು ಎಂ.ಫಿಲ್ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕಾವ್ಯಮಂಡಲದ ವತಿಯಿಂದ ಸಲ್ಲಿಸಲು ಡಾ. ಡಿ. ಮಂಗಳಾ ಪ್ರಿಯದರ್ಶಿನಿ ರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ನಿಬಂಧದ ವಿಷಯವಾಗಿ ಇದುವರೆವಿಗೂ ಬೇರೆ ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲವೆಂದು ಘೋಷಿಸುತ್ತೇನೆ.

ಸ್ಥಳ : ಬೆಂಗಳೂರು
ದಿನಾಂಕ : 15.09.2008

ಸುಜಾತ ಎನ್.
ಸಂಶೋಧನಾ ವಿದ್ಯಾರ್ಥಿನಿ

ಪರಿವಿಡಿ

ವೈದೇಹಿಯವರ ಆಯ್ದ ಕಥೆಗಳು : ಸ್ತ್ರೀವಾದಿ ನೋಟ

ವೈದೇಹಿಯವರ ಆಯ್ದ ಕಥೆಗಳು : ಸ್ತ್ರೀವಾದಿ ನೋಟ

ಪೀಠಿಕೆ

ಆಧುನಿಕ ಮಹಿಳಾ ಬರಹಗಾರರಲ್ಲಿ ತಮ್ಮದೇ ಆದ ವಿಶಿಷ್ಟಸ್ಥಾನವನ್ನು ರೂಪಿಸಿಕೊಂಡ ಅಪರೂಪದ ಲೇಖಕಿ ವೈದೇಹಿಯರು, ಸಮಕಾಲೀನ ಸಂದರ್ಭದಲ್ಲಿ ಹೆಣ್ಣು ಮಕ್ಕಳ ಬದುಕಿನ ಸಂಕೀರ್ಣ ಸ್ವರೂಪದ ಕಡೆಗೆ ವೈದೇಹಿಯವರ ಆಸಕ್ತಿ, ಶ್ರದ್ಧೆ, ಪ್ರೀತಿಯಿದೆ. ಮನುಷ್ಯ ಸಂಬಂಧಗಳನ್ನ, ಒಳ ಹೊರಗಿನ ಸ್ವಭಾವಗಳನ್ನ ಸೂಕ್ಷ್ಮವಾಗಿ ಪ್ರೀತಿಯಿಂದ ನೋಡುತ್ತಲೇ ಭಾಷೆಯ ಬಂಧದಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ ಮುಖ್ಯವಾಗಿ ವೈದೇಹಿಯವರ ಕಥೆಗಳು ಪ್ರಾದೇಶಿಕತೆಯ ಸೊಗಡಿನಿಂದ ಜೀವಂತಿಕೆಯನ್ನು ಪಡೆದು ಸಂಸ್ಕೃತಿ ಸತ್ವದ ಪ್ರತಿಬಿಂಬವಾಗಿವೆ. ಹೀಗೆ ವಿಶಿಷ್ಟವಾಗಿ ಸಮಕಾಲೀನ ಸಂದರ್ಭಕ್ಕೆ ತಮ್ಮ ಒಟ್ಟಾರೆ ಬರಹಗಳಿಂದ, ವೈವಿಧ್ಯಮಯ ಪಾತ್ರಸೃಷ್ಟಿ, ನಿರೂಪಣಾ ಶೈಲಿ, ತಂತ್ರ, ವಸ್ತು, ವಿನ್ಯಾಸ, ಪ್ರಾದೇಶಿಕ ಸತ್ವ, ಭಾಷಾ ಶೈಲಿಗಳನ್ನು ಕೊಟ್ಟಿದ್ದಾರೆ.

ವೈದೇಹಿಯವರು ತೀವ್ರವಾದ ಎಚ್ಚರದಿಂದ ನಮ್ಮ ಪರಿಸರದಲ್ಲಿನ ಹೆಣ್ಣುಮಕ್ಕಳ ಬದುಕಿನ ಸಂಕೀರ್ಣ ಸ್ವರೂಪವನ್ನು ಗ್ರಹಿಸಲು, ಗುರುತಿಸಲು, ಸ್ತ್ರೀ ವಿಮುಕ್ತಿಯ ವಿಚಾರಧಾರೆ ಕೂಡ ಯೋಗ್ಯ ಉಪಕರಣವಾಗಿ ವೈದೇಹಿಗೆ ಒದಗುತ್ತದೆ ಎಂಬುದನ್ನು ನಿರ್ಲಕ್ಷಿಸುವಂತಿಲ್ಲ. ಆದರೆ ಸಂಪ್ರದಾಯಸ್ಥ ಪರಿಸರದೊಳಗೆ ಬದುಕಬೇಕಾದ ಅನಿವಾರ್ಯತೆಯಲ್ಲಿ ಹೆಣ್ಣಿನ ಅನುಭವ, ವ್ಯಕ್ತಿತ್ವಗಳು ಅರಳಿಕೊಳ್ಳುವ ಇಲ್ಲವೇ ಮುರುಟಿ ಹೋಗುವ ಬಗೆಗಳನ್ನು ವಿಚಾರ ಅಥವಾ ಸಿದ್ಧಾಂತಗಳ ಮೂಲಕವಾಗಿ ಗ್ರಹಿಸುವ ಬದಲು, ಅವರವರ ಬದುಕಿನ, ಪರಿಸರ, ಸ್ವಭಾವಗಳ ಒಳಗಿನಿಂದಲೇ ಸಹಜವಾಗಿ ಗ್ರಹಿಸುವುದಕ್ಕೆ ವೈದೇಹಿ ಪರಿಶ್ರಮಿಸುತ್ತಾರೆ. ಈ ಕಾರಣದಿಂದಲೇ ಅವರ ರಚನೆಗಳು ಅವರ ಸಮಕಾಲದಲ್ಲಿ ಬರೆದಂಥ, ಬರೆಯುತ್ತಿರುವ

ಅನುಪಮಾ, ವೀಣಾ ಇಲ್ಲವೇ ನೇಮಿಚಂದ್ರರಂಥ ಕಥೆಗಾರರಿಗಿಂತ ತುಂಬ ಭಿನ್ನವೂ, ವಿಶಿಷ್ಟವೂ ಆಗಿ ತೋರುತ್ತದೆ.

ಈ ದೃಷ್ಟಿಯಿಂದ ವೈದೇಹಿ ಶ್ಯಾಮಲಾದೇವಿ, ಗೌರಮ್ಮ, ಸಾವಿತ್ರಮ್ಮನವರ ಪರಂಪರೆ, ಸಂವೇದನಾಶೀಲತೆಗಳ ಮುಂದುವರೆದ ಸ್ಥಿತಿಯೊಂದರ ಪ್ರತಿನಿಧಿಯಾಗಿ ಕಾಣಿಸುತ್ತಾರೆ. ಸಾರಾ ಅಬೂಬಕರ್, ಗೀತಾ ನಾಗಭೂಷಣ, ಲಲಿತಾನಾಯಕ್ ಅಥವಾ ಬಾನು ಮುಷ್ತಾಕರ ಬಂಡಾಯನಿಷ್ಠ ಬರಹದ ಮಾದರಿಗಿಂತ ವೈದೇಹಿ ಭಿನ್ನವಾಗಿ ತೋರುವುದು ಜೀವನದ ಒಳಗಿನಿಂದ ಅನುಭವದ ವಿವಿಧ ಮಗ್ಗುಲುಗಳನ್ನು ಗ್ರಹಿಸುವ ಯತ್ನದಿಂದಲೇ ಎನ್ನಬಹುದು.

ಅಧ್ಯಾಯ-೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಮಹಿಳಾ ಸಾಹಿತ್ಯ ನನ್ನ ಆಸಕ್ತಿಯ ವಿಷಯ. ಅದರಲ್ಲೂ ಸಣ್ಣಕಥೆ, ನನ್ನ ಒಲವಿನ ಸಾಹಿತ್ಯ ಪ್ರಕಾರವಾಗಿದೆ. ಏಕೆಂದರೆ, ಹೆಣ್ಣು ತನ್ನ ಅಂತರಂಗವನ್ನು ತೆರೆದಿಡುವಲ್ಲಿ ಸಣ್ಣಕತೆಯು ಒಂದು ಮುಖ್ಯ ಅಭಿವ್ಯಕ್ತಿ ಮಾಧ್ಯಮವಾಗಿದೆ. ಈ ನಿಟ್ಟಿನಲ್ಲಿ ಹಲವಾರು ಮಹಿಳಾ ಲೇಖಕಿಯರು ತಮ್ಮನ್ನು ತೊಡಗಿಸಿಕೊಂಡು ಬರೆಯುತ್ತಿದ್ದಾರೆ. ಈ ಪರಂಪರೆಗೆ ಸೇರುವ ಬಹುಮುಖ್ಯ ಲೇಖಕಿ ವೈದೇಹಿ. ಇವರ ಕಥೆಗಳಲ್ಲಿನ ಹೆಣ್ಣಿನ ಜನ್ಮವನ್ನು ಕುರಿತ್ತ ಬದುಕನ್ನೂ ಆಸೀಮವಾದ ಪ್ರೀತಿ ಮತ್ತು ಆತ್ಮವಿಶ್ವಾಸ ನನ್ನಲ್ಲಿ ಉತ್ಸಾಹವನ್ನು ಉಂಟುಮಾಡಿದ್ದರಿಂದ ಈ ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದೇನೆ.

ಕಥನ ಸಾಹಿತ್ಯದಲ್ಲಿ ತೀವ್ರವಾಗಿ ತೊಡಗಿಸಿಕೊಂಡಿರುವ ವೈದೇಹಿಯವರು ಅಪಾರ ವೈವಿಧ್ಯತೆ ಸಾಧಿಸುವ ಮೂಲಕ ಲೇಖಕಿಯೊಬ್ಬಳು ಏರಬಹುದಾದ ಎತ್ತರಕ್ಕೆ ಸಾಕ್ಷಿಯಂತಿದ್ದಾರೆ. ಗ್ರಾಮೀಣ ಬದುಕು, ಕೌಟುಂಬಿಕ ಜೀವನ, ಹೆಣ್ಣುಗಂಡುಗಳ ಸಂಬಂಧದ ತಾಕಲಾಟಗಳು, ಆಧುನಿಕ ಬದುಕು ತಂದೊಡ್ಡುವ ಸ್ಥಿತ್ಯಂತರಗಳು ಹೀಗೆ ಯಾವುದೇ ವಿಷಯವನ್ನು ತೆಗೆದುಕೊಂಡರೂ ಸಮರ್ಥವಾಗಿ ನಿರ್ವಹಿಸುವ ಮೂಲಕ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಲೇ ಇರುವ ವೈದೇಹಿಯವರ ವೈಶಿಷ್ಟ್ಯವಿರುವುದು ವಿಭಿನ್ನ ವರ್ಗ, ಸ್ಥರಗಳ ಹೆಂಗಸರ ಅಂತರಂಗದ ಬದುಕನ್ನು ಚಿತ್ರಿಸುವಲ್ಲಿ ಅವರು ಗಂಡು ಹೆಣ್ಣುಗಳನ್ನು ಮುಖಾಮುಖಿಯಾಗಿಸುವುದಕ್ಕಿಂತ ಹೆಚ್ಚಾಗಿ ಒಟ್ಟು ಸಾಮಾಜಿಕ, ಕೌಟುಂಬಿಕ ನೆಲೆಯಲ್ಲಿ ಸ್ತ್ರೀಯ ಶೋಷಣೆಗಳತ್ತ ಗಮನ ಹರಿಸುತ್ತಾರೆ.

ಆರಂಭದ 'ಮರಗಿಡಬಳ್ಳಿ' ಸಂಕಲನದಿಂದ ಹಿಡಿದು 'ಸಮಾಜ ಶಾಸ್ತ್ರಜ್ಞೆಯ ಟಿಪ್ಪಣಿಗೆ' ಸಂಕಲನದವರೆಗೆ ವೈದೇಹಿ ಬರೆದಿರುವ ಐವತ್ತಕ್ಕೂ ಹೆಚ್ಚು ಕಥೆಗಳಲ್ಲಿ ಹೆಣ್ಣನ್ನೇ ಕೇಂದ್ರವಾಗಿ ಇಟ್ಟುಕೊಳ್ಳುವ ಮತ್ತು ಹೆಣ್ಣಿನ ಅನುಭವದ ನೆಲೆಯಿಂದ ಬದುಕಿನತ್ತ ಪರಿಶೀಲನಾತ್ಮಕವಾಗಿ ನೋಡುವ ಕಾಳಜಿಯೊಂದು ಈ ಲೇಖಕಿಯ ಒಂದು ಪ್ರಮುಖ ಆಸಕ್ತಿಯಾಗಿ ಕಾಣಿಸಿಕೊಂಡಿದೆ. ಈ ಸ್ತ್ರೀ ವಿಶಿಷ್ಟ ದೃಷ್ಟಿಕೋನದಿಂದ ಒಂದು

ರೀತಿಯ ಅನನ್ಯತೆಯೂ ಅವರ ಕಥೆಗಳಿಗೆ ಉಂಟಾಗಿದೆ. ಆದರೆ ಮನುಷ್ಯರನ್ನು ಕಪ್ಪುಬಿಳುಪುಗಳಲ್ಲಿ ಇಲ್ಲವೆ ಥಾಳಾದ ಬಣ್ಣಗಳಲ್ಲಿ ಸರಳವಾಗಿ ವ್ಯಾಖ್ಯಾನಿಸುವುದರ ಬದಲಾಗಿ ಎಲ್ಲ ದಿಕ್ಕಿನಿಂದಲೂ ಅವರನ್ನು ಅರ್ಥಮಾಡಿಕೊಳ್ಳುವ ಕಳಕಳಿ ಹಾಗೂ ಕಟ್ಟುನಿಟ್ಟಿನ ವಿಶಿಷ್ಟವಾದ ಎಚ್ಚರ ಈ ಕಥೆಗಳಿಗಿದೆ. ಇದರಿಂದ ಉಂಟಾಗುವ ದೃಷ್ಟಿವೈಶಾಲ್ಯದಿಂದಾಗಿ ವ್ಯಂಗ್ಯ, ಸಿಟ್ಟು, ಸಿನಿಕತೆ, ಪ್ರತಿಭಟನೆ, ಆಕ್ರೋಶಗಳು ತಾವೇ ಮೇಲುಪದರಗಳಲ್ಲಿ ವಿಜೃಂಭಿಸದೆ ಕೆಳನೆಲೆಗೆ ಸರಿದು ಒಳದನಿಗಳಾಗುತ್ತವೆ. ಮುಖ್ಯ ನಿರೂಪಣೆಯು ವಿಶೇಷವಾಗಿ ಭಾವನಾಶೀಲ ಆಪ್ತತೆಯನ್ನು ತಳೆಯುವುದರಿಂದ ಒಳಸರಿದ ಸಿಟ್ಟು, ವ್ಯಂಗ್ಯ, ಕೋಪಗಳಿಗೆ ಒಂದು ರೀತಿಯ ಅಸ್ಫೋಟನಕಾರಿ ಶ ಕ್ತಿ ದೊರೆಯುತ್ತದೆ. ಹೆಣ್ಣಿನ ಅನುಭವಕ್ಕೆ ನಿಷ್ಠವಾಗಿದ್ದಾಗಲೂ ಪಕ್ಷಪಾತ ಇಲ್ಲವೆ ಅಳುಬುರುಕತೆಗೆ ಒಲಿಯದ, ಮಾನವತೆಯ ಪರತೆಯ ಹೆಸರಿನಲ್ಲಿ ನಿರ್ಭಾವುಕವೂ ಆಗದ ಸಮತೋಲನದ ದೃಷ್ಟಿಯನ್ನು ಸಾಧಿಸಲು ವೈದೇಹಿ ಯತ್ನಿಸುತ್ತಾರೆ.

ಮೊದಲ ಸಂಕಲನದ ಕಥೆಗಳಲ್ಲೇ ವೈದೇಹಿ ಯಾರೋ ಒಬ್ಬ ಹೆಣ್ಣಿನ ಬಗ್ಗೆ ಬರೆದಿಲ್ಲ. ಬದಲಾಗಿ ಅವರು ಕಾಣಿಸಲು ಯತ್ನಿಸುವ ಹೆಣ್ಣು ಬಾಲ್ಯದ, ಎಳೆ ಹರೆಯದ, ಪ್ರೌಢತ್ವದ, ನಡುಹರೆಯದ ಅಥವಾ ವೃದ್ಧಾಪ್ಯದ ವಿವಿಧ ಬದುಕಿನ ಘಟ್ಟಗಳೊಳಗೆ ಸಾಗುತ್ತಿರುವ ಹೆಣ್ಣು, ಹಾಗೆ ಸಾಗುತ್ತಲೇ ಬದುಕಿನ ಒಂದು ನಿರ್ದಿಷ್ಟಗಳಿಗೆಯೊಳಗೆ ತನ್ನನ್ನು, ತನ್ನ ಸುತ್ತಲೂ ಕಟ್ಟಿಕೊಂಡಿರುವ ಬದುಕನ್ನು ನೋಡುವ ಹವಣಿಕೆಯಲ್ಲಿದ್ದಾಳೆ. ತನಗಿಂತ ಭಿನ್ನವಾಗಿಯೂ ತನ್ನನ್ನು ಆವರಿಸಿಕೊಂಡಿರುವ, ತನ್ನನ್ನು ಸೆಳೆಯುವ ಇಲ್ಲವೆ ಹಿಡಿದಿಟ್ಟುಕೊಂಡಿರುವ ಇತರೆ ಮಾನವರೊಂದಿಗಿನ ಸಂಬಂಧಗಳ ಗೋಜಲು ಅವಳನ್ನು ಬೆಚ್ಚಿಸಿದೆ. ಅದರಿಂದ ಅವಳು ಅನುಭವಿಸುವ ವಿಸ್ಮಯ, ದಿಗ್ಭ್ರಮೆ, ಗೊಂದಲ, ಕುತೂಹಲ, ಆಸೆ, ಕನಸು, ಸಿಟ್ಟು, ಕುದಿತಗಳು ಅಸ್ಪಷ್ಟ ದನಿಗಳು - ಈ ಮೊದಲ ಕಥೆಗಳಲ್ಲಿ ಮಿಡಿದಿವೆಯೆನ್ನಬಹುದು.

ಹೃದಯದೊಳಗೆ ಹೆಣ್ಣು ಬೈತಿಟ್ಟ ನೂರಾರು ಮೂಕ ಮರ್ಮರಗಳಿಗೆ ವೈದೇಹಿ ಬಾಯಿಕೊಡುವಂತೆ ಬರೆಯುವಾಗಲೇ ತನ್ನ ವಿಶಿಷ್ಟ ಸ್ಥಿತಿಯನ್ನು ಹೆಣ್ಣೇ ಅರಿವಿಗೆ ತಂದುಕೊಳ್ಳುವಂತೆಯೂ ಮಾಡುತ್ತಾರೆ. ಈ ಆತ್ಮ ನಿರೀಕ್ಷಣೆಯ ಮೂಲಕವಾಗಿ ಅವರ ಹೆಣ್ಣುಗಳು 'ಒಂದು ಮಾದರಿಯ' ಪ್ರತಿಬಿಂಬವಾಗದೆ ಅನೇಕ ಬಿಡಿ ಬಿಡಿ ಮಾನವ

ವ್ಯಕ್ತಿಗಳಾಗಿ ಬೆಳೆದು ಬಿಡುತ್ತಾರೆ. ಸಮಾಜದ ಸಾಂಪ್ರದಾಯಿಕ ಭಾಷೆ ಹೆಣ್ಣನ್ನು ಗುರುತಿಸುವುದರಲ್ಲಿ ಹುಡುಗಿ, ಯುವತಿ, ಮುದುಕಿ ಮುಂತಾದ ವಯಸ್ಸನ್ನು ಮಾನದಂಡವಾಗಿ ಇಟ್ಟುಕೊಂಡಿರಬಹುದು. ಇಲ್ಲವೆ ತಾಯಿ, ಮಗಳು, ಅಜ್ಜಿ, ಅತ್ತೆ, ಸೊಸೆ, ಅಕ್ಕ ತಂಗಿಯೇ ಮೊದಲಾದ ಕೌಟುಂಬಿಕವಾಗಿ ಕಟ್ಟಲ್ಪಟ್ಟ ಸಾಮಾಜಿಕ ಸಂಬಂಧಗಳ ರೂಪದಲ್ಲಲಿರಬಹುದು. ಇದಾವುದೂ ಆಗಿರದೆ ಕ್ರೂರಿ, ರಕ್ಕಸಿ ಅನುಕಂಪವುಳ್ಳವಳು, ಉದಾರಿ, ಭ್ರಮಾಧೀನೆ, ಗಯ್ಯಾಳಿ, ಸಾಧ್ವಿ, ಹುಚ್ಚಿ ಮುಂತಾದ ಮೌಲ್ಯಭಾರವುಳ್ಳ ಹೆಸರುಗಳ ಮೂಲಕವೂ ಆಗಿರಬಹುದು. ಇಲ್ಲವೇ ಸಿರಿವಂತೆ, ಕೂಲಿಹೆಣ್ಣುಗಳಂತೆ ವರ್ಗಗಳನ್ನು, ಮೇಲು ಕೆಳ ಜಾತಿಗಳನ್ನೂ ಸೂಚಿಸುವಂತೆ ಕಲ್ಪಿತಳಾಗಿರಬಹುದು.

ವೈದೇಹಿಯವರ ಕಥೆಗಳಲ್ಲಿ ಕೆಲವು ಮುಖ್ಯ ಅಂಶಗಳನ್ನು ಶೋಧಿಸುವುದು ನನ್ನ ಈ ನಿಬಂಧದ ಉದ್ದೇಶವಾಗಿದೆ. ಇವರ ಕಥೆಗಳಲ್ಲಿ ಮೂಡಿ ಬಂದಿರುವ ಸಾಂಸ್ಕೃತಿಕ ಅಂಶಗಳನ್ನು ಗುರುತಿಸುವುದು ನಂತರ ಇವರ ಎಲ್ಲಾ ಕಥೆಗಳಲ್ಲಿಮೂಡಿ ಬಂದಿರುವ ಹೆಣ್ಣಿನ ಅಂತರಂಗವನ್ನು ಕೆಲವು ಉಪ ಅಧ್ಯಾಯಗಳಾಗಿ ವಿಂಗಡಿಸಿಕೊಂಡು ವಿಶ್ಲೇಷಣಗೊಳಪಡಿಸುವುದಾಗಿದೆ. ಉದಾ : ಕುಟುಂಬ ವ್ಯವಸ್ಥೆಯಲ್ಲಿ ಹೆಣ್ಣು ಇಲ್ಲಿ ಅಂತರಂಗದ ಪುಟಗಳು, ಸಂಸಾರ, ಒಂದು ಅಪರಾಧ ತನಿಖೆ ಮುಂತಾದ ಕೌಟುಂಬಿಕ ಕಥೆಗಳ ಮೂಲಕ ವಿಶ್ಲೇಷಿಸಲಾಗುವುದು. ಮುಂದುವರೆದು ಪಿತೃಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು, ಎಂಬ ಶೀರ್ಷಿಕೆಯಡಿಯಲ್ಲಿ 'ಚಿಪ್ಪು' ಸೌಗಂಧಿಯ ಸ್ವಗತಗಳು ಮುಂತಾದ ಕಥೆಗಳ ಮೂಲಕ ವಿಮರ್ಶೆಗೊಳಪಡಿಸುವುದು. ದಾಂಪತ್ಯ ಸಂದರ್ಭದಲ್ಲಿ ಹೆಣ್ಣು ಎಂಬಲ್ಲಿ ವರ್ತುಲ, ನಮ್ಮ ಶಾಂತಿಯ ಬಯಕೆ ಕಥೆಗಳ ಮೂಲಕ ಚರ್ಚಿಸುವುದು. ಒಟ್ಟಾರೆಯಾಗಿ ಈ ಅಧ್ಯಾಯದಲ್ಲಿ ಹೆಣ್ಣಿನ ಅಂತರಂಗದ ಶೋಧವನ್ನು ಮಾಡಲಾಗುವುದು.

ಬದುಕನ್ನು ಕುರಿತ ಹೆಣ್ಣಿನ ಪ್ರೀತಿ, ಬದ್ಧತೆ, ಶ್ರದ್ಧೆ ಮುಂತಾದವುಗಳನ್ನು 'ಸಂಸಾರ' ವರ್ತುಲ, ಗುಲಾಬಿಯ ಮೃದುಪಾದಗಳು, ನಮ್ಮ ಶಾಂತಿಯ ಬಯಕೆ ಇನ್ನಿತರ ಕಥೆಗಳ ಮೂಲಕ ಚರ್ಚೆಗೊಳಪಡಿಸುವುದು. ಮುಂದುವರೆದು ಪ್ರಬುದ್ಧ ಹೆಣ್ಣಿನ ಹಿನ್ನೆಲೆಯಾಗಿ ಅಕ್ಕು, ಪುಟ್ಟಮ್ಮತ್ತೆ ಮತ್ತು ಮೊಮ್ಮಗಳು, ಒಂದು ಅಪರಾಧ ತನಿಖೆ,

ಅಮ್ಮಚ್ಚಿಯೆಂಬ ನೆನಪು ಅಂತರಂಗದ ಪುಟಗಳು ಕಥೆಗಳ ಮೂಲಕ ವಿಮರ್ಶಿಸುವುದು. ಇನ್ನುಳಿದಂತೆ ವೈದೇಹಿಯವರ ಭಾಷೆ ಮತ್ತು ಪ್ರಾದೇಶಿಕತೆಯನ್ನು ಕೆಲವು ಕಥೆಗಳ ಸಹಾಯದಿಂದ ಗುರುತಿಸುವುದು. ಉದಾ : ಅಮ್ಮಚ್ಚಿಯೆಂಬ ನೆನಪು, ಆರತಿ ತಟ್ಟೆ, ಬಂದುಹೋಗುವವರು ಮುಂತಾದ ಕಥೆಗಳ ಮೂಲಕ ಚರ್ಚಿಸಲಾಗುವುದು.

ಇವಿಷ್ಟೆ ಅಲ್ಲದೇ ವೈದೇಹಿಯವರ ಕಥೆಗಳಲ್ಲಿ ಸಂಶೋಧನೆಗೊಳಪಡುವ ಹಲವು ಅಂಶಗಳಿವೆ. ಏಕೆಂದರೆ ನಾನು ನನ್ನ ಅಧ್ಯಯನದ ಅನುಕೂಲಕ್ಕಾಗಿ ಮುಖ್ಯವಾಗಿ ಸಮಯದ ಹೊಂದಾಣಿಕೆಯ ಅಭಾವದಿಂದ ವೈದೇಹಿಯವರ ಸಮಗ್ರ ಕಥೆಗಳಲ್ಲಿ ಕೆಲವನ್ನು ಮಾತ್ರ ಆಯ್ಕೆ ಮಾಡಿಕೊಂಡಿದ್ದೇನೆ. ಉಳಿದ ಕಥೆಗಳು ಹಲವು ರೀತಿಯಲ್ಲಿ ಇತರ ಸಂಶೋಧನೆಗೆ ಒಳಪಡಬಹುದಾಗಿದೆ.

ಅಧ್ಯಾಯ-೨

ಮಹಿಳೆ ಮತ್ತು ಸಣ್ಣಕತೆ

ಪ್ರಾಚೀನ ಕಾಲದಿಂದಲೂ ಕಥೆ ಹೇಳುವ ಮತ್ತು ಕೇಳುವ ಎರಡೂ ಪದ್ಧತಿಗಳೂ ಪ್ರಪಂಚದ ಹಲವಾರು ಭಾಷೆಗಳಲ್ಲಿ ಕಂಡುಬರುವ ಸಾಮಾನ್ಯ ಅಂಶಗಳಾಗಿವೆ. ಪ್ರಪಂಚದ ಎಲ್ಲಾ ಧರ್ಮಗಳು ಕಥೆಗಳನ್ನು ನೀತಿಬೋಧನೆಗಾಗಿ ಒಂದು ಪ್ರಧಾನ ಮಾಧ್ಯಮವನ್ನಾಗಿ ಬಳಸಿಕೊಂಡಿರುವುದು ಕಂಡುಬರುತ್ತದೆ. ಬೈಬಲ್, ಖುರಾನ್, ಮಹಾಭಾರತ, ರಾಮಾಯಣ ಕೃತಿಗಳಲ್ಲಿ ಕಂಡುಬರುವ ಕಥನಶಾಸ್ತ್ರವು ಓದುಗರ ಮೆಚ್ಚುಗೆಗೆ ಪಾತ್ರವಾಗಿದೆ. ಭೂಮಿಯ ಮೇಲೆ ಜೀವ ಸಂಕುಲಗಳು ಜನ್ಮವೆತ್ತಿದಾಗಲೇ ಅವುಗಳ ಜೊತೆ-ಜೊತೆಯಲ್ಲಿಯೇ ಕಥೆಗಳೂ ಹುಟ್ಟಿಬಂದವು.

ಮಾತು ಮಾತು ಮಥಿಸಿ ಕಥೆಯಾಗಿ ಬೆಳೆಯುತ್ತಿತ್ತು. ಬರವಣಿಗೆಯೇ ಇಲ್ಲದಿದ್ದ ಸಮಾಜದಲ್ಲಿ ಕಥೆಗಳನ್ನು ಕೇಳಿ ನೆನಪಿನಲ್ಲಿ ಇಟ್ಟುಕೊಳ್ಳುತ್ತಿದ್ದರು. ಇದು ಒಂದು ಪರಿಪಾಠವಾಗಿತ್ತು. ಈ ತೋಂಡಿ ಸಂಪ್ರದಾಯದಲ್ಲಿ ಒಬ್ಬರಿಂದ ಇನ್ನೊಬ್ಬರಿಗೆ ಸಾಗುತ್ತಿದ್ದ ಕಥೆಯು ಕಾಲ-ದೇಶ--ಪರಿಸರ ಹಾಗೂ ಅವರವರ ಮಾತಿನ ಕಲ್ಪನೆಗಳಿಗನುಸಾರವಾಗಿ ಬದಲಾಗುತ್ತಾ, ಬೆಳೆಯುತ್ತಾ ಸಾಗುತ್ತಿತ್ತು. ಜಗತ್ತಿನ ಹಲವಾರು ದೇಶಗಳಲ್ಲಿ ಪ್ರಚಲಿತದಲ್ಲಿರುವ ಎಷ್ಟೋ ಅಸಂಖ್ಯಾತ ಜನಪದ ಕಥೆಗಳು ಹೀಗೆಯೇ ಬೆಳೆದಿರುವುದನ್ನು ಕಾಣಬಹುದಾಗಿದೆ.

ಕಥೆ ಎಂಬುದಕ್ಕೆ ಕನ್ನಡದಲ್ಲಿ ಕಥೆ, ವೃತ್ತಾಂತ, ಚರಿತ್ರೆ, ಕಲ್ಪಿತ ಕಥೆ ಎಂಬ ಅನೇಕ ಅರ್ಥಗಳು ಬಳಕೆಯಲ್ಲಿದೆ. ಈ ಅರ್ಥಗಳೆಲ್ಲಾ ಇಂಗ್ಲೀಷಿನ ಸ್ಟೋರಿ, ನಾವೆಲ್, ಫಿಕ್‌ಷನ್ ಸ್ವರೂಪಗಳಿಂದ ಪ್ರಭಾವಿತವಾದವುಗಳಾಗಿದೆ. ಪ್ರಾಚೀನವಾದ ಪೈಶಾಚಿ ಭಾಷೆಯಲ್ಲಿ ರಚಿತವಾದ ಗುಣಾಢ್ಯನ 'ಬೃಹತ್ಕಥಾ ಕೋಶ'ವು ಭಾರತೀಯ ಜನಮನದ ಕಥೆಗಳ ದೊಡ್ಡ ಭಂಡಾರವೇ ಆಗಿದೆ. ಸಂಸ್ಕೃತ ಸಾಹಿತ್ಯ ಚರಿತ್ರೆಯಲ್ಲಿ ಉಪಲಬ್ಧವಿರುವ 'ಕಥಾಸರಿತ್ಸಾಗರ' ಹಾಗೂ 'ಹಿತೋಪದೇಶ' ಕೃತಿಯ ಕಥೆಗಳು ಭಾರತೀಯ ಸಂಸ್ಕೃತಿಯ ಸಂಜಾತ ಕಥೆಗಳೇ ಆಗಿವೆ. ಕನ್ನಡದಲ್ಲಿ ಮೊದಲು ದೊರಕಿರುವ 'ವಡ್ಡಾರಾಧನೆ' ಗದ್ಯಕೃತಿಯು ಈ ಕ್ಷೇತ್ರದ ಮತ್ತೊಂದು ಪ್ರಮುಖ ಕಾಣಿಕೆಯಾಗಿದೆ. ಇದರಲ್ಲಿ ಹತ್ತೊಂಭತ್ತು ಕಥೆಗಳಿವೆ.

ಯಾವುದೇ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಒತ್ತಡಗಳು ತಮಗೆ ತಾವೇ ಸಂಪೂರ್ಣವಾಗಿರುವುದಿಲ್ಲ. ಆ ಚಾರಿತ್ರಿಕ ಒತ್ತಡಗಳಿಗೆ ಇದಿರಾಗಿ ಸವಾಲುಗಳು, ಸಂಘರ್ಷಗಳು ಉಂಟಾಗಿ ಆ ಮುಖಾಂತರ ಹೊಸ ಪ್ರವೃತ್ತಿಗೆ ಸಾಧ್ಯವಾಗುವ ಪ್ರಕ್ರಿಯೆಗಳನ್ನು ಸಾಹಿತ್ಯ ಕೃತಿಗಳು ಹುಟ್ಟು ಹಾಕುತ್ತವೆ. ವಸಾಹತು ಶಾಹಿಯ ಪ್ರಭಾವವನ್ನು ಕನ್ನಡ ಸಾಹಿತ್ಯ ತೀವ್ರವಾಗಿ ವಿರೋಧಿಸಿ ಸೃಷ್ಟಿಯಾಗತೊಡಗಿತು. ಇಪ್ಪತ್ತನೆಯ ದಶಕದ ಆದಿಯಿಂದ ಸ್ವಾತಂತ್ರ್ಯ ಬಂದ ಅವಧಿಯ ನಡುವೆ ಸೃಷ್ಟಿಯಾದ ಆಧುನಿಕ ಕನ್ನಡ ಕಥಾಸಾಹಿತ್ಯ ಕೂಡ ಇಂತಹ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಒತ್ತಡಗಳನ್ನು ಸಂಘರ್ಷಿಸಿಯೇ ಸೃಷ್ಟಿಯಾದ ಕಥಾ ಸಾಹಿತ್ಯವಾಗಿದೆ.

ಈ ಶತಮಾನದ ಆರಂಭದಿಂದ ಈವರೆಗೂ ಕಥೆ ಲೇಖಕಿಯರ ಪ್ರಿಯವಾದ ಅಭಿವ್ಯಕ್ತಿ ಪ್ರಕಾರವಾಗಿ ಬೆಳೆದುಬಂದಿದೆ. ಕಥನಕಲೆ ಹೆಣ್ಣಿನ ಜನ್ಮಜಾತ ಗುಣ ಎಂದು ಹೇಳಬಹುದಾದಷ್ಟು ಅದು ಆಕೆಗೆ ಕರಗತ. ಹಾಗೆ ನೋಡಿದರೆ ಕಥೆ ಬರೆದವರು ಮಾತ್ರವಲ್ಲ ಕಥೆ ಬರೆಯದವರೂ ಕಥನಗಾರ್ತಿಯರೇ. ಜನಪದ ಕಥೆಗಳನ್ನು ಹೇಳುವುದರಲ್ಲಿ ಸ್ತ್ರೀಯರೇ ಸಿದ್ಧಹಸ್ತರು ಎಂಬುದನ್ನು ಗಮನಿಸಬಹುದು. ಹೆಣ್ಣಿನ ಅಭಿವ್ಯಕ್ತಿಗಿದ್ದ ಸಾಮಾಜಿಕ ಅಡೆತಡೆಗಳೇ ಆಕೆಯನ್ನು ಕಥೆಗಾರ್ತಿಯಾಗಿ ರೂಪಿಸಿರಬಹುದೇನೋ ಅವಳು ಹೇಳದೇ ವ್ಯಕ್ತಪಡಿಸದೇ ಮಾಡಿಕೊಂಡ ಅನುಭವಗಳೆಲ್ಲ ಅವಳ ಮನಸ್ಸಿನಲ್ಲಿ ಕಥೆಗಳಾಗಿ ಹರಳುಗಟ್ಟಿರುತ್ತದೆ. ಆದುದರಿಂದ ಪ್ರತಿಯೊಂದು ಹೆಣ್ಣು ಹೃದಯವೂ ಕಥೆಯ ಆಗರವೆನ್ನಬಹುದು. ಇದೇ ರೀತಿ ಹೊಸಿಲು ದಾಟಿ ಹೊರಬಾರದ ಹೆಣ್ಣುಮಕ್ಕಳ ಮಾತುಕಥೆಯೆಲ್ಲಾ ಅಡುಗೆಮನೆಯೊಳಗೇ ನಡೆಯುವುದರಿಂದ ಅಡುಗೆಮನೆಯೂ ಕೂಡ ಕಥೆಗಳ ಕಣಜ. ಇದೇ ಕಾರಣಕ್ಕಿರಬೇಕು ನಮ್ಮ ಲೇಖಕಿಯರಿಗೆ ಕಥೆ ಹೆಣೆಯುವ ಕಲೆ ಸುಲಭವಾಗಿ ಸಿದ್ಧಿಸಿದೆ.

''ನಮ್ಮ ಮನೆಯ ಒಳ ಅಂಗಳ ಎಂದರೆ ಅಮ್ಮನ ಸಾಮ್ರಾಜ್ಯ ಕಥಾನಕಗಳ ಆಗರವದು, ಎಷ್ಟು ಜನ ಬರುತ್ತಿದ್ದರು. ಸುಖ-ದುಃಖ, ಕಥನ, ಹಾಡು, ಹಸೆ ಅದೊಂದು ಮನುಷ್ಯ ಲೋಕದ ದೊಡ್ಡ ದರ್ಶನ ಎಂತಲೇ ಬರೆಯುವ ಹೊರಟ ನನಗೆ ಸಣ್ಣಕಥೆಯೇ ಒಂದು ಸಾಧನವಾಗಿ ಸಿಕ್ಕಿತೇನೋ ಎಂದು ವೈದೇಹಿಯವರು ಹೇಳುವ ಮಾತುಗಳಲ್ಲಿ ಇದೇ ಅರ್ಥ ಸಿಕ್ಕಿತೇನೋ ಎಂದು ವೈದೇಹಿಯವರು ಹೇಳುವ

ಮಾತುಗಳಲ್ಲಿ ಇದೇ ಅರ್ಥ ಧ್ವನಿಸಿದೆ. (ಕರ್ನಾಟಕ ೧೦-೩-೨೦೦೨) ತಮ್ಮ ಬಳಿ ಚಿಕಿತ್ಸೆಗಾಗಿ ಬರುತ್ತಿದ್ದ ಹೆಣ್ಣುಮಕ್ಕಳು ಹೇಳಿಕೊಳ್ಳುತ್ತಿದ್ದ ಕಥೆಗಳೇ ಅನುಪಮಾ ನಿರಂಜನ. (ಮಹಿಳಾ ಸಾಹಿತ್ಯಚರಿತ್ರೆ. - ೩೯೨). ಅವರು ಹೆಚ್ಚಿನ ಕಥೆಗಳನ್ನು ಬರೆಯಲು ಕಾರಣವಾಯಿತು ಎಂಬುದನ್ನು ನೆನಪಿಸಿಕೊಳ್ಳಬಹುದು.

ಪ್ರತಿಯೊಬ್ಬ ಹೆಣ್ಣು ತನ್ನ ಕಥೆಗಳನ್ನು ಮಾತ್ರವಲ್ಲದೆ ಅನೇಕರ ಕಥೆಗಳನ್ನು ತನ್ನಲ್ಲಿ ಹುದುಗಿಸಿಕೊಂಡಿರುತ್ತಾಳೆ. ದಾರಿಕಾಣಲಾಗದೆ ಹೋದ ಇಂಥ ನೂರಾರು ಕಥೆಗಳಿವೆ. ನಮ್ಮ ಲೇಖಕಿ ಈ ಅಂತರಂಗದ ಕಥೆಗಳಿಗೆ ದನಿಕೊಡುವ ಪ್ರಯತ್ನ ಮಾಡಿದ್ದಾಳೆ. ಹೆಂಗಸರಿಗೆ ಕಥೆಯೇ ಯಾಕೆ ಮುಖ್ಯವಾಯಿತು ಎಂಬಷ್ಟೇ ಹೆಂಗಸರೇ ಕಥೆಯ ವಸ್ತುವಾಗುವುದೂ ಕೂಡ ಕುತೂಹಲಕರ ವಿಷಯ. ಪ್ರತಿಯೊಬ್ಬ ಹೆಣ್ಣಿನ ಬದುಕು ಒಂದು ಬರೆದಿಡದ ಕಥೆಯಾಗಿರುತ್ತದೆ.

ಬದುಕೇ ಒಂದು ಕಥೆ ಯಾವಾಗ ಆಗುತ್ತದೆಂದರೆ ಅದರಲ್ಲಿ ಅನೇಕ ಅನಿರೀಕ್ಷಿತ ತಿರುವುಗಳು ಇದ್ದಾಗ. ಹೆಣ್ಣಿನ ಬದುಕಿನ ಪ್ರತಿಯೊಂದು ಹಂತವೂ ಇಂತಹ ತಿರುವುಗಳನ್ನು ಪಡೆಯುತ್ತಿರುತ್ತವೆ. ಅವಳು ಯೌವನಕ್ಕೆ ಕಾಲಿರಿಸುವುದರೊಂದಿಗೆ ಇದು ಆರಂಭ, ನಂತರ ಮದುವೆ, ಗಂಡನ ಮನೆಯೆಂಬ ಪರಕೀಯ ಬದುಕಿಗೆ ಪ್ರವೇಶ, ಗಂಡ ಎಂಬಹೊಸ ವ್ಯಕ್ತಿಯೊಂದಿಗೆ ಬದುಕು, ಅನಂತರ ಮಕ್ಕಳಾದರೆ ಒಂದು ರೀತಿ, ಆಗದಿದ್ದರೆ ಇನ್ನೊಂದು ರೀತಿ, ಗಂಡ ಅನ್ಯೋನ್ಯವಾಗಿದ್ದರೆ ಒಂದು ರೀತಿ, ಅವನು ಬೇರೊಬ್ಬ ಹೆಣ್ಣಿಗೆ ಮರುಳಾದರೆ ಇನ್ನೊಂದು ರೀತಿ, ಗಂಡ ಅನಿರೀಕ್ಷಿತವಾಗಿ ಮೃತನಾದರೆ ಅವಳ ಬದುಕು ಇನ್ನೂ ದೊಡ್ಡ ತಿರುವು ಪಡೆಯುತ್ತದೆ. ಹೀಗೆ ಹೆಣ್ಣೊಬ್ಬಳು ಹೆಂಡತಿಯಾಗುತ್ತಾಳೆ, ತಾಯಿಯಾಗುತ್ತಾಳೆ, .. ಸೊಸೆಯಾಗುತ್ತಾಳೆ, ವಿಧವೆಯಾಗುತ್ತಾಳೆ, ಪರಿತ್ಯಕ್ತಳಾಗುತ್ತಾಳೆ, ಈ ಒಂದೊಂದು ಘಟನೆಯೂ ಅವಳ ಬದುಕಿನಲ್ಲಿ ಬಹುದೊಡ್ಡ ಪಲ್ಲಟವನ್ನು ಉಂಟುಮಾಡುವಂಥದು. ಹೀಗಾಗಿ ಹೆಣ್ಣಿನ ಕಥೆ ಮುಗಿಯುವುದೇ ಇಲ್ಲ. ಆಗಾಗ ಹೊಸ ತಿರುವುಗಳನ್ನು ಪಡೆಯುತ್ತ ಮುಂದುವರೆಯುತ್ತಲೇ ಇರುತ್ತದೆ. ಅದು ಸದಾ ಆತಂಕ ನಿರೀಕ್ಷೆಗಳಿಂದ ತಲ್ಲಣಿಸುತ್ತಿರುವಂಥ ಬದುಕು. ತನ್ನ ಬದುಕನ್ನು ತಾನು ನಿರ್ಧರಿಸಿದಂತೆ ರೂಪಿಸಿಕೊಳ್ಳುವ ಅವಕಾಶ, ಅಧಿಕಾರ, ಅವಳಿಗಿಲ್ಲದಿರುವುದೇ ಈ ಅತಂತ್ರ ಸ್ಥಿತಿಗೆ

ಕಾರಣವಿರಬಹುದು. ಇದಕ್ಕೆ ಪ್ರತಿಯಾಗಿ ಇಂತಹ ಅವಕಾಶ, ಅಧಿಕಾರಗಳನ್ನು ಹೊಂದಿರುವ ಪುರುಷನ ಬದುಕಿನಲ್ಲಿ ಹೆಚ್ಚಿನ ತಿರುವುಗಳಲ್ಲಿ ಅವನ ಪಾತ್ರಗಳು ಹೆಚ್ಚು ಬದಲಾಗುವುದಿಲ್ಲ. ಹೆಣ್ಣು ಮಾತ್ರ ತನಗೆ ಬೇಕಿರಲಿ ಬೇಡದಿರಲಿ ವಿವಿಧ ಪಾತ್ರಗಳನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಇದರಿಂದ ಪ್ರತಿಯೊಂದು ಹೆಣ್ಣಿಗೂ ತನ್ನದೇ ಆದ ಕಥೆ ರೂಪುಗೊಂಡು ಅವಳ ಕಥೆಯೇ ಕಥೆಗೆ ವಸ್ತುವೂ ಆಗಿಬಿಡುತ್ತವೆ.

ಕನ್ನಡದಲ್ಲಿ ಸಣ್ಣಕತೆ ಅತ್ಯಂತ ಹುಲುಸಾಗಿ ಬೆಳೆದಿರುವ ಸಾಹಿತ್ಯ ಪ್ರಕಾರವಾಗಿದೆ. ಕಾಲಕಾಲಕ್ಕೆ ಬದಲಾಗುತ್ತ, ಬೆಳೆಯುತ್ತ, ಹೊಸ ಹೊಸ ಅಹ್ವಾನಗಳಿಗೆ ತನ್ನನ್ನು ತಾನು ಒಡ್ಡಿಕೊಳ್ಳುತ್ತ ತನ್ನ ಜೀವಂತಿಕೆಯನ್ನು ಕಾಪಾಡಿಕೊಂಡು ಬಂದಿದೆ. ಅದರ ಬೆಳವಣಿಗೆಯನ್ನು ಸ್ಥೂಲವಾಗಿ ನಾಲ್ಕು ಹಂತಗಳಲ್ಲಿ ಗುರುತಿಸಬಹುದು, ನವೋದಯ ಯುಗ, ಪ್ರಗತಿಶೀಲಯುಗ, ನವ್ಯಯುಗ ಮತ್ತು ಬಂಡಾಯಯುಗ, ಈ ನಾಲ್ಕು ಹಂತಗಳು ಆಧುನಿಕ ಕನ್ನಡ ಸಾಹಿತ್ಯದ ಬೆಳವಣಿಗೆಯ ಮುಖ್ಯ ಹಂತಗಳೂ ಹೌದು ಎಂದರೆ ಕನ್ನಡ ಸಣ್ಣಕತೆ ನಮ್ಮ ಆಧುನಿಕ ಸಾಹಿತ್ಯದ ಎಲ್ಲ ಪ್ರಮುಖ ಚಳವಳಿಗಳಲ್ಲೂ ಕ್ರಿಯಾಶೀಲವಾಗಿ ಭಾಗವಹಿಸಿದೆ ಎನ್ನಬಹುದು.

ನವೋದಯ ಕಥೆಗಾರ್ತಿಯರಲ್ಲಿ ಮುಖ್ಯವಾಗಿ ಹೆಸರಿಸಬಹುದಾದ ಹೆಸರುಗಳೆಂದರೆ ಸರಸ್ವತೀಬಾಯಿ ರಾಜವಾಡೆ (ಗಿರಿಬಾಲೆ), ಕೊಡಗಿನ ಗೌರಮ್ಮ, ಶ್ಯಾಮಲಾದೇವಿ ಬೆಳಗಾಂವಕರ ಅವರು. ಮಹಿಳೆಯರೂ ಲೇಖಕಿಯರಾಗಿ ತೊಡಗಲು ವಸಾಹತುಶಾಹಿ ಸಂದರ್ಭ ಅನುಕೂಲಕರ ವಾತಾವರಣವನ್ನು ಒದಗಿಸಿತ್ತು. ಈ ಕಥೆಗಾರ್ತಿಯರು ಅಸ್ಪೃಶ್ಯತೆ, ಬಂಜೆತನ, ವೇಶ್ಯಾ ಸಮಸ್ಯೆ, ವರದಕ್ಷಿಣೆ, ಬಹಿಷ್ಕಾರ, ವಿಧವಾ ಸಮಸ್ಯೆ ಮುಂತಾದ ಸಾಮಾಜಿಕ ಸಮಸ್ಯೆಗಳ ಬಗ್ಗೆ ತುಂಬಾ ದಿಟ್ಟತನದಿಂದ ಬರೆದಿದ್ದಾರೆ. ದಕ್ಷಿಣ ಕನ್ನಡದ ಸರಸ್ವತೀಬಾಯಿ ರಾಜವಾಡೆಯವರು ತಮ್ಮ 'ಆಹುತಿ' ಕಥೆಗಳ ಮೂಲಕ ಬಡತನ, ಜೀತಪದ್ಧತಿ, ಸ್ತ್ರೀಸಮಸ್ಯೆ ಹಾಗೂ ಪ್ರೇಮದ ವಿವಿಧ ಮುಖಗಳನ್ನು ಚಿತ್ರಿಸಿದ್ದಾರೆ. ಬಡತನದಲ್ಲೇ ಬಾಲ್ಯ ಕಳೆದ 'ಗಿರಿಬಾಲೆ' ಅವರ ಮನೆಮಾತು ಮರಾಠಿಯಾದರೂ ಕನ್ನಡ ಭಾಷೆಯ ವಾಹಿನಿಯಲ್ಲಿ ತಮ್ಮ ಅನುಭವ ಹಾಗೂ ಅಭಿವ್ಯಕ್ತಿಯನ್ನು ಹಂಚಿಕೊಂಡಿದ್ದಾರೆ.

ಬಡವರ ಬವಣೆಯ ಬಗ್ಗೆ ಇವರ ಲೇಖನಿ ರೋಷವಾಗಿ ಕಾಣಿಸಿಕೊಂಡಿದೆ. ವ್ಯಂಗ್ಯದ ಮೊನಚಿನಿಂದ ಸಮಾಜವನ್ನು ಚುಚ್ಚಿ ಎಚ್ಚರಿಸುವ ಪ್ರಯತ್ನವನ್ನು ತಮ್ಮ ಬಡವರ ಕಣ್ಣೀರು 'ಪ್ರಪಂಚ' ಕಥೆಗಳಲ್ಲಿ ಮಾಡಿದ್ದಾರೆ. ಲೇಖಕಿಯರೇ ವಿರಳವಾಗಿದ್ದ ಕಾಲದಲ್ಲಿ 'ಗಿರಿಬಾಲೆ' ಅವರ ಕಥೆಗಳು ವಸ್ತು ವೈವಿಧ್ಯದಿಂದ ಕೂಡಿವೆ. ಮನುಷ್ಯನ ಸ್ವಭಾವದ ವಿವಿಧ ಮುಖಗಳು ಸಾಮಾಜಿಕ ಸಮಸ್ಯೆಗಳು ಇವರನ್ನು ಚಿಂತನೆಗೆ ಹಚ್ಚಿವೆ. ಇವರ ಗಾಢವಾದ ಸ್ತ್ರೀಪರ ದೃಷ್ಟಿಗೆ ಇವರ ಕಥಾನಾಯಕಿಯರೇ ಸಾಕ್ಷಿಯಾಗಿದ್ದಾರೆ. ಬದುಕನ್ನು ಇವರಿಗಿಂತ ಭಿನ್ನವಾಗಿ ನೋಡುವ ಮತ್ತು ನಿರೂಪಿಸುವ ದೃಷ್ಟಿಯಿಂದ ಕೊಡಗಿನ ಗೌರಮ್ಮನವರು ಗಮನ ಸೆಳೆಯುತ್ತಾರೆ. ನವೋದಯ ಕಾಲದ ಆಕರಗಳೇ ಇವರ ಕಥೆಗಳಲ್ಲಿ ವಸ್ತುಗಳಾಗಿ ಕಾಣಿಸಿಕೊಂಡಿವೆ.

ಇವರು ತಮ್ಮ 'ಕಂಬನಿ' ವಾಣಿಯ ಕಥೆ', 'ಅವಳ ಭಾಗ್ಯ' ಮುಂತಾದ ಕಥೆಗಳಲ್ಲಿ ಸಂಪ್ರದಾಯಬದ್ಧವಾಗಿರುವ ಹೆಣ್ಣನ್ನು ಚಿತ್ರಿಸಿರುವ ಬಗೆ ಪ್ರಸ್ತುತ ಸಂದರ್ಭಕ್ಕೆ ಸವಾಲಾಗುತ್ತದೆ. 'ವಾಣಿಯ ಸಮಸ್ಯೆ' ಕಥೆಯ ಇಡೀ ವಾತಾವರಣ ಸಂಪ್ರದಾಯಬದ್ಧವಾಗಿರುವ ಹೆಣ್ಣನ್ನು ಚಿತ್ರಿಸಿರುವ ಬಗೆ ಪ್ರಸ್ತುತ ಸಂದರ್ಭಕ್ಕೆ ಸವಾಲಾಗುತ್ತದೆ. 'ವಾಣಿಯ ಸಮಸ್ಯೆ' ಇಡೀ ವಾತಾವರಣ ಸಂಪ್ರದಾಯಬದ್ಧವಾದುದು.

ನವೋದಯ ಕಾಲದಲ್ಲಿ ವಿಧವಾ ವಿವಾಹದ ಪರವಾಗಿ ಹೆಣ್ಣು ದನಿಯೆತ್ತಿದ್ದು ಇಲ್ಲಿ ವಿಶಿಷ್ಟವಾಗಿದೆ. ಕಥೆಯು ಹೇಳುವಂತೆ ಗಂಡಿನ ಮರುಮದುವೆಗೆ ಐಶ್ವರ್ಯವೊಂದೇ ಪ್ರೇರಣೆಯಲ್ಲ. ಜಡವಾಗಿ ಬಿಟ್ಟಿರುವ ಕುಟುಂಬ, ವ್ಯಕ್ತಿ ಸಾಮಾಜಿಕ ಸಮಸ್ಯೆಗಳನ್ನು ಗೌರಮ್ಮನವರು ಕೆಣಕಿ ಅವುಗಳಿಗೆ ಪರಿಹಾರ ಸೂಚಿಸಲು ಬಯಸುತ್ತಾರೆ. ಇದೇ ಅವಧಿಯಲ್ಲಿ ಹಿಂದೂ ಮಹಿಳೆಯೊಬ್ಬಳು ತನ್ನ ಸಂಪ್ರದಾಯದ ಧಾರುಣ ತಿರಸ್ಕಾರಕ್ಕೆ ಒಳಗಾದಾಗ ಆಕೆ ಮುಸ್ಲಿಂ ಮತಕ್ಕೆ ಸೇರಿಕೊಳ್ಳುವ ಚಿತ್ರ ಒಂದು ಕಥೆಯಲ್ಲಿ ಬರುತ್ತದೆ. ಆದರೆ ಮತ್ತೊಂದು ಕಥೆಯಲ್ಲಿ ಹಿಂದೂ ಮುಸ್ಲಿಂ ಗಂಡು ಹೆಣ್ಣು ಒಂದುಗೂಡಲು ಸಾಧ್ಯವಿಲ್ಲ ಎಂಬ ದುರಂತದ ಚಿತ್ರವನ್ನು ಕಾಣಿಸುತ್ತಾರೆ. ಹೆಣ್ಣನ್ನು ಕೇವಲ ಲೈಂಗಿಕ ಪಾವಿತ್ರ್ಯದಲ್ಲಿ ನೋಡುವ ಸಾಮಾಜಿಕ ಆಶಯವನ್ನು 'ಆಹುತಿ' ಕಥೆಯಲ್ಲಿ ತಿರಸ್ಕರಿಸಲಾಗಿದೆ. ಗಂಡಿನ ಸರ್ವಾಧಿಕಾರವನ್ನು ಆತ್ಮಹತ್ಯೆಯ ಮೂಲಕ ಹೆಣ್ಣು ತಿರಸ್ಕರಿಸುತ್ತಾಳೆ.

ಗೌರಮ್ಮನವರು ಹೆಣ್ಣಿನ ಛಲ, ದಿಟ್ಟತನ ಮತ್ತು ಪ್ರತಿರೋಧವನ್ನು ಆಧುನಿಕವಾಗಿ ಚಿತ್ರಿಸಿದ್ದಾರೆ. ಇದೇ ಮಾರ್ಗದಲ್ಲಿ ಹೆಸರಿಸಬಹುದಾದ ಮತ್ತೊಬ್ಬಳು ಕಥೆಗಾರ್ತಿ ಎಂದರೆ ಉತ್ತರ ಕರ್ನಾಟಕದ ಶ್ಯಾಮಲಾದೇವಿ ಬೆಳಗಾಂವಕರ ಅವರು. ಇವರೂ ನವೋದಯದ ಮೊದಲ ಪೀಳಿಗೆಯ ಕಥೆಗಾರ್ತಿ. ಈ ಎಲ್ಲಾ ಲೇಖಕಿಯರ ಮುಂದೆ ಇದ್ದ ಆಗಿನ ಬಹುದೊಡ್ಡ ಸಮಸ್ಯೆಯೆಂದರೆ ಪುರುಷ ಪ್ರಧಾನ ಸಮಾಜದ ವಿರುದ್ಧ ಹೋರಾಡುವುದು. ಸಾಮಾಜಿಕವಾದ ಪ್ರಶ್ನೆಗಳನ್ನು ಎದುರಿಸುವುದು. ಪತ್ನಿ, ವಿಧವೆ, ವೇಶ್ಯೆ ಈ ಮೂರು ಸಮಸ್ಯೆಗಳನ್ನು ಬಿಡಿಸುವುದು. ಶ್ಯಾಮಲಾದೇವಿ ಬೆಳಗಾಂವಕರ ಅವರ 'ಕರುಳ ಕತ್ತರಿ' ಎಂಬ ಕಥೆಯು ಇಂತಹ ಸಮಸ್ಯೆಗಳಿಗೆ ಸಂಕೇತವಾಗಿದೆ. ಹೆಣ್ಣಿನ ಶೋಷಣೆಯ ಮುಖಗಳನ್ನು ಇದು ಚಿತ್ರಿಸುತ್ತದೆ. ಆದರೆ ತಿರುಮಲಾಂಬ ಅವರ ಕಥೆಗಳು ಪೌರಾಣಿಕವಾದ ರಚನೆಗಳಾಗಿದ್ದರಿಂದ ಹೆಚ್ಚುಹೆಚ್ಚು ಚರ್ಚೆಗೆ ಒಳಗಾಗಿಲ್ಲ.

ಇಂದು ಮಹಿಳಾ ಅನುಭವದ ಮತ್ತು ಮಹಿಳಾ ಸಾಹಿತ್ಯದ ಅನನ್ಯತೆಗಳು ಪ್ರಶ್ನಾತೀತವಾಗಿದೆ. ಈ ಸಂವೇದನೆಗಳು ಮಹಿಳೆಯರ ಹಲವಾರು ಸಾಹಿತ್ಯದ ಪ್ರಕಾರಗಳಲ್ಲಿ ಕಾಣಿಸಿಕೊಂಡಿದೆ. ಇದು ಅದರಲ್ಲೂ ಅವರ ಸಣ್ಣಕಥೆಗಳಲ್ಲಿ ಹುಲುಸಾಗಿ ಅಭಿವ್ಯಕ್ತಗೊಂಡಿದೆ. ಹನ್ನೆರಡನೆಯ ಶತಮಾನದ ಸಾಮಾಜಿಕ ಕ್ರಾಂತಿಯಲ್ಲಿ ಅಕ್ಕಮಹಾದೇವಿ ವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ತನ್ನ ವಚನಗಳ ಮೂಲಕ ಪ್ರಭುತ್ವದ ವಿರುದ್ಧ ಹೋರಾಡಿದ ದಿಟ್ಟ ಮಹಿಳೆ. ಆಕೆ ಸಾಂಸ್ಥಿಕ ವ್ಯವಸ್ಥೆಯ ವಿರುದ್ಧ ತನ್ನ ಅಭಿವ್ಯಕ್ತ ಸ್ವಾತಂತ್ರ್ಯವನ್ನು ನೋಂದಾಯಿಸಿದ ವಚನಗಾರ್ತಿ. ಅವಳ ನಂತರ ಅನೇಕ ಕೆಳವರ್ಗದ ವಚನಗಾರ್ತಿಯರು ತಮ್ಮ ಅನುಭವಗಳನ್ನು ವಚನಗದಳ ಮೂಲಕ ಹೊರಗೆಡವಿದ್ದಾರೆ. ತಮ್ಮ ತರುವಾಯ ತನ್ನ ಅಭಿವ್ಯಕ್ತಿಯನ್ನು ಸಾಂಸ್ಥಿಕ ವ್ಯವಸ್ಥೆಯ ಪರವಾಗಿ ಪ್ರಕಟಿಸಿದ್ದನ್ನು ಸಂಚಿಹೊನ್ನಮ್ಮನಲ್ಲಿ ಕಾಣಬಹುದು.

ಅನಂತರ ಸಾಹಿತ್ಯ ಲೋಕದಲ್ಲಿ ಮಹಿಳಾ ಲೇಖಕಿಯರ ಪ್ರವೇಶ ನವೋದಯ ಕಾಲದಿಂದ ಹೆಚ್ಚಾಗುತ್ತಾ ಹೋಯಿತು. ನವೋದಯದ ತಿರುಮಲಾಂಬಾ, ಸರಸ್ವತಿಬಾಯಿ ರಾಜವಾಡೆ, ಶ್ಯಾಮಲಾದೇವಿ, ಬೆಳಗಾಂವಕರ ಲೇಖಕಿಯರಿಂದ ಹಿಡಿದು ಕೊಡಗಿನ ಗೌರಮ್ಮ ತ್ರಿವೇಣಿ ಮುಂತಾದವರ ದಾಟಿಕೊಂಡು ಇಂದಿನ ವೀಣಾಶಾಂತೇಶ್ವರ, ವೈದೇಹಿ, ನೇಮಿಚಂದ್ರ ಮುಂತಾದ ಕಥೆಗಾರ್ತಿಯರವರೆಗೂ ಈ

ಸಣ್ಣಕತೆಯ ಪ್ರಕಾರ ಬೆಳೆದು ಬಂದಿದೆ. ಆದರೆ ನವೋದಯ ಕಾಲದ ಈ ಮಹಿಳಾ ಲೇಖಕಿಯರಲ್ಲಿ ಪ್ರತಿಭಟನೆಯ ದನಿ ಇಲ್ಲ. ಬದಲಾಗಿ ಮನುಷ್ಯರ ವ್ಯಕ್ತಿತ್ವಗಳ ಆಳಕ್ಕೆ ಇಳಿದು ನೋಡಿ ವಿಶ್ಲೇಷಿಸುವ ಪ್ರಯತ್ನವಿದೆ.

ಯಾವುದೇ ಪೂರ್ವಗ್ರಹವಿಲ್ಲದೆ ಜೀವನದ ಬಗ್ಗೆ ತಮಗೆ ಅನ್ನಿಸಿದ್ದನ್ನು ನೇರವಾಗಿ ಸಮಗ್ರವಾಗಿ ಪರಿಶೀಲಿಸುವ ಇಚ್ಛೆಯಿದೆ. ಆದರೆ ದಲಿತರಂತೆ ಸ್ತ್ರೀಯರೂ ಶೋಷಣೆಗೆ ಒಳಗಾದವರು ಎಂಬ ಸತ್ಯದ ಅರಿವು ಲೇಖಕಿಯರ ಗ್ರಹಿಕೆಗೆ ತಡವಾಗಿಯಾದರೂ ಬಂದಿದೆ. ಇವರು ಇದರ ಪರಿಣಾಮದಿಂದಾಗಿ ಆರ್ಥಿಕ ಹಾಗೂ ರಾಜಕೀಯ ಸ್ವಾತಂತ್ರ್ಯವನ್ನು ಸಮಾನತೆಯನ್ನು ಬಯಸತೊಡಗಿರುವುದು ಕಂಡುಬರುತ್ತದೆ. ಮಹಿಳೆಯರ ಸಾಮಾಜಿಕ ಅಂತಸ್ತು, ಸ್ಥಾನಮಾನ, ನಡವಳಿಕೆಗಳ ಬಗ್ಗೆ ಕಟ್ಟುಕಟ್ಟಳೆಗಳನ್ನು ರೂಪಿಸುವ ಹಂತದಲ್ಲಿ ಪುರುಷರೇ ಇದ್ದಾರೆ. ಈ ದಬ್ಬಾಳಿಕೆಯನ್ನು ಸಹಿಸದ ಮಹಿಳೆಯರು ಈ ಶತಮಾನದಲ್ಲಿ ಬಂಡೇಳುತ್ತಿರುವುದನ್ನು ಕಾಣಬಹುದು.

ಹೀಗಾಗಿ ಸಾಮಾಜಿಕ ಪ್ರಜ್ಞೆಯನ್ನು ಪ್ರಕಟಿಸುವ ಎಚ್ಚೆತ್ತ ಮನೋಭಾವದ ಮಹಿಳಾ ಪಾತ್ರಗಳು ಸಾಹಿತ್ಯ ಕೃತಿಗಳಲ್ಲಿಯೂ ಕಾಣಿಸಿಕೊಂಡಿದೆ. ಅನೇಕ ಕಥೆಗಳಲ್ಲಿ ಹೆಣ್ಣು ತನಗೆ ಗಂಡಸಿನಿಂದ ಆಗುತ್ತಿರುವ ಅನ್ಯಾಯ, ಶೋಷಣೆಯ ವಿರುದ್ಧ ಸೌಮ್ಯವಾಗಿ, ಅನೇಕ ಸಲ ತೀವ್ರವಾಗಿ ಬಂಡಾಯ ಏಳುವುದನ್ನು ಕಾಣಬಹುದು. ಅವಳಿಗೆ ಶೋಷಣೆಯ ಬಗ್ಗೆ ಅರಿವೂ ಇದೆ. ಆಕ್ರೋಶವೂ ಇದೆ. ಈ ರೋಷ, ಆಕ್ರೋಶಗಳು ಇದೆ. ಈ ರೋಷ, ಆಕ್ರೋಶಗಳು ವ್ಯಕ್ತಿನಿಷ್ಠವಾದುದಲ್ಲ. ತಮಗಾಗಿರುವ ಅನ್ಯಾಯ ಅಸಮಾನತೆಯ ಬಗ್ಗೆ ಇರುವ ವ್ಯಕ್ತಿನಿರಪೇಕ್ಷವಾದ ಅಸಹನೆ. ಪುರುಷ ಪ್ರಧಾನವಾದ ಸಾಂಸ್ಥಿಕ ಮೌಲ್ಯಗಳನ್ನು ನಿರಾಕರಿಸುವ ಮಟ್ಟಿಗೆ ಈ ಸಿಟ್ಟು ತೀಕ್ಷ್ಣವಾಗಿದೆ.

ಮಹಿಳೆ ಮತ್ತು ಕಥೆ ಇವುಗಳ ಸಂಬಂಧ ಪ್ರಾಚೀನವಾದುದು. ಕಥೆ ಹೇಳುವುದರಲ್ಲಿ ಮಹಿಳೆಯರದೇ ಪ್ರಧಾನ ಸ್ಥಾನ. ಆದರೆ ಸಣ್ಣಕಥೆ ಒಂದು ಗಂಭೀರ ಸಾಹಿತ್ಯ ಪ್ರಕಾರ ಎಂದು ಪರಿಗಣಿತವಾದುದು. ಇಪ್ಪತ್ತನೆಯ ಶತಮಾನದಲ್ಲಿ ಎಂಬುದು ನಿರ್ವಿವಾದ. ಕನ್ನಡದ ಮಹಿಳಾ ಕಥೆಗಾರ್ತಿಯರು. ಭಿನ್ನ ಸಾಂಸ್ಕೃತಿಕ ಸಾಧ್ಯತೆಗಳ ಹುಡುಕಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಮಹಿಳೆಯರ ಕಥೆಗಳಲ್ಲಿ

ಸಾಮಾಜಿಕ ಹುಡುಕಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಮಹಿಳೆಯರ ಕಥೆಗಳಲ್ಲಿ ಸಾಮಾಜಿಕ ಪ್ರಜ್ಞೆಯನ್ನು ದಟ್ಟವಾಗಿ ಪ್ರಕಟಿಸುವ ಸ್ತ್ರೀಪಾತ್ರಗಳಿವೆ. ಸಾಮಾಜಿಕ ಅನ್ಯಾಯದ ವಿರುದ್ಧ ಬಂಡೇಳುವ ಸ್ತ್ರೀ-ಪಾತ್ರಗಳಿವೆ. ಪ್ರೇಮ, ಮದುವೆ, ಕುಟುಂಬ ಇವೇ ಕೇಂದ್ರವಾಗಿರುವ ಕಥೆಗಳಿವೆ. ಹೆಣ್ಣು - ಗಂಡ ಮಕ್ಕಳ ಜೊತೆ ಸಂಬಂಧಗಳು, ಹೊಯ್ದಾಟಗಳು, ಭಾವನೆಗಳು ಹಾಗೂ ಎದುರಿಸಬೇಕಾದ ಸಮಸ್ಯೆಗಳಿವೆ. ಹೆಣ್ಣಿನ ಆತ್ಮವಿಶ್ಲೇಷಣೆಯ ಜೊತೆಗೆ ಸ್ವಂತ ಅಸ್ತಿತ್ವದ ಪ್ರಶ್ನೆಯ ಕಥೆಗಳೂ ಇಲ್ಲಿವೆ.

ತ್ರಿವೇಣಿ, ಅನುಪಮಾ ನಿರಂಜನ, ಕೊಡಗಿನ ಗೌರಮ್ಮ, ಅವರ ಕಥೆಗಳು ಸಾಂಪ್ರದಾಯಕ ನೆಲೆಗಳಿಗಿಂತ ಭಿನ್ನವಾದ ಮೌಲ್ಯಗಳನ್ನು ಪ್ರತಿನಿಧಿಸುತ್ತವೆ. ಕೊಡಗಿನ ಗೌರಮ್ಮನವರ 'ವಾಣಿಯ ಸಮಸ್ಯೆ, ತ್ರಿವೇಣಿಯವರ 'ಕೊನೆಯ ನಿರ್ಧಾರ', ಅನುಪಮಾ ನಿರಂಜನ ಅವರ 'ಒಂದು ಘಟನೆ ಮತ್ತು ಅನಂತರ' ಕಥೆಗಳು ಸ್ತ್ರೀ ಸಂವೇದನೆಯ ವಿವಿಧ ಸಮಸ್ಯೆಗಳನ್ನು ಚಿತ್ರಿಸುತ್ತದೆ. ಕೊಡಗಿನ ಏಕಾಕಿತನ, ಸ್ವಾತಂತ್ರ್ಯ ಪ್ರೀತಿ, ವಾಣಿಯೊಡನೆ ಅವಳು ಬೆಳೆಸುವ ಸ್ನೇಹ, ವಾಣಿಯ ಗಂಡ ರತ್ನನೊಡನೆ ಏರ್ಪಡುವ ಹೊಸ ಬಯಕೆಗಳು. ಈ ಸಂಪರ್ಕದಿಂದ ಅವಳಲ್ಲಿ ಹುಟ್ಟುವ ಹೊಸ ನೈತಿಕ ಪ್ರಜ್ಞೆ, ಆ ನೈತಿಕತೆಗೆ ಆಕೆ ಕಂಡುಕೊಳ್ಳುವ ಪರಿಹಾರ ಇವೆಲ್ಲಾ ಕಥೆಯಲ್ಲಿ ಸಹಜವಾಗಿ ಮೂಡಿಬಂದಿವೆ.

ಮಹಿಳಾ ಕಥಾಸಾಹಿತ್ಯಕ್ಕೆ ನಿಜವಾಗಿಯೂ ಒಂದು ಹೊಸ ತಿರುವು ಬಂದಿದ್ದು ಈ ಕಾಲದಲ್ಲಿ, ಉಗಮಿಸಿದ ಹೊಸ ಲೇಖಕಿಯರಿಂದಲೇ ಇಂದು ಬರೆಯುತ್ತಿರುವ ಹೆಚ್ಚಿನ ಲೇಖಕಿಯರು ಹೆಣ್ಣಿನ ಸಮಸ್ಯೆಗಳ ಬಗ್ಗೆ ಸ್ಪಷ್ಟ ಅರಿವು ಹೊಂದಿರುವಂಥವರು. ಕಥೆ ಹೇಳುವ ತುಡಿತಕ್ಕಿಂತ ಅದರ ಮೂಲಕ ಪ್ರತಿಪಾದಿಸಬೇಕೆಂದಿರುವ ಧೋರಣೆಯೇ ಇವರಿಗೆ ಮುಖ್ಯಶೋಷಣೆಯ ಮೂಲವನ್ನು ಅರಿಯುವ ಪ್ರಯತ್ನ ಇವರ ಬರವಣಿಗೆಯಲ್ಲಿದೆ. ಹಿಂದಿನ ಲೇಖಕಿಯರಂತೆ ಇವರು ಪ್ರತಿಯೊಂದು ಸಮಸ್ಯೆಗೂ ಸುಲಭ ಪರಿಹಾರಗಳನ್ನು ಸೂಚಿಸುವ ತಪ್ಪನ್ನು ಮಾಡುವುದಿಲ್ಲ. ಅಂದರೆ ಹಿಂದಿನವರಲ್ಲಿದ್ದ ರಮ್ಯ ಮನೋಭಾವದಿಂದ ಇವರು ದೂರವಾಗಿದ್ದಾರೆ. ಸಾಹಿತ್ಯದ ವಸ್ತು ಹಾಗೂ ಅಭಿವ್ಯಕ್ತಿ ಎರಡರ ಬಗ್ಗೆಯೂ ಗಂಭೀರ ದೃಷ್ಟಿಕೋನವಿರುವುದನ್ನು ಇಲ್ಲಿ ಕಾಣಬಹುದು.

ಮಹಿಳಾ ಕಥಾಸಾಹಿತ್ಯದಲ್ಲಿ ಒಂದು ಹೊಸ ಅಲೆ ಕಾಣಿಸಿಕೊಳ್ಳಲು ಕಾರಣರಾದವರು ವೀಣಾ ಶಾಂತೇಶ್ವರ ಮತ್ತು ರಾಜಲಕ್ಷ್ಮಿ ಎನ್.ರಾವ್. ಹೊಸರೀತಿಯ ಕಥೆಗಾರಿಕೆ ಮತ್ತು ವಸ್ತುವನ್ನು ಕುರಿತ ವಿಭಿನ್ನ ಪರಿಭಾವನೆಯಿಂದ ಲೇಖಕಿಯರ ಸಾಹಿತ್ಯಕ್ಕೆ ಹೊಸ ಆಯಾಮವನ್ನು ತಂದುಕೊಟ್ಟವವರು ಎಂಬುದಾಗಿ ವೀಣಾ ಅವರ ಸಾಧನೆಯನ್ನು ಗುರುತಿಸಲಾಗಿದೆ. ಕಥೆಯ ವಸ್ತು, ಧೋರಣೆ, ನಿರೂಪಣೆ ಧಾಟಿ ಈ ಎಲ್ಲಾ ದೃಷ್ಟಿಗಳಿಂದಲೂ ವೀಣಾ ಅವರ ಸಾಧನೆಯನ್ನು ಗುರುತಿಸಲಾಗಿದೆ. ಕಥೆಯ ವಸ್ತು, ಧೋರಣೆ, ನಿರೂಪಣೆಯ ಧಾಟಿ ಈ ಎಲ್ಲ ದೃಷ್ಟಿಗಳಿಂದಲೂ ವೀಣಾ ಅವರ ಕಥೆಗಳಲ್ಲಿ ಹೊಸತನವಿದೆ. ಮೊಟ್ಟಮೊದಲಿಗೆ ಅತ್ಯಂತ ಸೂಕ್ಷ್ಮ ಸಂವೇದನೆಯ ದಿಟ್ಟನಿಲುವಿನ ವಿದ್ಯಾವಂತೆಯೂ ವಿಚಾರಶೀಲಳೂ ಆದ ನಾಯಕಿ ಇಲ್ಲಿ ಉದ್ಭವವಾಗಿದ್ದಾಳೆ. ವೀಣಾ ಅವರ ಎಲ್ಲಾ ಕಥೆಗಳ ನಾಯಕಿಯರೂ ಇದೇ ಗುಣಗಳ ಪ್ರತೀಕ, ಇವರು ಸಮಸ್ಯೆಗಳನ್ನು ಮುಖಾಮುಖಿಯಾಗಿ ಎದುರಿಸುತ್ತಾರೆ. ತಮ್ಮ ಭವಿಷ್ಯವನ್ನು ಗಂಡ, ಅಪ್ಪ, ಸಮಾಜ, ಧರ್ಮಗಳ ಕೈಗೆ ಕೊಡದೇ ತಾವೇ ನಿರ್ಧರಿಸುತ್ತಾರೆ. ವೀಣಾ ಅವರ ನಿಲುವುಗಳು ಸ್ತ್ರೀಪರವಾಗಿದ್ದರೂ ಅವು ಎಲ್ಲೂ ಘೋಷಣೆಯ ರೂಪ ತಾಳುವುದಿಲ್ಲ. ಕಥೆಯ ಸಂದರ್ಭದಿಂದಲೇ ಅವು ಸಹಜವೆಂಬಂತೆ ಹೊಮ್ಮುತ್ತವೆ. ಪುರುಷರ ನಯವಂಚನೆ, ಹೇಡಿತನ, ಸಂಪ್ರದಾಯ, ಶರಣತೆಗಳನ್ನು ಕಥೆಯ ಮೂಲಕವೇ ಬಯಲುಗೊಳಿಸುತ್ತಾರೆ.

ತ್ರಿವೇಣಿಯವರ 'ಕೊನೆಯ ನಿರ್ಧಾರ' ಕಥೆಯಲ್ಲಿ ಸ್ತ್ರೀಶಕ್ತಿಯ ಇನ್ನೊಂದು ಮುಖವನ್ನು ಕಾಣಬಹುದು. ಮಹಿಳಾ ಕಥೆಗಾರ್ತಿಯರಲ್ಲಿಯೇ ಗಮನಾರ್ಹ ಲೇಖಕಿ ತ್ರಿವೇಣಿ ಅವರು. ಕನ್ನಡ ಸಾಹಿತ್ಯದಲ್ಲಿ ತಮ್ಮ ಕಥೆ, ಕಾದಂಬರಿಗಳ 'ಜನಪ್ರಿಯ' ಹಾಗೂ 'ಮನೋವಿಶ್ಲೇಷಣಾತ್ಮಕವಾದ ಸರಳ ಕಥಾನಕ ಶೈಲಿಯ ಮೂಲಕ ಅಪಾರವಾದ ಓದುಗ ಸಮೂಹವನ್ನು ಇವರು ಹೊಂದಿದ್ದಾರೆ. ಹೆಣ್ಣಿನ ಮನಸ್ಸಿನ ವಿಶಿಷ್ಟ ವ್ಯಾಪಾರಗಳ ಬಗ್ಗೆ ಮತ್ತು ಗಂಡಿನ ನಡತೆ, ಸ್ವಭಾವದ ಬಗ್ಗೆ ಬರೆಯುವ ಇವರು ತಮ್ಮ ಕೃತಿಗಳಲ್ಲಿ ಸಾಮಾಜಿಕ ಅಥವಾ ನೈತಿಕತೆಯ ಜವಾಬ್ದಾರಿಯನ್ನು ವಿಶಿಷ್ಟವಾಗಿ ಗುರುತಿಸುತ್ತಾರೆ. ಇವರ ಕಥೆ, ಕಾದಂಬರಿಗಳಲ್ಲಿ ವ್ಯಕ್ತವಾಗುವ ಸ್ತ್ರೀ ಸ್ವಭಾವ ಗುಣಪ್ರಜ್ಞೆಗಳ ಬಗೆಗಿನ ವಿಚಾರಗಳು ವಿಶಿಷ್ಟವಾಗಿವೆ. ಸಮಾಜದಲ್ಲಿ 'ಹೆಣ್ಣು - ಹೆಣ್ತನ' ಮತ್ತು ಹೆಣ್ಣಿನ ಮನೋಜಗತ್ತು' ನಿರ್ಮಾಣವಾಗುವ ಬಗೆಗೆ ಇವರ ಕಥೆಗಳು ವಿಶೇಷ ಒಳನೋಟಗಳನ್ನು

ಒಳಗೊಂಡಿವೆ. ಸ್ವಾರ್ಥ ಮತ್ತು ನಿಜವಾದ ಪ್ರೀತಿ ಇವುಗಳ ನಡುವಿನ ಸಂಬಂಧವನ್ನು 'ಕೊನೆಯ ನಿರ್ಧಾರ' ಕಥೆ ಶೋಧಿಸುತ್ತದೆ.

ಹೆಚ್.ವಿ. ಸಾವಿತ್ರಮ್ಮ ಅವರ 'ಒಂದು ಪ್ರಕರಣ' ಸರಸ್ವತೀ ದೇವಿಗೌಡರ 'ಹಾಲು ಉಕ್ಕೀತು', ಶಾಂತಾದೇವಿ ಕಣವಿ ಅವರ 'ಸಿಹಿಹಾಗಲ' ಒಂದು ಮೂಗುತಿಯ ಕಥೆ' ಗೀತಾ ಕುಲಕರ್ಣಿ ಅವರ 'ಹಸಿವು', 'ದೂರ ; ಎಂ.ಕೆ. ಇಂದಿರಾ ಅವರ ತಂದೆ, ಹೇಮಾ ಪಟ್ಟಣಶೆಟ್ಟಿ ಅವರ 'ಸಂಗಾತಿ', ಸಾರಾ ಅಬೂಬಕರ್ ಅವರ 'ಧರ್ಮಬಲೆ ಬೀಸಿದಾಗ', ಕಥೆಗಳಲ್ಲಿ ಸ್ತ್ರೀ ಸಂವೇದನೆ ವೈಶಿಷ್ಟ್ಯ ಪೂರ್ಣವಾಗಿ ಅನಾವರಣಗೊಂಡಿದೆ. ಹೆಚ್.ವಿ. ಸಾವಿತ್ರಮ್ಮ ಅವರು ಪಾಶ್ಚಾತ್ಯ ಸಂಸ್ಕೃತಿ ಮತ್ತು ಭಾರತೀಯ ಸಂಸ್ಕೃತಿಗಳನ್ನು ಮುಖಾಮುಖಿ ಮಾಡುವುದರ ಮೂಲಕ ಗಂಡು ಹೆಣ್ಣಿನ ಸಂಬಂಧವನು 'ಒಂದು ಪ್ರಕರಣ' ಕಥೆಯಲ್ಲಿ ವಿಶ್ಲೇಷಣೆಗೆ ಒಡ್ಡಿದ್ದಾರೆ.

ಗೀತಾ ಕುಲಕರ್ಣಿಯವರು ತಮ್ಮ 'ಹಸಿವು' ಕಥೆಯಲ್ಲಿ ಸ್ತ್ರೀಶೋಷಣೆಯ ಮುಖವನ್ನು ಚಿತ್ರಿಸಿದ್ದಾರೆ. ಅವರ ದೂರ-ಬಹುದೂರ'ಕಥೆಯಲ್ಲಿ ಬದುಕಿನ ಆಳವನ್ನು ಅರ್ಥೈಸಲು ಯತ್ನಿಸಿರುವುದನ್ನು ಕಾಣಬಹುದು.

ರಾಜಲಕ್ಷ್ಮಿ ಎನ್.ರಾವ್. ಅವರ 'ಇಲ್ಲ-ಇಲ್ಲ.....' ಕಥೆಯಲ್ಲಿ ಒಂದು ಹೆಣ್ಣು ಒಬ್ಬನನ್ನು ಪ್ರೀತಿಸಿ ಮತ್ತೊಬ್ಬನನ್ನು ಮದುವೆಯಾದ ದ್ವಂದ್ವವನ್ನು ಚಿತ್ರಿಸಲಾಗಿದೆ. ಈ ದ್ವಂದ್ವದಲ್ಲಿ ನಾಯಕಿಗೆ ಆಯ್ಕೆ ಪ್ರಶ್ನೆ ಬಂದಾಗ ಇಬ್ಬಂದಿತನ ಅನುಭವಿಸುತ್ತಿದ್ದಾಳೆ. ಆಕೆ ಅಲ್ಪತೃಪ್ತ ಗಂಡನೊಡನೆ ಮುಖವಾಡ ಧರಿಸಿ ಬದುಕನ್ನು ನಡೆಸುತ್ತಾಳೆ. ಆದರೆ ಆಕೆಯನ್ನು ಏಕಾಂತದಲ್ಲಿ ತನ್ನ ಪ್ರಿಯಕರನ ನೆನಪುಗಳು ಕಾಡುತ್ತದೆ. ಗಂಡ ಶಂಕರನ ಸಂಕೇತವಾದ ಸಿಗರೇಟಿನ ಹೊಗೆ ಜಾಜಿಯ ಮೋಹಕತೆಗೆ ದಾರಿಮಾಡಿ ಕೊಡುತ್ತದೆ. ಪ್ರಭಾಕರ ಮತ್ತು ಶಂಕರ ಇವರಿಬ್ಬರ ಅಂತರ ಕ್ಲಿಷ್ಟವಾದುದು. ಶಂಕರನ ಪ್ರಪಂಚ ಸೀಮಿತವಾದುದು. ಅವನಿಗೆ ಅವನ ಉದ್ಯೋಗ, ಪಾರ್ಟಿ, ಬಡ್ತಿ ಇವೇ ಮುಖ್ಯ. ಆದರೆ ಪ್ರಭಾಕರ ಒಬ್ಬ ಕಾರ್ಮಿಕ ನಾಯಕ. ಜನತೆಯ ಹಿತಕ್ಕಾಗಿ ಹೋರಾಡಿ ಜೈಲುವಾಸ ಅನುಭವಿಸಿದವನು. ಆತ ಜೊತೆಗೆ ಕನಸುಗಾರ, ಆದರ್ಶಜೀವಿ, ಆದರೆ ನಾಯಕಿ ಪದ್ಮ ಒಂದು ರೀತಿಯ ದುರಂತದಲ್ಲಿಯೇ ಬದುಕನ್ನು ನಡೆಸುತ್ತಾಳೆ. ಗಂಡ ಶಂಕರ ಅವಳ ಅಂತರಂಗವನ್ನು ತುಂಬಲಾರ. ತಾನು ನಿಜವಾಗಿ ಪ್ರೀತಿಸಿದ ಪ್ರಭಾಕರನನ್ನು

ಮದುವೆಯಾಗುವ ಧೈರ್ಯ. ಪದ್ಮಳಿಗೆ ಇಲ್ಲ. ಈ ಇಬ್ಬಂದಿತನದಲ್ಲಿಯೇ ಅವಳ ವಿಫಲತೆ ಎದ್ದು ಕಾಣುತ್ತದೆ.

ಪರಂಪರಾಗತ ಸ್ತ್ರೀ ಪುರುಷ ಅಸಮಾನತೆಯಿಂದ ಸ್ತ್ರೀಯರಿಗೆ ಎದುರಾಗುವ ಸಮಸ್ಯೆಗಳು ಅವರು ಪ್ರಜ್ಞಾಪೂರ್ವಕವಾಗಿಯೇ ಪರಂಪರೆಯನ್ನು ಧಿಕ್ಕರಿಸಿ ಕೈಗೊಳ್ಳುವ ನಿಲುವುಗಳನ್ನು ನೇಮಿಚಂದ್ರ ಅವರು ಆಧುನಿಕ ಬದುಕಿನ ನೆಲೆಯಲ್ಲಿ ಚಿತ್ರಿಸುತ್ತಾರೆ. ಸ್ತ್ರೀವಾದಿ ಚಿಂತನೆಯಿಂದಲೇ ಮೂಡಿಬರುವ ಇವರ ಕಥೆಗಳಲ್ಲಿ ಸ್ತ್ರೀಯರ ಸ್ಥಿತಿಗತಿಗಳು ಹಾಗೂ ಅವರಿಗೆ ಎದುರಾಗುವ ನಿರ್ಬಂಧಗಳ ಬಗ್ಗೆ ಸ್ಪಷ್ಟ ತಿಳುವಳಿಕೆ ಇದೆ. ಸ್ತ್ರೀವಾದಿ ಚಿಂತನೆಗಳನ್ನು ಪ್ರತಿನಿಧಿಸುವಂತಹ ಪಾತ್ರ, ಸನ್ನಿವೇಶ, ಸಂಭಷಣೆಗಳನ್ನು ಅವರು ಕಥೆಯಲ್ಲಿ ಬಿಂಬಿಸುತ್ತಾರೆ. ಕಾಳಜಿಯ ದೃಷ್ಟಿಯಿಂದ ಮೆಚ್ಚಬೇಕಾದ ಕಥೆಗಳನ್ನು ಬರೆದಿರುವ ನೇಮಿಚಂದ್ರ ಅವರಲ್ಲಿ ಹೊಸ ಹೊಸ ವಸ್ತುಗಳನ್ನು ಪ್ರಸ್ತುತಪಡಿಸುವ ಮೂಲಕ ಕಥೆಗಳ ಜಾಡನ್ನು ಬದಲಾಯಿಸುವ ಯತ್ನ ಕಾಣುತ್ತದೆ.

ವೀಣಾ ಶಾಂತೇಶ್ವರ ಅವರ ಕಥೆಗಳ ನಾಯಕಿಯರು ಪರಂಪರಾಗತ ಅಸಮಾನತೆಗಳ ಬಗ್ಗೆ ಎಚ್ಚರವಿರುವ ತಮ್ಮ ಬದುಕಿನ ನಿರ್ಧಾರವನ್ನು ತಾವೇ ಕೈಗೊಳ್ಳುವ ಸಾಮರ್ಥ್ಯದ ದಿಟ್ಟ ನಿಲುವಿನವರು. ಇವರ ಮೂಲಕ ಹೆಣ್ಣಿನ ಇತ್ಯಾತ್ಮಕ ಮಾದರಿಗಳನ್ನು ನಮ್ಮ ಮುಂದಿಡುತ್ತಾರೆ. ಇವರ 'ಹೀಗೊಂದು ಕಥೆ', ಕಥಾನಾಯಕಿಯ ಸ್ವತಂತ್ರ ನಿಲುವನ್ನು ಪ್ರತಿಪಾದಿಸುವಂತೆಯೇ ಪುರುಷನ ಅಹಂ ಪ್ರಜ್ಞೆ ಎಲ್ಲ ಸಂದರ್ಭದಲ್ಲೂ ಪ್ರಕಟವಾಗದಿದ್ದರೂ ಸುಪ್ತವಾಗಿಯಂತೂ ಇದ್ದೇ ಇದ್ದು ತನಗೆ ಧಕ್ಕೆಯಾಗುವಾಗ ಹೇಗೆ ಎಲ್ಲಾ ಮುಖವಾಡಗಳನ್ನು ಕಿತ್ತೊಗೆದು ಮೇಲೆದ್ದು ನಿಲ್ಲುತ್ತದೆ ಎಂಬುದನ್ನು ಧ್ವನಿಸುತ್ತದೆ. ಅವರ 'ಬಿಡುಗಡೆ' ಕಥೆಯ ನಾಯಕಿ ಕ್ರೂರಿಯೂ ಅಹಂಕಾರಿಯೂ ಆದ ಗಂಡ ಸತ್ತಾಗ ಹೊರಗೆ ದುಃಖಿಸಿದಂತೆ ನಟಿಸಿದರೂ ಅಡುಗೆಮನೆಗೆ ಹೋಗಿ ಹಾಲು ಕುಡಿದು ಸ್ವಸ್ಥವಾಗಿ ಮಲಗುತ್ತಾಳೆ. ''ಕೊನೆಯ ದಾರಿ'' ಕಥೆಯಲ್ಲಿ ಪರಸ್ತ್ರೀ ಸಂಗಕ್ಕೆ ಹಾತೊರೆಯುವ ಪುರುಷರು, ಜವಾಬ್ದಾರಿ ಹೊರುವ ಸಂದರ್ಭದಲ್ಲಿ ಎಷ್ಟು ತರ್ಕಬದ್ಧವಾಗಿ ನುಣುಚಿಕೊಳ್ಳುತ್ತಾರೆ ಎಂಬುದನ್ನು ಕುತೂಹಲದಿಂದ ಗಮನಿಸುತ್ತ ತನಗೆ ತಕ್ಕ ಸಂಗಾತಿಯನ್ನು ಅರಸುತ್ತಾ ಹೋಗುವ ಮುಕ್ತ ನಿಲುವಿನ ಹೆಣ್ಣಿನ ಚಿತ್ರವಿದೆ. ಲೈಂಗಿಕ ವಿಷಯಗಳ ಬಗ್ಗೆ ಹೆಣ್ಣಿನ ಆಲೋಚನೆ ಯಾವ ರೀತಿ ಇರುತ್ತದೆ ಎಂಬುದರ ಒಂದು ದಿಟ್ಟ ಚಿತ್ರಣವೂ ಇಲ್ಲಿದೆ.

ಗಂಡು ಹೆಣ್ಣಿನ ಸಂಬಂಧಗಳು ಎಲ್ಲಾ ಕಥೆಗಾರ್ತಿಯರಿಗೂ ಸಾಮಾನ್ಯ ವಸ್ತುವಾಗಿರುವುದುಂಟು ಹಾಗೆ ನೋಡಿದರೆ ಈ ವಸ್ತುವನ್ನು ನಿರ್ವಹಿಸದ ಕಥೆಗಾರ ಅಥವಾ ಕಥೆಗಾರ್ತಿ ಇಲ್ಲ. ನೇಮಿಚಂದ್ರರ ಹೊಸಹುಟ್ಟು' ಮೂಲಕ ಹೇಮಾ ಪಟ್ಟಣಶೆಟ್ಟಿರವರ 'ನಾಯಕ ಹುಟ್ಟಿದನೋ'ಕಮಲಾ ಹೆಮ್ಮಿಗೆಯವರ 'ನಾನು ಅವನು ಮತ್ತು ಅವಳು'ತುಳಸಿ ವೇಣುಗೋಪಾಲರ 'ತಪ್ತರು' ಎಚ್. ಗಿರಿಜಮ್ಮನವರ 'ಕೇವಲ ಮನುಷ್ಯರು' ಉಮಾರಾವ್ ಅವರ ದೇಹಾಂತ ಮುಂತಾದ ಕಥೆಗಳಲ್ಲಿ ಕಾಣಿಸಿಕೊಳ್ಳುವ ಈ ಹೆಣ್ಣು ಗಂಡಿನ ನಡುವಿನ ಸಂಬಂಧಗಳು ವೈಶಿಷ್ಟ್ಯ ಪೂರ್ಣವಾಗಿವೆ. ವಿವಿಧ ನಿಟ್ಟಿನಿಂದ ಈ ಸಂಬಂಧಗಳ ಶೋಧನೆಗೆ ಈ ಕಥೆಗಾರ್ತಿಯರು ತೊಡಗುವುದನ್ನು ಕಾಣಬಹುದು.

ನೇಮಿಚಂದ್ರರ ಕಥೆಗಳು ಸ್ತ್ರೀಶಕ್ತಿ ಬಿಂಬಿಸುವ ಕಥೆಗಳಾಗಿ ಕಾಣಿಸಿಕೊಳ್ಳುತ್ತವೆ. ಹೆಣ್ಣು ಎಂದರೆ ಬರೀ ಹೆರುವುದಕ್ಕೆ ಮಾತ್ರ ಇರುವವಳಲ್ಲ. ಅವಳಿಗೂ ಅವಳದೇ ಆದ ಹೆಣ್ಣುತನದ ವ್ಯಕ್ತಿತ್ವ, ಸ್ವಾತಂತ್ರ್ಯ, ಜವಾಬ್ದಾರಿಗಳು ಇರುತ್ತವೆ ಎಂಬ ತತ್ವವನ್ನು ನೇಮಿಚಂದ್ರರ ಕಥೆಗಳು ಧ್ವನಿಪೂರ್ಣವಾಗಿ ಚಿತ್ರಿಸುತ್ತವೆ. ಕುಸುಮಾ ಅವರ ಪ್ರಕೃತಿ ಸಂಕಲನದ ಕಥೆಗಳು ಹಳ್ಳಿಯಲ್ಲಿ ನಡೆಯುವ ರಾಜಕೀಯ ವಿದ್ಯಮಾನಗಳನ್ನು ಹೆಣ್ಣೊಬ್ಬಳ ಕಣ್ಣಿನಿಂದ ನೋಡಿ ಚಿತ್ರಿಸುತ್ತವೆ. ವಿದ್ಯೆಗಾಗಿ ಹಳ್ಳಿಯಲ್ಲಿ ಹೆಣ್ಣುಮಕ್ಕಳು ಪರದಾಡುವ ಸ್ಥಿತಿ, ಅವರು ಎದುರಿಸುವ ಸಾಮಾಜಿಕ ಪ್ರಶ್ನೆಗಳು, ರಾಜಕಾರಣದ ಪ್ರಭಾವದಿಂದ ಹಳ್ಳಿಗಳಲ್ಲಿ ಉಂಟಾಗುವ ವಿಘಟನೆಗಳು ಇವು ಇವರ ಕಥೆಗಳಲ್ಲಿ ಶೋಧನೆಗೆ ಒಳಗಾಗಿವೆ.

ಬದಲಾದ ಅಥವಾ ಬದಲಾಗುತ್ತಿರುವ ಸಾಮಾಜಿಕ ಸಂದರ್ಭದಲ್ಲಿ ವ್ಯತ್ಯಾಸವಾದಾಗ ಸ್ತ್ರೀಯ ಸ್ಥಾನಮಾನಗಳು ಮತ್ತು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಈ ಕಾರಣದಿಂದ ವ್ಯಕ್ತವಾಗುವ ದ್ವಂದ್ವ ಸಂಬಂಧಗಳು ಅನೇಕ ಸಂಕೀರ್ಣ ಸಮಸ್ಯೆಗಳನ್ನು ಸೃಷ್ಟಿಸಿದೆ. ಇಂತಹ ಅವಸ್ಥೆಗೆ ಮಹಿಳಾ ಚಳುವಳಿಗಳು ಬಹುಮಟ್ಟಿಗೆ ಕಾರಣವೆನ್ನಬಹುದು. ಇಂತಹ ಸಮಸ್ಯೆಗಳನ್ನು ಮಾಲತಿ ಪಟ್ಟಣಶೆಟ್ಟಿ ಅವರ ಕಥೆಗಳು ವಿಶ್ಲೇಷಣೆಗೆ ಒಳಗು ಮಾಡುತ್ತವೆ. ಕಮಲಾ ಹೆಮ್ಮಿಗೆ ಅವರ ಕಥೆಗಳು ವೈವಾಹಿಕ ವಿರಸವನ್ನೇ ಚಿತ್ರಿಸಿದರೂ ಸ್ತ್ರೀ ಮತ್ತು ಕಥೆಗಳೂ ಸಹ ಬದುಕಿನ ಬಗ್ಗೆ ಭವಿಷ್ಯವನ್ನೂ

ಪರಿವರ್ತನೆಯನ್ನೂ ಪ್ರತಿಪಾದಿಸುತ್ತದೆ. ಇದು ಗುಣಾತ್ಮಕವಾದ ಅಂಶವಾಗಿದೆ. ಆದರೆ ಉಮಾರಾವ್ ಅವರ ಕಥೆಗಳಲ್ಲಿ ಭಿನ್ನವಾದ ಅರ್ಥಗಳನ್ನು ಹೊರಡಿಸುತ್ತವೆ.

ಈ ದಶಕದಲ್ಲಿ ಕಾಣಿಸಿಕೊಂಡ ಮಹಿಳಾ ಲೇಖಕಿಯರಲ್ಲಿ ಎಚ್. ನಾಗವೇಣಿ, ಮಿತ್ರಾ ವೆಂಕಟ್ರಾಜ್ ಎಂ.ಎಸ್. ವೇದಾ ಇವರ ಕಥೆಗಳಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವಿನ ಸಂಬಂಧದ ಆಳದ ಅರಿವನ್ನು ಅರ್ಥೈಸುತ್ತವೆ. ಇವು ಕುಟುಂಬದ ಸಂದರ್ಭದಲ್ಲಿ ಘಟಿಸುವ ಅನೇಕ ಅರ್ಥಪರಂಪರೆಗಳನ್ನು ಸಂಯಮದ ಧಾಟಿಯಲ್ಲಿ ನಿರೂಪಿಸುತ್ತವೆ. ಇಲ್ಲಿ ಪ್ರೀತಿ, ಪ್ರೇಮ, ವಾತ್ಸಲ್ಯ, ದಕ್ಷತೆ, ಲೈಂಗಿಕ ಸಂಬಂಧಗಳ ಬಗೆಗಿನ ಸಾಂಪ್ರದಾಯಿಕ ನಂಬುಗೆಗಳು ಹೊಸ ಅರ್ಥವನ್ನು ಪಡೆದುಕೊಳ್ಳುತ್ತವೆ.

ಎಪ್ಪತ್ತರ ದಶಕದಲ್ಲಿ ನಡೆದ ಜನಪರ ಹೋರಾಟಗಳು ದೇಶದ ರಾಜಕೀಯ ಸಾಮಾಜಿಕ ಬದುಕಿನಲ್ಲಿ ಮಾತ್ರವೇ ಅಲ್ಲ ಸಾಹಿತ್ಯ ಕ್ಷೇತ್ರದಲ್ಲಿಯೂ ಮಹತ್ತರ ಬದಲಾವಣೆಗಳನ್ನು ಉಂಟುಮಾಡಿದ ಪರಿಣಾಮವಾಗಿ ದಲಿತ, ಬಂಡಾಯ ಸಾಹಿತ್ಯಗಳ ಪರಂಪರೆ ಆರಂಭವಾಯಿತು. ಶೋಷಿತ ಕೆಳವರ್ಗ, ಕೆಳಜಾತಿಗಳವರ ಬದುಕು ಬವಣೆಗಳನ್ನು ಚಿತ್ರಿಸುತ್ತಲೇ ಅವರ ಸ್ಥಿತಿಯಲ್ಲಿ ಬದಲಾವಣೆ ಉಂಟು ಮಾಡಬೇಕೆಂಬ ಆಶಯವನ್ನು ಈ ಸಾಹಿತ್ಯ ಪ್ರತಪಾದಿಸಿತು. ಈ ಅರಿವಿನಿಂದ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿದವರಲ್ಲಿ ಬಹುತೇಕ ಮಂದಿ ಆಯಾವರ್ಗ ಜಾತಿಗಳಿಗೆ ಸೇರಿದವರೇ ಆಗಿದ್ದರು. ಈ ಸಾಹಿತ್ಯ ಮಾರ್ಗಗಳ ಪ್ರಭಾವ ಲೇಖಕಿಯರ ಮೇಲೆ ಆಗದೇ ಇರಲಿಲ್ಲ. ೭೦ರ ವರೆಗಿನ ಸಾಹಿತ್ಯ ಸಂದರ್ಭದಲ್ಲಿ ಬೆರಳೆಣಿಕೆಯಷ್ಟು ಲೇಖಕಿಯರನ್ನು ಬಿಟ್ಟರೆ ಉಳಿದವರೆಲ್ಲರೂ ಮೇಲುಜಾತಿಗೆ ಸೇರಿದವರು. ಮಧ್ಯಮವರ್ಗದ ಹಿನ್ನೆಲೆ ಉಳ್ಳವರು. ಆದರೆ ಈಗ ಸಮಾಜದ ಕೆಳಜಾತಿ, ಕೆಳವರ್ಗಗಳಿಂದಲೇ ರೂಪುಗೊಂಡ ಲೇಖಕಿಯರು ತಮ್ಮ ಹಾಗೂ ತಮ್ಮವರ ಬದುಕಿಗೆ ದನಿಯಾಗಿದ್ದು ಒಂದು ಮಹತ್ವದ ಬೆಳವಣಿಗೆ.

ಇವರ ಬರಹಗಳಿಂದಾಗಿ ವಿಭಿನ್ನ ಲೋಕದ ಮಹಿಳಾ ಸಂವೇದನೆಗಳು ಕೂಡಿಕೊಂಡು ಲೇಖಕಿಯರ ಸಾಹಿತ್ಯಕ್ಕೆ ಹೊಸ ಆಯಾಮ ಬಂದಂತಾಯಿತು. ಈ ಗುಂಪಿನಲ್ಲಿ ಪ್ರಧಾನವಾಗಿ ಕೇಳಿಬರುವ ಹೆಸರುಗಳೆಂದರೆ ಗೀತಾ ನಾಗಭೂಷಣ, ಲಲಿತಾನಾಯಕ್, ಕಮಲಾ ಹಂಪನಾ, ಸರಸ್ವತಗೌಡ, ಮಲ್ಲಿಕಾಘಂಟಿ, ಶೈಲಜಾ ಉಡುಚಣ, ಎಂ.ಎಸ್. ವೇದಾ ಮೊದಲಾದವರು. ಇಲ್ಲಿ ಹೆಚ್ಚಿನವರಿಗೆ ಸ್ತ್ರೀಯ

ಸಾಮಾಜಿಕತೆಯೇ ಮುಖ್ಯವಾದ ವಸ್ತುವಾಗಿದೆ. ಅಂದರೆ ಲಲಿತಾ ನಾಯಕ್, ಗೀತಾ ನಾಗಭಷಣ ಕೆಳವರ್ಗ ಅಥವಾ ಕೆಳಜಾತಿಗಳಿಂದ ಬಂದ ಹೆಣ್ಣು ಮಕ್ಕಳಾಗಿದ್ದರೂ ವೈಯಕ್ತಿಕ ನೆಲೆಯಲ್ಲಿ ತಾವು ಅನುಭವಿಸಿರಬಹುದಾದ ಅಪಮಾನ, ಇಕ್ಕಟ್ಟುಗಳ ಚಿತ್ರಣ ಇಲ್ಲ. ಗೀತಾ ನಾಗಭೂಷಣ ಅವರ ಆತ್ಮಕಥೆಯಲ್ಲಿ ಮಾತ್ರ ತಾವು ಅನುಭವಿಸಿದ ಅಂತಹ ಅವಮಾನಗಳ ಕೆಲವು ಘಟನೆಗಳನ್ನು ನಿರೂಪಿಸಿದ್ದಾರೆ.

ಅನಕ್ಷರತೆ, ಮೂಢನಂಬಿಕೆ, ಬಡತನ, ಅಜ್ಞಾನಗಳು ತಾಂಡವವಾಡುವ ಹೈದ್ರಾಬಾದ್ ಕರ್ನಾಟಕ ಪ್ರ ದೇಶದಿಂದ ಬಂದ ಗೀತಾ ನಾಗಭೂಷಣ ಅವರು ಬಂಡಾಯ ಲೇಖಕಿಯರಲ್ಲಿ ಬಹಳ ಗಮನ ಸೆಳೆಯುತ್ತಾರೆ. ದೇವಿಯ ಹೆಸರಿನ ಮೇಲೆ ನಡೆಸುವ ಸೂಳೆಗಾರಿಕೆ, ನಿರ್ಗತಿಕ ಹೆಂಗಸರ ಮೇಲೆ ನಡೆಯುವ ದೌರ್ಜನ್ಯ, ದಬ್ಬಾಳಿಕೆ, ಲೈಂಗಿಕ ಶೋಷಣೆ, ಮೂಢನಂಬಿಕೆ, ಹಳ್ಳಿಯ ಅಮಾಯಕ ಅನಕ್ಷರಸ್ಥ ಹೆಂಗಸರ ಶೋಷಣೆ, ಸಂಕಟಗಳೇ ಇವರ ಬರಹಕ್ಕೆ ಬೇರುಗಳು, ಗುಲ್ಬರ್ಗಾ ಪರಿಸರದ ಕೆಳವರ್ಗದ ಜನರಲ್ಲಿ ಬಳಕೆಯಲ್ಲಿರುವ ಆಡುನುಡಿಯ ಸೊಗಡ ಹಾಗೂ ಪ್ರಾದೇಶಿಕ ಸಂಸ್ಕೃತಿಯ ಎಲ್ಲಾ ವಿವರಗಳನ್ನೂ ಇವರ ಬರವಣಿಗೆ ಅತ್ಯಂತ ಪರಿಣಾಮಕಾರಿಯಾಗಿ ಸೆರೆ ಹಿಡಿದಿದೆ.

ಲಂಬಾಣಿ ಬುಡಕಟ್ಟಿನ ಹಿನ್ನೆಲೆಯಿಂದ ಬಂದ ಲಲಿತಾನಾಯಕ್ ತಮ್ಮ ಜನಾಂಗದ ಜನರ ಕಷ್ಟ ಸುಖಗಳನ್ನು ಮತ್ತು ಬುಡಕಟ್ಟಿನ ಜನವಾದರೂ ಇಲ್ಲಿಯೂ ಮಹಿಳೆಯು ಶೋಷಿತಳಾಗುವುದನ್ನು ಕಂಡವರು. ಮತ್ತು ಅನುಭವಿಸಿದವರು. ಇದಲ್ಲದೆ ಕರ್ನಾಟಕದ ತೀರ ಹಿಂದುಳಿದ ರಾಯಚೂರು ಜಿಲ್ಲೆಯವರಾದ ಕಾರಣ ಇಲ್ಲಿನ ಜನರಲ್ಲಿ ತಾಂಡವವಾಡುವ ಅನಕ್ಷರತೆ, ಅನಾರೋಗ್ಯ, ಬರಗಾಲ, ಹಸಿವೆ, ಬಡತನಗಳ ನೋವು ಸಂಕಟಗಳನ್ನು ಸಮೀಪದಿಂದ ಕಂಡವರು ಮತ್ತು ಇಂತಹ ದುಃಸ್ಥಿತಿಯನ್ನು ಕೊನೆಗಾಣಿಸುವ ಹೋರಾಟಗಳಲ್ಲಿ ಭಾಗವಹಿಸುತ್ತಲೇ ರಾಜಕೀಯ ಕ್ಷೇತ್ರಕ್ಕೂ ಇಳಿದರು. ಇವರ ಕಥೆ, ಕಾದಂಬರಿ, ಕಾವ್ಯದಲ್ಲಿ ಶೋಷಣೆಗೊಳಗಾದ ಎಲ್ಲ ಜನರ ಬದುಕೂ ಇದೆ. ವ್ಯವಸ್ಥೆಯನ್ನು ನೇರವಾಗಿ ಟೀಕಿಸುವ ದಿಟ್ಟ ನಿಲುವು ಹಾಗೂ ಸಾಮಾಜಿಕ ಬದ್ಧತೆ ಲಲಿತಾನಾಯಕ್ ಬರಹಗಳ ವೈಶಿಷ್ಟ್ಯ. ಕೋಪ ಸಿಟ್ಟ ವೈಚಾರಿಕತೆ ಪ್ರಾದೇಶಿಕತೆಗಳೆಲ್ಲವೂ ಬೆರೆತ ವಿಶಿಷ್ಟ ಶೈಲಿ ಅವರ ಸಾಹಿತ್ಯದಲ್ಲಿದೆ. ಕನ್ನಡದಲ್ಲಿ ಮೊಟ್ಟಮೊದಲ ಬಾರಿಗೆ ಬುಡಕಟ್ಟು ಸಮಾಜವೊಂದರ ಅನಿಸಿಕೆಗಳಿಗೆ ದನಿಕೊಟ್ಟ ಲೇಖಕಿಯಾಗಿ ಲಲಿತಾನಾಯಕ್ ಮುಖ್ಯವಾಗುತ್ತಾರೆ.

ಮೈಸೂರಿನ ಟಿ. ನರಸೀಪುರ, ಚಾಮರಾಜನಗರ, ತಲಕಾಡು ಪರಿಸರದ ಕನ್ನಡ ಪ್ರಬೇಧವನ್ನು ಬಳಸಿ ತಮ್ಮ ಬಹುತೇಕ ಕಥೆಕಾದಂಬರಿಗಳನ್ನು ರಚಸಿರುವ ವೇದಾ ಅವರ 'ಪ್ರೀತಿ ಮತ್ತು ಸಾವು' ಎಂಬ ಕಥಾ ಸಂಕಲನದಲ್ಲಿ ಜಮೀನು ಎಂಬ ಕಾದಂಬರಿಯಲ್ಲಿ ಅವರ ದಲಿತ ಸಂವೇದನೆ ಹಾಗೂ ಕಾಳಜಿಗಳನ್ನು ಗುರುತಿಸಬಹುದು. 'ಕುಯ್ಯನೆಂಬ ಬಾಲಕನ ಕತ್ತಲ ಲೋಕವೂ'' ಕಥೆ ಜಾತಿಪದ್ಧತಿಯ ಅಮಾನುಷ ಕ್ರೌರ್ಯವನ್ನು ಧ್ವನಿಸುತ್ತದೆ. ಇಲ್ಲಿ ಪರಿವಾರದ ಹುಡುಗ ಕುಯ್ಯನು ನಾಟಕದಲ್ಲಿ ಅಭಿಮನ್ಯುವಿನ ಪಾತ್ರ ಗಿಟ್ಟಿಸಿದ್ದೆ ಮೇಲು ಜಾತಿಯವರ ಕಣ್ಣು ಕೆಂಪಾಗಲು ಕಾರಣ. ಈ ಅಸೂಯೆಯ ಕಿಡಿ ಒಳಗೊಳಗೇ ಜ್ವಲಿಸುತ್ತಾ ಕುಯ್ಯುನ ಪ್ರಾಣಕ್ಕೂ ಸಂಚಕಾರ ಒಡ್ಡುವಂತಹ ದುರಂತದಲ್ಲಿ ಪರ್ಯಾವಸಾನವಾಗುತ್ತದೆ. ಲೇಖಕಿ ಈ ಕಥೆಯಲ್ಲಿ ಗ್ರಾಮೀಣ ಬದುಕಿನ ರೀತಿ ನೀತಿಗಳು, ಅವರ ಮಾತಿನ ಶೈಲಿ, ಜಾತಿಪದ್ಧತಿಯ ಅಮಾನುಷ ಕ್ರೌರ್ಯ, ಪರಿವಾರದ ಹುಡುಗನನ್ನು ಕುರಿತ ಅನುಕಂಪ ಇವೆಲ್ಲವನ್ನೂ ಹೇಗೆ ಬೆಸೆದಿದ್ದಾರೆಂದರೆ ಅವರು ಇಂಥದ್ದಕ್ಕೇ ಪ್ರಾಮುಖ್ಯತೆ ಕೊಟ್ಟಿದ್ದಾರೆ ಎಂದು ಎಲ್ಲಿಯೂ ಅನ್ನಿಸುವುದಿಲ್ಲ. ಕುಯ್ಯನ ಪಾತ್ರವೂ ಸಹ ಹೀಗೆ ಇದೆ. ಮುಗ್ಧತೆ, ಪೆದ್ದುತನ, ಬಡತನ, ಸೋಮಾರಿತನ, ನಾಟಕದಲ್ಲಿ ಅಭಿನಯಿಸುವ ಆಸೆ ಎಲ್ಲವೂ ಸೇರಿ ಒಬ್ಬ ಕುಯ್ಯ ಆಗಿದ್ದಾನೆ. ಇಷ್ಟಲ್ಲದೆ ಇಡೀ ಕಥೆಯ ವಸ್ತುವಿನ ಗ್ರಹಿಕೆ ಮತ್ತು ವಿಶ್ಲೇಷಣೆಯಲ್ಲಿ ನಮ್ಮ ಹೆಚ್ಚಿನ ಲೇಖಕಿಯರಲ್ಲಿ ಕಂಡುಬರುವ ಒದು ವಿಶೇಷ ಪ್ರಬುದ್ಧತೆ ವೇದಾ ಅವರ ಬರವಣಿಗೆಯಲ್ಲಿ ಕಾಣುತ್ತದೆ.

ಬಂಡಾಯ ಸಾಹಿತ್ಯ ಎಂಬುದಕ್ಕೆ ಒಂದು ಹೊಸ ಅರ್ಥವನ್ನೇ ಕೊಟ್ಟವರು ಮುಸ್ಲಿಂ ಲೇಖಕಿಯರು, ಮುಸ್ಲಿಂ ಲೇಖಕಿಯರು ಬರೆಯತೊಡಗಿದ್ದು, ಮಹಿಳಾ ಸಾಹಿತ್ಯಕ್ಕೆ ಮಾತ್ರವಲ್ಲ ಕನ್ನಡ ಸಾಹಿತ್ಯಕ್ಕೂ ಒಂದು ವಿಶಿಷ್ಟ ಕೊಡುಗೆ. ಒಂದರ್ಥದಲ್ಲಿ ನಿಜವಾದ ಬಂಡಾಯ ಸಾಹಿತ್ಯ ಎಂದರೆ ಮುಸ್ಲಿಂ ಮಹಿಳೆಯರು ಬರೆದ ಸಾಹಿತ್ಯ ಎಂದೇ ಹೇಳಬಹುದು. ಯಾಕೆಂದರೆ ಇತರೆ ಬಂಡಾಯ ಸಾಹಿತಿಗಳಲ್ಲಿ ಬಂಡಾಯವಿರುವುದು ಬರವಣಿಗೆಯಲ್ಲಿ ಮಾತ್ರ. ಇಲ್ಲಿ ಅವರು ಏನೇ ಬರೆದರೂ ನಿರ್ಭಯವಾಗಿ ಬರೆಯಬಹುದು. ವೈಯಕ್ತಿಕವಾದ ಯಾವುದೇ ಒತ್ತಡ, ಅಪಾಯಗಳಿಗೆ ಅವರು ತುತ್ತಾಗುವುದಿಲ್ಲ. ಆದರೆ ಮುಸ್ಲಿಂ ಸಾಹಿತಿಗಳ, ಅದರಲ್ಲಿಯೂ ಲೇಖಕಿಯರ ವಿಷಯ ಇದಕ್ಕೆ ತೀರಾ ಭಿನ್ನ. ಅವರ ಬರವಣಿಗೆಯೇ ಒಂದು ಬಂಡಾಯವಾಗಿದೆ.

ಧರ್ಮ ಹಾಗೂ ಧರ್ಮದಿಂದ ರೂಪಿತವಾದ ಕಟ್ಟಳೆಗಳು ಪ್ರಶ್ನಾತೀತವಾಗಿರುವಂತಹ ಹೆಂಗಸರನ್ನು ಚಪ್ಪಲಿಯಂತೆ ಬಳಸಿಕೊಳ್ಳಬೇಕು. ಬೇಕಾದಾಗ ಉಪಯೋಗಿಸಿ ಬೇಡವಾದಾಗ ಮೂಲೆಯಲ್ಲಿ ಬಿಟ್ಟು ಬಿಡಬೇಕು ಎಂಬ ಧೋರಣೆ ಇರುವಂತಹ ಹಾಗೂ ಸ್ತ್ರೀಯರು ಧರ್ಮವನ್ನು ಕುರಿತು ಮಾತಾಡುವುದೂ ಕೂಡ ಅನೂಹ್ಯವಾಗಿರುವಂತಹ ವ್ಯವಸ್ಥೆಯಲ್ಲಿ ಅದೇ ಧರ್ಮಕ್ಕೆ ಸೇರಿದವರು ಅದರಲ್ಲಿಯೂ ಮಹಿಳೆಯರು ಈ ಎಲ್ಲಾ ಬಂಧನಗಳನ್ನೂ ಒಮ್ಮೆಲೆ ಮೆಟ್ಟಿ ಮೇಲೆ ಬಂದದ್ದು ಬಂಡಾಯ ಎಂಬ ಪದದ ಅರ್ಥವನ್ನೂ ಮೀರಿದ ನಡವಳಿಕೆಯಾಗಿದೆ. ಇವರ ಪ್ರಯತ್ನದಿಂದಾಗಿ ನಮ್ಮೊಂದಿಗೆ ಇದ್ದೂ ನಮ್ಮ ಕಣ್ಣಿಗೆ ಕಾಣದಂತಿದ್ದ ಸಹ ಜೀವಿಗಳ ಅಂತರಂಗದ ಲೋಕ ನಮ್ಮ ಕಣ್ಣೆದುರಿಗೆ ಬಂತು. ಈ ಜನಾಂಗದ ಬಗೆಗಿದ್ದ ಕೆಲವೊಂದು ತಪ್ಪುತಿಳುವಳಿಕೆಗಳನ್ನು ಸರಿಪಡಿಸುವಲ್ಲಿ, ತಿಳುವಳಿಕೆಯ ಕೊರತೆಯನ್ನು ತುಂಬಿಕೊಡುವಲ್ಲಿ ಗಮನಾರ್ಹ ಪಾತ್ರ ವಹಿಸಿತು. ಮಹಿಳಾ ಸಾಹಿತ್ಯಕ್ಕೆ ಒಂದು ಹೊಸ ಆಯಾಮವನ್ನು ದೊರಕಿಸಿಕೊಟ್ಟಿತು. ಇವರು ತಮ್ಮ ಕೃತಿಗಳ ಮೂಲಕ ಈ ಧರ್ಮದ ಸ್ತ್ರೀ ವಿರೋಧಿ ನೀತಿಗಳು, ಮಾನವ ವಿರೋಧಿ ನೀತಿಗಳು, ಸಂಪ್ರದಾಯ ಮತ್ತು ಆಚರಣೆಗಳ ಅರ್ಥಹೀನತೆ ಹಾಗೂ ಅವುಗಳ ದ್ವಂದ್ವನೀತಿ, ಅಮಾನವೀಯತೆ, ಬಡವರ ಮತ್ತು ದುಡಿಯುವ ವರ್ಗದ ಶೋಷಣೆಗಳನ್ನು ಬಯಲಿಗೆಳೆದಿದ್ದಾರೆ. ಸ್ವತಃ ಈ ಜನಾಂಗದ ಮುಸ್ಲಿಂ ಮಹಿಳೆಯರೂ ಎಚ್ಚೆತ್ತುಕೊಳ್ಳುವಂತೆ ಮಾಡಿದ್ದಾರೆ. ಹಾಗೂ ಬೇರೆ ಜನಸಮುದಾಯಗಳಿಗೆ ಈ ಸಮಾಜದ ಒಳನೋಟಗಳನ್ನು ಒದಗಿಸಿದ್ದಾರೆ.

ಸಾರಾ ಅವರ ನಂತರ ಹೆಸರಿಸಬೇಕಾದ ಲೇಖಕಿ ಬಾನುಮುಷ್ತಾಕ್, ಹೆಜ್ಜೆ ಮೂಡಿದ ಹಾದಿ (೧೯೯೦), ಬೆಂಕಿಮಳೆ (೧೯೯೯) ಎಂಬ ಕಥಾ ಸಂಕಲನಗಳನ್ನೂ, ಸ್ತ್ರೀವಾದಿ ಧೋರಣೆಯ ಹಲವಾರು ಕವಿತೆಗಳನ್ನೂ ಇವರು ಬರೆದಿದ್ದಾರೆ. ಪುರುಷಪ್ರಧಾನ ಸಮಾಜದ ಮೌಲ್ಯಗಳನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲು ಪ್ರಪಂಚದಾದ್ಯಂತ ಧರ್ಮ ಮತ್ತು ದೇವರುಗಳನ್ನು ನಿರಾಯಾಸವಾಗಿ ಬಳಸಿಕೊಳ್ಳಲಾಗಿದೆ ಎಂದು ಹೇಳುತ್ತಾ, ಈ ಬಳಕೆ ತಮ್ಮ ಮುಸ್ಲಿಂ ಜನಾಂಗದಲ್ಲಿ ನಡೆಯುತ್ತಿರುವುದರ ವಸ್ತುನಿಷ್ಠ ಚಿತ್ರಣ ನೀಡಿದ್ದಾರೆ. ಹಾಸ್ಯ ವೈಚಾರಿಕತೆಗಳಂತೆಯೇ ಪ್ರಜ್ಞಾಪೂರ್ವಕವಾದ ಕಥೆಗಾರಿಕೆಯನ್ನು ಇವರ ಬರಹದಲ್ಲಿ ಗುರುತಿಸಬಹುದು. ಸಾರಾ ಅವರಿಗಿಂತ ಭಿನ್ನ ನೆಲೆಯಲ್ಲಿ ಬರೆಯುವ ಇವರು ಮಧ್ಯಮ ಹಾಗೂ ಶ್ರೀಮಂತ ವರ್ಗದ

ಮುಸ್ಲಿಂ ಬದುಕಿನತ್ತ ಕಣ್ಣು ಹಾಯಿಸುತ್ತಾ ಇಲ್ಲಿಯೂ ಸಹ ಪುರುಷರು ತಮಗೆ ದೊರೆತ ಧಾರ್ಮಿಕ ಸವಲತ್ತುಗಳನ್ನು ಹೇಗೆ ಸ್ತ್ರೀಯರ ಶೋಷಣೆಗೆ ಬಳಸಿಕೊಳ್ಳುತ್ತಾರೆ ಎಂಬುದನ್ನು ಚಿತ್ರಿಸುತ್ತಾರೆ.

ಕನ್ನಡ ಸಣ್ಣಕತೆ ರಾಚನಿಕವಾಗಿ ಆರಂಭ ಕಾಲದಿಂದ ಇಂದಿನವರೆಗೆ ಅನೇಕ ರೂಪಾಂತರಗಳನ್ನು ಪಡೆದುಕೊಳ್ಳುತ್ತಾ ಬಂದಿದೆ. ಮಹಿಳಾ ಕಥೆಗಾರ್ತಿಯರ ಕಥೆಗಳಲ್ಲಿ ಸಹ ಕಥೆಯಲ್ಲಿ ಆರಂಭ, ಮಧ್ಯ, ಅಂತ್ಯ ಎಂದು ಆರಂಭದಲ್ಲಿ ಸುಲಭವಾಗಿ ಗುರುತಿಸಬಹುದಾಗಿತ್ತು. ಆದರೆ ಅನಂತರದ ಕಥೆಗಾರ್ತಿಯರು ಇಂತಹ ಕಲ್ಪನೆಯಿಂದ ತುಂಬಾ ದೂರ ಸರಿದಿದ್ದಾರೆ. ತಮ್ಮ ಅನುಭವ, ಗ್ರಹಿಕೆ ಹಾಗೂ ತಿಳುವಳಿಕೆಗೆ ಒಂದು ವಿನ್ಯಾಸವನ್ನು , ಬಂಧವನ್ನು ರೂಪಿಸಿಕೊಳ್ಳುವಲ್ಲಿ ಪ್ರವೃತ್ತವಾಗಿರುವುದು ಇತ್ತೀಚಿನ ಕಥೆಗಾರ್ತಿಯರಲ್ಲಿ ಎದ್ದುಕಾಣುತ್ತದೆ. ವಸ್ತುವನ್ನು ವಿವಿಧ ನೆಲೆಗಳಿಂದ ಪರಿಶೀಲಿಸಿ ಅದಕ್ಕೆ ಅರ್ಥಪೂರ್ಣವಾದ ಅಭಿವ್ಯಕ್ತಿಯನ್ನು ತಂದುಕೊಡುವಲ್ಲಿ ಈ ಕಥೆಗಾರ್ತಿಯವರು ಯಶಸ್ವಿಯಾಗಿದ್ದಾರೆ.

ಕೌಟುಂಬಿಕ, ಔದ್ಯೋಗಿಕ ಬದುಕುಗಳ ನಡುವೆ ಹುಟ್ಟಿಕೊಳ್ಳುವ ತಾಕಲಾಟಗಳು, ಬದಲಾದ ಪರಂಪರಾಗತ ಮೌಲ್ಯಗಳು, ಬದಲಾದ ಬದುಕು ತಂದುಕೊಟ್ಟ ಸ್ವಾತಂತ್ರ್ಯದ ಭಾವನೆಗಳು, ತಲೆಮಾರುಗಳ ಅಂತರ ಸೃಷ್ಟಿಸುವ ಸಮಸ್ಯೆಗಳು ಹೀಗೆ ನಮ್ಮ ಕಥೆಗಳು ಒಳಗೊಳ್ಳಬೇಕಾದ ವಸ್ತು ಇನ್ನೂ ಅಪಾರವಾಗಿದೆ. ಇಂತಹ ಅನುಭವ ಶೋಧಗಳತ್ತ ಲೇಖಕಿಯರ ಗಮನ ಹರಿಯಬೇಕು. ಹಾಗೆ ನೋಡಿದರೆ ಕಥಾವಸ್ತುವಿನ ಪರಿಧಿ ಎಷ್ಟು ವಿಸ್ತರಿಸಬೇಕಾಗಿತ್ತೋ ಅಷ್ಟು ವಿಸ್ತರಿಸಿಲ್ಲ. ನಮ್ಮ ಅನುಭವಗಳಿಗೆ ಕಲೆಯರೂಪ ಕೊಡುವುದು ಇನ್ನೂ ಸಾಧ್ಯವಾಗಿಲ್ಲ. ಪರಂಪರಾಗತ ನಿರೀಕ್ಷೆಗಳನ್ನು ಬದಲಾಯಿಸುವ ಹೊಸ ಮೌಲ್ಯ ಸ್ಥಾಪನೆಗೆ ನೆರವಾಗುವಂಥ ಕಥೆಗಳು ಹೆಚ್ಚಾಗಿ ಬರಬೇಕು. ಹೆಣ್ಣಿನ ಶೀಲವನ್ನು ಕುರಿತ ಅತಿಯಾದ ಕಾಳಜಿ ಆಕೆಯ ಇತರ ಎಲ್ಲಾ ಬೆಳವಣಿಗೆಗಳಿಗೆ ದೊಡ್ಡ ಅಡಚಣೆಯಾಗುತ್ತದೆ. ಶೀಲವೆನ್ನುವುದು ಹೆಣ್ಣಿಗೆ ಮಾತ್ರವೇ ಇರಬೇಕಾದ ಗುಣವೇನೋ ಎಬಂತಾಗಿದೆ. ಇದನ್ನೇ ಪದೇ ಪದೇ ಒತ್ತಿಹೇಳುತ್ತಾ ಮತ್ತೆ ಸ್ಥಾಪಿಸುವ ಕೆಲಸ ನಡೆಯುತ್ತಿದೆ. ಕಥೆಗಳಲ್ಲಿ ಪರಿಸ್ಥಿತಿಯ ಒತ್ತಡಗಳಿಗೆ ಸಿಕ್ಕಿದ ಹೆಣ್ಣಿಗೆ ವೇಶ್ಯೆಯಾಗುವುದೊಂದೇ ದಾರಿ ಎಂಬಂತಹ ಚಿತ್ರಣ ಮತ್ತೆ ಶೀಲವೇ ಅವಳ ಬದುಕಿನ

ಮೌಲ್ಯ ಎಂದು ದೃಢೀಕರಿಸಿದಂತಾಗುತ್ತದೆ. ವಾಸ್ತವವಾಗಿ ಇದು ಎಲ್ಲಾ ಸಂದರ್ಭದಲ್ಲೂ ಇರುವಂತಹ ಸ್ಥಿತಿ ಅಲ್ಲದಿರುವಾಗ ಕಥೆಗಳಲ್ಲಿ ಇದನ್ನು ಅವಳ ಪತನದಂತೆ ಚಿತ್ರಿಸುವುದು ಎಷ್ಟು ಸರಿ ಎಂಬುದರತ್ತ ಲೇಖಕಿಯರು ಪ್ರಜ್ಞಾಪೂರ್ವಕವಾಗಿ ಯೋಚಿಸಬೇಕಾಗಿದೆ.

ಒಟ್ಟಿನಲ್ಲಿ ಏಕಪಕ್ಷೀಯವಾದ ನಿಲುವು, ಪೂರ್ವನಿಶ್ಚಿತ ಧೋರಣೆ ವಸ್ತು ಮತ್ತು ತಂತ್ರಗಳ ಸೀಮಿತತೆ ಮುಂತಾದುವೆಲ್ಲ ಬದುಕನ್ನು ಸಮಗ್ರವಾಗಿ ನೋಡುವುದಕ್ಕೆ ಅಡ್ಡಿಯಾಗುತ್ತವೆ ಎಂಬ ಅರಿವು ಬಹಳ ಮುಖ್ಯ.

ಅಧ್ಯಾಯ - ೩

ವೈದೇಹಿಯವರ ಕಥೆಗಳಲ್ಲಿ ಮೂಡಿ ಬಂದಿರುವ ಹೆಣ್ಣಿನ ಅಂತರಂಗ

ವೈದೇಹಿಯವರ ಬಹುತೇಕ ಕಥೆಗಳ ಕೇಂದ್ರವಸ್ತು ಹೆಣ್ಣು. ಇವರ ಕಥೆಗಳಲ್ಲಿ ಸ್ತ್ರೀಯರ ಅನುಭವ ಲೋಕವನ್ನು ಸಮಾಜದ ಗಮನಕ್ಕೆ ತರುವ ಆಶಯವಿದೆಯೇ ಹೊರತು ಸ್ತ್ರೀಯರ ಮುಖವಾಣಿಯಾಗಿ ಮಾತಾಡುವ ಧೋರಣೆಯಿಲ್ಲ. ಅವರು ಆಯ್ದುಕೊಳ್ಳುವ ವಸ್ತುವಿನಲ್ಲಿಯೇ ಸ್ತ್ರೀಪರ ಧೋರಣೆಗಳಿವೆ. ಸುಮಿತ್ರಾಬಾಯಿ ಯವರು ಹೇಳುವಂತೆ ಹೆಣ್ಣಿನ ಅನುಭವದ ನೆಲೆಯಿಂದ ಬದುಕಿನತ್ತ ಪರಿಶೀಲನಾತ್ಮಕ ವಾಗಿ ನೋಡುವ ಕಾಳಜಿಯೊಂದು ಈ ಲೇಖಕಿಯ ಒಂದು ಪ್ರಮುಖ ಆಸಕ್ತಿಯಾಗಿ ಕಾಣಿಸಿಕೊಂಡಿದೆ. ಈ ಸ್ತ್ರೀ ವಿಶಿಷ್ಟ ದೃಷ್ಟಿಕೋನದಿಂದ ಒಂದು ರೀತಿಯ ಅನನ್ಯತೆಯೂ ಅವರ ಕಥೆಗೆ ಉಂಟಾಗಿದೆ. ಹೆಣ್ಣಿನ ಬಗೆಗಿನ ರೂಢಿಗತ ನಂಬಿಕೆ, ಕಲ್ಪನೆ, ಗ್ರಹಿಕೆಗಳನ್ನು ವೈದೇಹಿ ನಿರಾಯಾಸವಾದ ರೀತಿಯಲ್ಲಿ ತೀರಾ ಸಹಜವಾಗಿ ಎಂಬಂತೆ ಬುಡಮೇಲು ಮೂಡಿಬಿಡಬಲ್ಲರು. ವೈದೇಹಿಯವರಿಗೆ ಹೆಣ್ಣಿನ ವ್ಯಕ್ತಿತ್ವ ಸಾಮರ್ಥ್ಯದ ಬಗ್ಗೆ ತುಂಬ ವಿಶ್ವಾಸವಿದೆ. ಅವರು ತಮ್ಮ ಕಥೆಗಳಲ್ಲಿ ಹೆಂಗಸರನ್ನು ವ್ಯಂಗ್ಯ, ಹಾಸ್ಯ ಧೋರಣೆಯಿಂದ ನೋಡುವಂತೆ ಕಂಡರೂ ಅದು ಪುರುಷ ದೃಷ್ಟಿಕೋನವನ್ನು ಟೀಕಿಸುವ' ಉದ್ದೇಶದ್ದೇ ಹೊರತು ಹೆಂಗಸರನ್ನು ಹೀಗಳೆಯುವಂಥದಲ್ಲ. ಸಂದರ್ಶನ ವೊಂದರಲ್ಲಿ ಅವರು ಹೇಳಿದಂತೆ 'ನಮ್ಮ ಅನನ್ಯತೆ ನಮಗಿದೆ. ನಾವು ಅದನ್ನು ಉಳಿಸಿಕೊಳ್ಳಬೇಕು. ನಮ್ಮ ಪ್ರಪಂಚದ ಬಗ್ಗೆ ಕೀಳರಿಮೆ ಅಗತ್ಯವಿಲ್ಲ. ಅವರು ನಮ್ಮಂತಾಗಲಿ, ನಾವು ಅವರಂತಾಗುವ ಅಗತ್ಯ।ವಿಲ್ಲ. ಎನ್ನುವವರೆಗೂ ಸ್ತ್ರೀಲೋಕ, ತತ್ವಶಾಲಿ, ನಾವು ನಮ್ಮಂತೆ, ನಮ್ಮ ಉದ್ದಗಲದ ಮಿತಿಯಂತೆ ಬದುಕಲು ಸಾಧ್ಯವಾದರೆ ಸಾಕು. (ವಿಜಯ ಕರ್ನಾಟಕ. ೧೦.೩..೨೦೦೩)

ವೈದೇಹಿಯವರ ಒಟ್ಟು ಸಾಹಿತ್ಯವನ್ನು ಸ್ಥೂಲವಾಗಿ ವಸ್ತುವನ್ನು ಆಧಾರವಾಗಿಟ್ಟುಕೊಂಡು ಎರಡು ವಿಭಾಗಗಳಲ್ಲಿ ಗುರುತಿಸಬಹುದು. ಒಂದು ಸ್ತ್ರೀಲೋಕದ ಸೂಕ್ಷ್ಮಗಳ ಹುಡುಕಾಟ, ಎರಡನೇಯದು ಬದುಕಿನ ಹೋರಾಟವನ್ನು

ಹೆಣ್ಣು ಎದುರಿಸುವ ಬಗೆ, ವೈದೇಹಿಯವರ ಸಾಹಿತ್ಯದ ಮೂಲ ನಲೆ ಎಂದರೆ ಬದುಕನ್ನು ಕುರಿತ ನಿರಂತರವಾದ ಶ್ರದ್ಧೆ, ಎಂತಹ ಬಿಕ್ಕಟ್ಟಿನ, ಸಂಕಷ್ಟದ ಹೊತ್ತಿನಲ್ಲಿಯೂ ಬದುಕಿಗೆ ಬೆನ್ನು ತಿರುಗಿಸಿದ ಪಾತ್ರಗಳು, ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ. ವೈದೇಹಿ ಸ್ತ್ರೀವಾದದ ನೇರ ಪ್ರತಿಸ್ಪಧಿ ಮೂಲವಾದ ದಾರಿಯನ್ನು ಅವರ ಸಾಹಿತ್ಯದಲ್ಲಿ ಬಳಸುವುದೇ ಇಲ್ಲ. ಹೆಣ್ಣನ್ನು ಅವಳ ಎಲ್ಲಾ ಸಾಧ್ಯತೆಯಲ್ಲಿ ಪರೀಕ್ಷಿಸುತ್ತಲೇ ಬದುಕು ಒಡ್ಡುವ ಎಲ್ಲಾ ಸವಾಲುಗಳನ್ನು ಅವಳು ಎದುರಿಸುವ ವಿವರಗಳನ್ನು ಮಂಡಿಸುತ್ತಲೇ ಪರೋಕ್ಷವಾಗಿ ವ್ಯವಸ್ಥೆಯನ್ನು ಪ್ರಶ್ನಿಸುತ್ತಾ ಹೋಗುತ್ತಾರೆ. ಪುರುಷನಿಗಿಂತ ವ್ಯವಸ್ಥೆ ಮುಖ್ಯವಾಗಿ ಕಾಣಿಸುತ್ತದೆ.

ಈ ರೀತಿ ವೈದೇಹಿಯವರ ಕಥೆಗಳಲ್ಲಿನ ಹೆಣ್ಣಿನ ಅಂತರಂಗವನ್ನು ಕುಟುಂಬ ವ್ಯವಸ್ಥೆ, ದಾಂಪತ್ಯ, ಪಿತೃಪ್ರಧಾನ ವ್ಯವಸ್ಥೆ, ದಾಂಪತ್ಯ ಪಿತೃಪ್ರಧಾನ ವ್ಯವಸ್ಥೆ ಮುಂತಾದ ಸಂದರ್ಭಗಳನ್ನು ಆಯ್ಕೆ ಮಾಡಿಕೊಂಡು ವಿಶ್ಲೇಶಿಸಬಹುದಾಗಿದೆ. ಇದರೊಂದಿಗೆ ವೈದೇಹಿಯವರ ಕಥೆಗಳಲ್ಲಿ ಪ್ರಬುದ್ಧ ಹೆಣ್ಣು. ಈ ಬದುಕನ್ನು ಕುರಿತು ಹೆಣ್ಣಿನ ಪ್ರೀತಿ, ಬದ್ಧತೆ ಶ್ರದ್ಧೆ ಇರುವ ಕಥೆಗಳನ್ನು ಚರ್ಚಿಸಬಹುದಾಗಿದೆ.

೧. ಕುಟುಂಬ ಮತ್ತು ಪಿತೃ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು

ಕೌಟುಂಬಿಕ ಜಗತ್ತಿನ ನಾಲ್ಕು ಗೋಡೆಗಳ ಒಳಗೇ ಬಹುಪಾಲು ಹೆಂಗಸರೊಂದಿಗೆ ನಿಕಟವಾಗಿ ಬದುಕುವುದನ್ನು ಆಯ್ದುಕೊಂಡ ವೃದೇಹಿ. ಈ ಹೆಂಗಸರ ಬವಣೆ, ಕ್ರೌರ್ಯ, ತಮ್ಮೊಳಗೇ ಒಬ್ಬರೊಬ್ಬರಿಗೆ ತೋರುವ ಹಿಂಸೆಗಳ ಒಳ, ಹೊರಮುಖಗಳನ್ನು ಹತ್ತಿರದಿಂದ ಕಂಡವರು. ಈ ಸ್ತ್ರೀ ಲೋಕದ ಅನುಭವದ ಮೂಲಕವೆ ಬದುಕಿನ ಅರ್ಥಗಳನ್ನು ಜಾಲಿಸಲು ಹೊರಟವರು. ಹೀಗಾಗಿ ಹೆಣ್ಣುಮಕ್ಕಳ ಸಾಮಾಜಿಕ ಸ್ಥಿತಿಯಿಂದ ಅವರು ಯಾವ ರೀತಿ ಬದುಕುತ್ತಿದ್ದಾರೆಂದು ಬರವಣಿಗೆಯಲ್ಲಿ ಕಂಡು ಕಾಣಿಸಿಕೊಡುವ ಸಾಕ್ಷಿ ಪ್ರಜ್ಞೆಯ ರೀತಿಯಲ್ಲಿ ಅವರು ಬರಹಕ್ಕೆ ತೊಡಗುತ್ತಾರೆ. ಬದುಕನ್ನು ಇಡಿಯಾಗಿ ಹಿಡಿಯಬೇಕು. ಎಲ್ಲಾ ನಿಜಗಳನ್ನೂ ಕಹಿಗೊಳ್ಳದೆಯೇ ಹೇಳಬೇಕು. ಜಗತ್ತಿಗೆಲ್ಲ ಅವಶ್ಯಕವಾಗಿರುವ ಪ್ರೀತಿಯನ್ನು ಉಳಿಸಿಕೊಳ್ಳುವಂಥ ಬಲ, ಆತ್ಮಶಕ್ತಿಗಳನ್ನು ಬಲಗೊಳಿಸುವತ್ತ ಬರಹ ತುಡಿಯಬೇಕೆಂಬುದು ತಮ್ಮ ಮನದ ಆಶೆಯೆಂದು ವೈದೇಹಿಯವರು ಹೇಳಿದ್ದಾರೆ.

ಭಾರತದ ಸಾಂಸ್ಕೃತಿಕ ಪರಿಸರದಲ್ಲಿ ಹೆಣ್ಣಿನ ಸಾಂಪ್ರದಾಯಿಕ ನೆಲೆಯನ್ನು ವಸ್ತುವಾಗಿಸಿಕೊಳ್ಳುವ ಯಾರೇ ಆದರೂ ಕೌಟುಂಬಿಕ ಸಂಬಂಧಗಳನ್ನು ಚರ್ಚೆಗೆಳೆಯದೆ ಇರುವುದು ಅಸಾಧ್ಯ. ಮಧ್ಯಮವರ್ಗದ ದಾಂಪತ್ಯದ ಚಿತ್ರಗಳು, ಅವುಗಳೊಳಗಿನ ಖುಷಿಗಳು, ಜಗಳಗಳು, ಸಮಸ್ಯೆಗಳು, ಪರಿಹಾರಗಳ ಸರಳ ಸುಕುಮಾರ ವಸ್ತುಗಳು ವೈದೇಹಿಗೂ ಮೊದಲು ಮೊದಲು ತುಂಬ ಅಪ್ಯಾಯಮಾನವಾಗಿದ್ದಂತೆ ತೋರುತ್ತದೆ. 'ವರ್ತುಲ' ಸಂ-ಸಾರ, ಚಿಪ್ಪು, ನಮ್ಮ ಶಾಂತಿಯ ಬಯಕೆ, ಮರಗಿಡಬಳ್ಳಿ, 'ಬೀಳು-ಬೇರು'ಮುಂತಾದ ಕಥೆಗಳಲ್ಲಿ ಕಥೆಯನ್ನು ಆಕರ್ಷಕವಾಗಿ ಕಟ್ಟಿಹೇಳುವಲ್ಲಿ ವೈದೇಹಿ ತಮಗಿಂತ ಹಿಂದಿನ ಲೇಖಕಿಯರ ಮಾದರಿಗಳನ್ನು ಅವರ ಸರಳ, ಜನಪ್ರಿಯ ಧಾಟಿಗಳನ್ನು ಅನುಸರಿಸುವ ಹೊತ್ತಿನಲ್ಲೇ ಅವುಗಳಿಂದ ಭಿನ್ನವಾಗಿ ಬರೆಯುವತ್ತಲೂ ತವಕಿಸುತ್ತಿರುವುದನ್ನು ಕಾಣಬಹುದು. ಈ ಭಿನ್ನವಾಗುವ, ಬದಲಾಗುವ ಯತ್ನಗಳು ಸಮಸ್ಯೆಗಳ ಸೂಕ್ಷ್ಮಗ್ರಹಿಕೆಯಲ್ಲಿ ಕಾಣಬರುತ್ತವೆ. ಸಂಸಾರದ ನಾಯಕಿ ತನ್ನದೇ ಬದಲಾದ ಪಾತ್ರಗಳಲ್ಲಿ ತನ್ನನ್ನೇ ಕಳೆದುಕೊಂಡಿರುವುದು ಅರಿವಿಗೆ ಬರುವುದಿಲ್ಲವಾದರೆ ವರ್ತುಲದಲ್ಲಿ ನಿಧಾನವಾಗಿ ತನ್ನ ಸ್ಥಿತಿಯನ್ನು ಆಕೆ ಅರಿಯುತ್ತಾಳೆ.

ಸಂಸಾರದ ನಾಯಕಿಗೆ ತನ್ನ ಮನೆ ಮಗ, ಸೊಸೆ, ತನ್ನ ಹೆಣ್ಣುಮಕ್ಕಳು ಯಾರನ್ನೂ ಬಿಟ್ಟುಕೊಡಲಾಗದ ಸಂದಿಗ್ಧ ಪರಿಸ್ಥಿತಿ ಎದುರಾಗಿದೆ. ಏಕೆಂದರೆ ಎಲ್ಲರಿಗೂ ತಾಯಿ ತಮ್ಮ ಅಗತ್ಯಗಳಿಗಾಗಿ ಬೇಕಾಗಿದ್ದಾಳೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಗಂಡ ತನ್ನ ಹೆಂಡತಿಯನ್ನು ತನಗೂ ನೀನು ಬೇಕೆಂದು ಪ್ರೀತಿಯಿಂದ ನೋಡಿಕೊಳ್ಳುವುದು ಒಂದು ಹೊಸ ತಿರುವನ್ನು ನೀಡುತ್ತದೆ. ಈ ಕಥೆಯಲ್ಲಿ ಹೆಣ್ಣಿನ ಜವಾಬ್ದಾರಿಯನ್ನು ಈ ಜವಾಬ್ದಾರಿಗಳ ಮಧ್ಯೆ ಹೆಣ್ಣು ತನ್ನನ್ನು ತಾನು ಕಳೆದು ಕೊಳ್ಳುವುದನ್ನು ಚಿತ್ರಿಸಿಕೊಡುತ್ತದೆ.

ಅತ್ತೆ, ಗಂಡ, ಮಕ್ಕಳು ಇವರ ಮಧ್ಯೆ ತನ್ನ ನೆಮ್ಮದಿಗೆ ಸ್ಥಾನ ಕೊಡದ ವರ್ತುಲ ಕಥೆಯ ನಾಯಕಿ ಕೊನೆಗೆ ಗಂಡನ ಅಭಿಪ್ರಾಯದಂತೆ ಮನಸ್ಸನ್ನು ಬದಲಾಯಿಸಿಕೊಂಡು ಅತ್ತೆ ಮನೆಗೆ ಹೋಗದೆ ತನ್ನ ಸುಖದ ಕಡೆಗೆ ಗಮನ ಹರಿಸುತ್ತಾಳೆ. ಅತ್ತೆ ತನ್ನ ಮಗನನ್ನು ಸೊಸೆಯೇ ಪರವೂರಿನಲ್ಲಿ ಇರಿಸಿಕೊಂಡಿದ್ದಾಳೆಂಬಂತೆ ಈ ಕೆಳಗಿನ ಮಾತುಗಳನ್ನು ಆಡುತ್ತಾರೆ.

'ಅವನಿಗೇನು , ಅಗತ್ಯವಿದೆ ಹೊರಗೆ ಹೋಗಿ ಕೆಲಸ ಮಾಡಬೇಕೆಂದು? ತೋಟವಿದೆ, ಗದ್ದೆಯಿದೆ, ನೋಡಿಕೊಂಡು ಇಲ್ಲೇ ಇರಬಾರದಾ ? ನಮಗೂ ಆಸರೆಯಾಗುತ್ತಿತ್ತು. ಆ ಕಾಲವೆಲ್ಲ ಹೊರಟುಹೋಯಿತು ಬಿಡಿ. ಬೆಳೆದು ದೊಡ್ಡವರಾಗುವವರೆಗೆ ಮಾತ್ರ ಅಪ್ಪ ಅಮ್ಮ ಬೇಕು ಆಮೇಲೆ ಯಾರಿಗೆ ಬೇಕು ? ತಾನಾಯಿತು, ತನ್ನ ಹೆಂಡತಿ ಮಕ್ಕಳಾಯಿತು. ಅದೊಂದು ಬದುಕೇ? ಹುಟ್ಟಿದ್ದಕ್ಕೊಂದು ಫಲವೆ ? ನಾಲ್ಕು ಮಂದಿಯೊಂದಿಗೆ ಇದ್ದು ಜೈಸಬೇಕು. ಅದು ಬಾಳು. ಯಾಕೆ ಹೇಳುವುದು ? ಒಂದು ಹೇಳಿದರೆ ಕಮ್ಮಿ, ಎರಡು ಹೇಳಿದರೆ ಜಾಸ್ತಿ, ಒಟ್ಟಾರೆ ನಮಗೆ ಉಸಿರುಬ್ಬಸ. ಹೆಣ್ಣು ಹೆತ್ತೆ ಅಳಿಯನಿಗೆ ಕೊಟ್ಟೆ. ಗಂಡು ಹೆತ್ತ ಸೊಸೆಗೆ ಕೊಟ್ಟೆ ಎನ್ನುತ್ತಾರಲ್ಲ. ಅದೇನು ಸುಳ್ಳೇ ?.....

ಈ ಕಥೆಯಲ್ಲಿ ಬರುವ ಅತ್ತೆ. ಸುಮಾರು ಹತ್ತುಹದಿನೈದು ಜನ ಇರುವ, ಮಡಿಗಿಡಿ ಆಚರಣೆ ಇರುವ ಮನೆಗೆ ತಮ್ಮ ಮಗಳನ್ನು ಮದುವೆ ಮಾಡಲು ಆತಂಕಪಡುವ ಅತ್ತೆ ಅದೇ ರೀತಿ ಇರುವ ತನ್ನ ಮನೆಯಲ್ಲಿ ಸೊಸೆ ಬಾಳ್ವೆ ನಡೆಸಬೇಕೆಂದು ಹೇಳುತ್ತಾಳೆ. ಸೊಸೆಯನ್ನು ಪರಳಂತೆ ಕಾಣುವ ಅತ್ತೆಯನ್ನು ಈ ಕಥೆ ಬಿಂಬಿಸುತ್ತದೆ. ಆದರೆ ಗಂಡನ ಪ್ರೀತಿಯಿಂದ ಇಲ್ಲಿನ ನಾಯಕಿ ಸಂಸಾರದ ವರ್ತುಲದಿಂದ, ಸಮಸ್ಯೆಗಳಿಂದ ಹೊರಬರಲು ಸಾಧ್ಯವಾಗುತ್ತದೆ.

ಇದೇ ಸಾಲಿಗೆ ಸೇರುವ ಇನ್ನೊಂದು ಕಥೆ 'ನಮ್ಮ ಶಾಂತಿಯ ಬಯಕೆ' ಈ ಕಥೆಯ ನಾಯಕಿ ಶಾಂತಿ ಮದುವೆಗೆ ಮುನ್ನ ಹಲವು ಮಕ್ಕಳನ್ನು ಹೆತ್ತು ಸಾಕುವ ಬಯಕೆಯನ್ನು ವ್ಯಕ್ತಪಡಿಸಿದರೂ ಒಂದೇ ಮಗುವಿಗೆ ಜನ್ಮ ನೀಡುವುದರಲ್ಲಿ ತನ್ನ ಆಸೆಯಿಂದ ವಿಮುಖಳಾಗುತ್ತಾಳೆ. 'ನನಗೇನೋ ಇದ್ದರೆ ಹನ್ನೆರಡು ಮಕ್ಕಳು ಇರಬೇಕು. ಎಲ್ಲರೂ ಚಂದವಾಗಿ, ಬುದ್ಧಿವಂತರಾಗಿ ಅದೃಷ್ಟವಂತರಾಗಿ, ಬೆಳೆದರೆ ಎಷ್ಟು ಹೆಮ್ಮೆ ಆವಾಗ, ಬೇಸಗೆಯ ರಜೆಯಲ್ಲಿ ಅವರವರ ಊರಿಂದ ಅವರು, ಅವರ ಮಕ್ಕಳು ಬಂದಾಗ ಮನೆಯೆಲ್ಲ ಗೆಲುವಾಗುತ್ತದೆ. ಸಣ್ಣವರಿರುವಾಗ ಸಾಕಲು ತುಸು ಕಷ್ಟವಾದೀತು ಅಷ್ಟೇ - ಎನ್ನುತ್ತಿದ್ದ ಶಾಂತಿ. ಮದುವೆಯ ನಂತರ ಹೆರಿಗೆಯ ಸಮಯ

★ ವೈದೇಹಿ, ನಮ್ಮ ಶಾಂತಿಯ ಬಯಕೆ, ಪು.ಸಂ. ೮೪

★ ವರ್ತುಲ, ಪು.ಸಂ. ೩೧.

ಸಮೀಪಿಸುತ್ತಿದ್ದಾಗ. ಈ ಸಲಕ್ಕೆ ಸಾಕು ಮಾಡಿಕೊಳ್ಳುತ್ತೇನೆ ಎಂತ ಶಾಂತಿ ಬೇಡವೇ ಬೇಡ ಅಂತ ಅಮ್ಮ ಅಮ್ಮನ ವಾದಕ್ಕೆ ಸಿಡಿದೆದ್ದ ಶಾಂತಿ.

'ಯಾರು ಹಾಗೆ ಎಂದವರು ? ಅವರು ಬಾಬು ಒಬ್ಬನೇ ಸಾಕಿತ್ತು ಎನ್ನುತ್ತಿದ್ದರು ಗೊತ್ತೇ ಹೋಗು ಹೋಗು. ಮೂರೂ ಬೇಡ, ನಾಲ್ಕೂ ಬೇಡ, ಕಷ್ಟ ನಮಗೆ ನೋಡು, ಎನ್ನುತ್ತಾಳೆ. ಸಂಸಾರದೊಳಗಿನ ನಿಜವಾದ ಹೆಣ್ಣಿನ ಕಷ್ಟವೇನು ಎಂಬುದು ಶಾಂತಿಗೆ ಮದುವೆ ನಂತರ ತಿಳಿಯುತ್ತದೆ.

ಇದೇ ಗುಂಪಿಗೆ ಸೇರುವ ಮತ್ತೊಂದು ಕಥೆ 'ಮರಗಿಡಿಬಳ್ಳಿ' ಮಾತು ಮತ್ತು ದೈಹಿಕ ಚಲನೆಯನ್ನು ಕಳೆದುಕೊಂಡು ಅಸಹಾಯಳಾಗಿ ಅಪಾರ ಯಾತನೆ ಅನುಭವಿಸುತ್ತಿರುವ ತಾಯಿಯನ್ನು ಮಕ್ಕಳು ಅನಾದರಿಸುವ, ಅವಳ ಸಾವನ್ನು ನಿರೀಕ್ಷಿಸುತ್ತಿರುವ ರೀತಿ ಆಘಾತಕಾರಿಯಾಗಿದೆ. ಎಲ್ಲರೂ ತಮ್ಮ ಹಿತವನ್ನು ಪ್ರಧಾನವಾಗಿಸಿಕೊಳ್ಳುತ್ತಿದ್ದಾರೆ. ಆದರೆ ಈಗ ಹಿಂಸೆ ಅನುಭವಿಸುತ್ತಿರುವ ತಾಯಿಯು ತನ್ನ ತಾಯಿಯ ಅಂಥದೇ ಅಸಹಾಯಕ ಸ್ಥಿತಿಯಲ್ಲಿ ಅನಾದರ ತೋರಿದ್ದನ್ನು, ತನ್ನನ್ನು ನಿರ್ಲಕ್ಷಿಸುತ್ತಿರುವ ಸಂದರ್ಭದಲ್ಲಿ ನೆನೆಯುವುದು ಸಾಂಕೇತಿಕವಾಗಿದೆ. ಮನುಷ್ಯನ ವರ್ತನೆ ಘಟಕಗಳನ್ನು ಆಧರಿಸಿ ಪುನರಾವರ್ತನೆಯಾಗುತ್ತಿರುತ್ತದೆ. 'ಮರಗಿಡಬಳ್ಳಿ' ಕತೆಯು ಹೇಳಲು ಪ್ರಯತ್ನಿಸಿರುವ ಈ ಆಶಯವು ಬದುಕು ವೈಯಕ್ತಿಕ ಸಂದರ್ಭದಲ್ಲಿ ಮಾತ್ರ ಗಟ್ಟಿಯಾಗಲು ಹರಿಯುತ್ತಿದೆ ಎಂಬುದಕ್ಕೆ ಸಮರ್ಥನೀಯ ಕಾರಣಗಳನ್ನು ಒದಗಿಸಿದೆ.

ಈ ಕಥೆಯಲ್ಲಿ ತಾಯಿಯೊಬ್ಬಳು ಮಕ್ಕಳಿಗೆ ಜನ್ಮವಿತ್ತು ಅವರನ್ನು ಬಹಳ ಕಷ್ಟಪಟ್ಟು ಸಾಕಿ, ದೊಡ್ಡವರನ್ನಾಗಿ ಮಾಡಿ, ಅವರೆಲ್ಲ ಐಶ್ವರ್ಯವಂತರಾಗಿದ್ದರೂ ಈಕೆಯೊಬ್ಬಳನ್ನು ಚೆನ್ನಾಗಿ ನೋಡಿಕೊಳ್ಳಲಾರದ ಮಕ್ಕಳ ಧೋರಣೆಯಿಂದ ಮಂದಕ್ಕ ಅಪಾರವಾಗಿ ದುಃಖಿಸುತ್ತಿದ್ದುದನ್ನು ಮಕ್ಕಳ ಅನಾಗರೀಕ ನಡವಳಿಕೆಯನ್ನು ವೈದೇಹಿಯವರು ಮನೋಜ್ಞವಾಗಿ ಚಿತ್ರಿಸಿದ್ದಾರೆ. ಮರ, ಗಿಡ, ಬಳ್ಳಿಗಳು, ಒಂದಕ್ಕೊಂದು ಸಂಬಂಧವಿರುವಂತಹವು. ಬಳ್ಳಿಯ ಬೆಳವಣಿಗೆಗೆ ಗಿಡಮರಗಳು ಆಶ್ರಯವನ್ನು ಕೊಡುತ್ತವೆ. ಆದರೆ ಮುದಿಯಾಗುವ ಗಿಡಮರಗಳಿಗೆ ಬಳ್ಳಿ ಯಾವ ಬಗೆಯ ಆಶ್ರಯವನ್ನು ಕೊಡಲು ಸಾಧ್ಯವಾಗುವುದಿಲ್ಲ. ಇದರಂತೆ ಮಕ್ಕಳನ್ನು ಹೊತ್ತು

ಹೆತ್ತು ಸಾಲ ಮಾಡಿ ಸಾಕಿ, ಓದಿಸಿ, ಬರೆಸಿ ಅನಾರೋಗ್ಯ ಉಂಟಾದಾಗಲೆಲ್ಲ ಚಿಕಿತ್ಸೆ ಮಾಡಿಸಿ ಬೆಳೆಸುತ್ತಾರೆ. ಆದರೆ ಅದೇ ತಾಯಿ ತಂದೆಯರು ಇಳಿಕಾಲದಲ್ಲಿ ಪರಾಧೀನರಾದರೆ ಅವರನ್ನು ಪ್ರೀತಿಯಿಂದ ನಿಂದಿಸದೆ ನೋಡಿಕೊಳ್ಳುವ ಮಕ್ಕಳೆಷ್ಟು ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲೆಂದೇ ಈ ಕಥೆಯನ್ನು ಬರೆದಂತಿದೆ. ಬಳ್ಳಿಗೆ ಗಿಡ ಆಶ್ರಯವೇ ವಿನಾ ಗಿಡಕ್ಕೆ ಬಳ್ಳಿಯ ಆಶ್ರಯವಿಲ್ಲ ಎಂಬ ಸತ್ಯದ ಪ್ರತಿಬಿಂಬವನ್ನು ಭಾವನಾತ್ಮಕ ಸಂಬಂಧಗಳು ಕಳಚಿದಾಗ ಏರ್ಪಡುವ ಸನ್ನಿವೇಶಗಳ ಸಹಜ ಚಿತ್ರಣವನ್ನು ವೈದೇಹಿಯವರು ಕಟ್ಟಿಕೊಟ್ಟಿದ್ದಾರೆ.

ಈ ಮೇಲಿನ ಕಥೆಗಳು ಕುಟುಂಬ ವ್ಯವಸ್ಥೆಯೊಳಗೇ ಹೆಣ್ಣು ಶೋಷಣೆಗೊಳಪಡುವುದನ್ನು ತೋರಿಸಿಕೊಡುತ್ತವೆ. ಇನ್ನುಳಿದ ಕೆಲವು ಕಥೆಗಳು ಈ ಕುಟುಂಬದಲ್ಲೇ ಬರುವ ಪಿತೃಪ್ರಧಾನ ಸಂದರ್ಭದಲ್ಲಿ ಹೆಣ್ಣು ಶೋಷಣೆಗೊಳಪಡುವ ವಿಧಾನಗಳನ್ನು ಕುರಿತು ಚರ್ಚೆಗೊಳಪಡಿಸಲಾಗುವುದು. ಇದಕ್ಕೆ ಉತ್ತಮ ಉದಾಹರಣೆಗಳೆನಿಸುವ ಕಥೆಗಳೆಂದರೆ 'ಚಿಪ್ಪು ಬೀಳು-ಬೇರು, ಸೌಗಂಧಿಯ ಸ್ವಗತಗಳು ಮುಂತಾದವು.

ಕುಟುಂಬ ಎಂಬ ಒಂದು ಚಿಪ್ಪಿನ ವ್ಯವಸ್ಥೆಯೊಳಗೆ ಹೆಣ್ಣು ನಲುಗುವುದನ್ನು ಚಿಪ್ಪು ಕಥೆ ಸುಗಮವಾಗಿ ಧ್ವನಿಸುತ್ತದೆ. ಈ ಕಥಾ ನಾಯಕಿಯ ಅಜ್ಜಿಯ ಮಾತುಗಳಲ್ಲಿ ಗ್ರಹಿಸುವುದಾದರೆ ರಂಗಜ್ಜಿ ಕಾಲು ನೀವಿಕೊಳ್ಳುತ್ತ ಕಡಿದು ಕಡಿದು ಹೇಳುತ್ತಾಳೆ. ಏನೋ ಈಗಿನ ಕಾಲದ ಹುಡುಗಿಯರು, ಒಮ್ಮೆ ಹಾಗೆ, ಒಮ್ಮೆ ಹೀಗೆ, ಒಪ್ಪಿದರೆ ಮದುವೆ ಮಾಡಿಕೊಟ್ಟುಬಿಡು ನರಸಿಂಹ, ಹುಡುಕಲು ಹೋಗುತ್ತಿ ಎಲ್ಲಿಗೆ ? ಕಾಲಬುಡಕ್ಕೆ ಬಂದದ್ದನ್ನು ಬಿಟ್ಟರೆ ಹುಚ್ಚನೆಂದಾರು. ನಮ್ಮ ಯಶೀಗೇನು, ಯಾರೊಡನೆಯೂ ರಾಣಿಯಂತಿರಬಲ್ಲಳು' ಎಂದು ಇಲ್ಲದ ಗುಣಗಳನ್ನು ಇವೆಯೆಂದು ಆರೋಪಿಸಿ ಹೇಳುವ ಅಜ್ಜಿಯನ್ನು ಕುರಿತು ಮೊಮ್ಮಗಳು ಮನಸ್ಸಿನಲ್ಲಿಯೇ 'ರಂಗಜ್ಜಿ ಒಮ್ಮೆ ಸಾಯುತ್ತೀಯಾ? ಜೀವದಲ್ಲಿದ್ದು ನನ್ನನ್ನೇಕೆ ಕೊಲ್ಲುತ್ತೀ ? ನಿನಗೆ ಹೇಗೆ ಗೊತ್ತು ನಾನು ಯಾರೊಂದಿಗೂ ಜೀವನ ತೆಗೆಯುವವಳೆಂದು ? ನೀನು ಹೀಗೆ ಅಂದೆ, ಅನ್ನುತ್ತಲೇ ನನ್ನನ್ನು ಬೆಳೆಯಿಸಿದೆ. ಆ ಚಿಪ್ಪಿನಲ್ಲಿಯೇ ನಾನೀಗ ಸಮಾಧಿಯಾಗುತ್ತಿದ್ದೇನೆ ನೋಡು. ಈಗಲಾದರೂ ಸುಮ್ಮನಿರು. ನನ್ನ ತಲೆ ಗಾರೆದ್ದು ಹೋಗಿದೆ. ಇದೀಗ

ನಡೆಯುತ್ತಿರುವುದು ನನ್ನ ಭವಿಷ್ಯದ ಚರ್ಚೆ. ಮಾತನಾಡಲು ನಾನಿದ್ದೇನೆ. ಸತ್ತಿಲ್ಲ ನೀನು ಎಲ್ಲಾ ಕಳೆದು ಕುಳಿತಿದ್ದೀಯ. ಇಷ್ಟು ಅಂಚಿಗೆ ಬಂದರೂ ಇನ್ನೂ ನಿನ್ನ ಅಣತಿಯನ್ನು ಮೆರೆಯಿಸುವ ಆಸೆಯೆ ? ತನ್ನ ಮನಸ್ಸು ಕಿಡಿಕಿಡಿಯಾಗುತ್ತದೆ.

ಯಶೀಗೆ ಗಂಡನ್ನು ಹುಡುಕುತ್ತಿರುವ ತಂದೆ ಆ ವಿಷಯದ ಬಗ್ಗೆ ಮಗಳನ್ನು ಔಪಚಾರಿಕವಾಗಿಯಾದರೂ ಒಂದು ಮಾತೂ ಕೇಳುವುದಿಲ್ಲ. ಅಜ್ಜಿ - ಅಮ್ಮ, ಅಪ್ಪ, ನೆರೆಹೊರೆಯವರು ತಾನು ಹುಟ್ಟುವ ಮುಂಚೆಯೇ ಸೃಷ್ಟಿಸಿ ಇಟ್ಟ ಆ ಹಳೆಯ, ನಾರುವ, ಬೋಳುಬೇಲಿಯ ಒಳಗೆ ತನ್ನ ನಾಲಿಗೆ ಬಂಧಿತವಾಗಬೇಕೆ ? ಈ ಬೇಲಿ ಹರಿದುಕೊಂಡು ಹೊರಗೆ ಬರಬೇಕು ಹೌದು. ಎಂದು ಅಂದುಕೊಂಡರೂ ಈ ರೀತಿಯ ಪ್ರತಿಭಟನೆಯೆಲ್ಲಾ ಕೇವಲ ಮನಸ್ಸಿನಲ್ಲಿ ಮಾತ್ರ. ಈ ಚಿಪ್ಪಿನಿಂದ ಹೊರಬಾರದ ನಾಯಕಿ ಅಪ್ಪ ತೋರಿಸಿದ ಗಂಡನ್ನು ಮದುವೆಯಾಗುತ್ತಾಳೆ.

ಕುಟುಂಬ ಎಂಬ ಒಂದು ಚೌಕಟ್ಟಿನಲ್ಲಿ ಹೆಣ್ಣಿನ ಬೇಕು-ಬೇಡಗಳು ಹೇಗೆ ಗೌಣವಾಗುತ್ತವೆ ಎಂಬುದನ್ನು ಬೀಳು - ಬೇರು ಕಥೆ ಹೇಳುತ್ತದೆ. ಈ ಕಥೆಯಲ್ಲಿ ಬರುವ ನಾಯಕಿಯ ತಾಯಿಯೇ ಮಗಳಿಗೆ ಬೇಗ ಮದುವೆ ಮಾಡಿ ಕಳುಹಿಸಬೇಕು. ಇಲ್ಲದಿದ್ದರೆ ಕುತ್ತಿಗೆಗೆ ಬಂದೀತು ಎಂದು ಹೇಳುವುದನ್ನು ಗಮನಿಸಬಹುದು. ರಾತ್ರಿ ಊಟಕ್ಕೆ ಬಡಿಸುವಾಗ ಊಟದ ತಟ್ಟೆಗೋ ಎಂಬಂತೆ ಅವಳು ಹೇಳುತ್ತಲೇ ಇದ್ದಳು. ಇನ್ನು ಖರ್ಚಿಲ್ಲವೆ ? ದೇವರು ಮನಸ್ಸು ಮಾಡಿದರೆ, ಬಂದವ ಒಪ್ಪಿದರೆ, ಇಂದಿಗೆ ಮದುವೆ ಮಾಡಬೇಡವ ? ಇನ್ನೂ ಎಷ್ಟು ವರ್ಷ ಅಂತ ಮನೆಯಲ್ಲಿ ಕೂಡಿಸಿಕೊಳ್ಳುವುದು ? ಚೌಕಾಸಿ ಮಾಡಿ ಮಾಡಿ ಮೂರು ನಾಲ್ಕು ಗಂಡುಗಳನ್ನು ಕಳೆದಾಯಿತಲ್ಲ. ಈ ಸಲ ಹೆಚ್ಚೋ ಕಡಿಮೆಯೋ ಒಪ್ಪಿಯೇ ಬಿಡವುದು. ಇನ್ನೂ ಇನ್ನೂ ಹುಡುಗಾಟ ಮಾಡಿದರೆ ಕುತ್ತಗಿಗೆ ಬಂದೀತು' ಯಾರೂ ಮಾತಾಡಲಿಲ್ಲ. ಇಂದಿಯ ಕಣ್ಣು ಮಾತ್ರ ನೀರು ತುಂಬಿಕೊಂಡ ಹಾಗೆ ಕಂಡಿತು. ತನ್ನ ಮನೆಗೆ ಒಂದು ಎಮ್ಮೆ ತರಲು ಹಲವು ರೀತಿ ಪರೀಕ್ಷೆ ಮಾಡಿ ಬೇರೆ ಬೇರೆ ಎಮ್ಮೆಗಳನ್ನು ಶೋಧ ಮಾಡವ ನಾಯಕಿಯ ತಾಯಿ, ತಂದೆ ನಮ್ಮ ಮಗಳಿಗೆ ಈ ಸಲ ಹೆಚ್ಚು ಕಡಿಮೆಯೋ ಇದ್ದರೂ ಒಪ್ಪಿಯೇ ಬಿಡುವುದು ಎನ್ನುವ ತೀರ್ಮಾನಕ್ಕೂ ಬರುತ್ತಾರೆ.

'ಸೌಗಂಧಿಯ ಸ್ವಗತಗಳು' ಕಥೆ ಪಿತೃಪ್ರಧಾನ ವ್ಯವಸ್ಥೆಯನ್ನು ಪ್ರತಿನಿಧಿಸುವ ಒಂದು ಬಹುಮುಖ್ಯ ಕಥೆಯಾಗಿದೆ. ಈ ಕಥೆಯಲ್ಲಿ ಉದ್ಯೋಗಸ್ಥ ಅವಿವಾಹಿತಳಾಗಿರುವ ಮಗಳ ಮೇಲೆ ತಂದೆಗೆ ನಂಬಿಕೆ ಇಲ್ಲ. ತಂದೆ ಮಾತ್ರವಲ್ಲದೇ ತಾಯಿಯೂಇದೇ ರೀತಿಯ ಆಲೋಚನೆ ಉಳ್ಳವರಾಗಿದ್ದಾರೆ. ಈ ಕಥೆಯಲ್ಲಿನ ತಾಯಿಯ ಮನಸ್ಸು ಸಹ ಸಂಪ್ರದಾಯಬದ್ಧ ಚೌಕಟ್ಟಿನೊಳಗೆ ಯೋಚಿಸುತ್ತದೆ. ನಂಬಿಕೆಯಿಲ್ಲದ ತಂದೆಯ ಕೀಳು ಆಲೋಚನೆ ಕ್ರಮವನ್ನು ಕಥೆಯಲ್ಲಿ ಹೀಗೆ ಗ್ರಹಿಸಬಹುದು.

ಬಸ್ಸಿಗೆ ಕಳಿಸಲು ಬಂದಿದ್ದ ತಂದೆ ಕಂಡಕ್ಟರನೊಂದಿಗೆ ಬಹಳ ವಿನಯದಿಂದ ನಮ್ಮ ಹುಡುಗಿ ಒಬ್ಬಳೇ ಹೊರಟಿದ್ದಾಳೆ. ದಯವಿಟ್ಟು ಯಾರಾದರೂ ಹೆಂಗಸರನ್ನೇ ಅವಳ ಪಕ್ಕ ಕೂಡಿಸಿ ಎಜಸ್ಟ್ ಮಾಡಿ, ದೊಡ್ಡ ಉಪಕಾರವಾಗುತ್ತದೆ ಎಂದಿದ್ದರು. ಮತ್ತೆ ಕಿಟಕಿಯ ಹತ್ತಿರ ಬಂದು ಸೌಗಂಧಿಯೊಡನೆ 'ನೀನೇನೂ ಹೆದರಬೇಡ, ಕಂಡಕ್ಟರ್ ಒಳ್ಳೆಯವರು, ಹೆಂಗಸರನ್ನೇ ಕೊಡಿಸುತ್ತೇನೆ ಅಂದಿದ್ದಾನೆ ಎನ್ನುತ್ತಾರೆ.

ಈ ಕಥೆಯನ್ನು ಮನೋವೈಜ್ಞಾನಿಕ ದೃಷ್ಟಿಕೋನದಿಂದಲೂ ವಿಶ್ಲೇಷಿಸಬಹುದಾಗಿದೆ. ಏಕೆಂದರೆ ಸೌಗಂಧಿ ಕಥೆಯುದ್ದಕ್ಕೂ ತನಗೆ ತಾನೇ ಮನಸ್ಸಿನಲ್ಲಿಯೇ ಮಾತನಾಡುತ್ತಾಳೆ ಎಲ್ಲವೂ ಬರೀ ಸ್ವಗತಗಳು ಮಾತ್ರ, ಆದರೆ ಎಲ್ಲಿಯೂ ಹೊರಗೆ ಪ್ರತಿಭಟಿಸುವುದಿಲ್ಲ. ಇಲ್ಲಿ ಏಕಾಂತವಾಗಿ ಸ್ವತಂತ್ರವಾಗಿ ಬದುಕಲೆತ್ನಿಸುವ ನಾಯಕಿಯನ್ನು ತಂದೆಯಾಗಲೀ, ತಾಯಿಯಾಗಲೀ ಮನೆಯೊಡತಿಯಾಗಲೀ ಅವಳನ್ನು ನೆಮ್ಮದಿಯಾಗಿ ಸ್ವತಂತ್ರವಾಗಿರಲಿಕ್ಕೆ ಬಿಡದೇ ಕಾಡುತ್ತಾರೆ. ವಯಸ್ಸಾದರೂ ಇನ್ನೂ ಮದುವೆಯಾಗದ ನಾಯಕಿಯ ಸ್ಥಿತಿಗೆ ಮನೆಯೊಡತಿ ಸಹಾನುಭೂತಿ ವ್ಯಕ್ತಪಡಿಸುತ್ತಾರೆ. ಹುಡುಗಿಯ ತಂದೆ ಮತ್ತು ಮನೆಯೊಡತಿ ಸೌಗಂಧಿಯ ಶೀಲ ಯಾವ ಕ್ಷಣದಲ್ಲಾದರೂ ಹರಣವಾಗಿ ಬಿಡಬಹುದೆಂಬ ಆತಂಕದಲ್ಲಿ ಮನೆಯಲ್ಲಿ ಒಬ್ಬಳನ್ನೇ ಇರಿಸಲು ಹೆದರುತ್ತಾರೆ. ಸೌಗಂಧಿಗೆ ಇಷ್ಟವಿರದಿದ್ದರೂ ಮನೆಯೊಡತಿ ಅವಳ ರಕ್ಷಣೆಗಾಗಿ ಎಂಬಂತೆ ಕಾವಲು ಕಾಯುತ್ತ ಜೊತೆಯಲ್ಲಿಯೇ ಮಲಗುತ್ತಾರೆ.

ಈ ಕಥೆ ಅವಿವಾಹಿತಳಾದ ಒಬ್ಬ ಹೆಣ್ಣನ್ನು ಸ್ವತಃ ಆಕೆಯ ಹೆತ್ತವರು ಹಾಗೂ ಸಮಾಜದ ಜನತೆ ಯಾವ ಬಗೆಯ ಶಂಕೆ ಹಾಗೂ ಗುಮಾನಿಯಿಂದ ನೋಡುತ್ತಾರೆ. ಯೋಚಿಸುತ್ತಾರೆ ಎಂಬುದನ್ನು ವ್ಯಕ್ತಮಾಡುತ್ತದೆ.

'ಬೀಳು-ಬೇರು' ಕಥೆಯಲ್ಲಿ ಸಮಸ್ಯೆಯ ಕೇಂದ್ರ ಅವಿವಾಹಿತೆಯಿಂದ ಆಗಿದ್ದರೂ ನಿರೂಪಕ ಪ್ರಜ್ಞೆ ಅವಳ ತಂದೆಯದು. ಎಮ್ಮೆ ವ್ಯಾಪಾರ, ಇಂದಿಗೆ ವರನನ್ನು ಹುಡುಕುವ ವ್ಯವಹಾರ ಎರಡನ್ನೂ ಒಟ್ಟಿಗೇ ತರುವ ಮೂಲಕ ಮದುವೆ - ವ್ಯಾಪಾರವಾಗುವ ಧ್ವನಿಯು ವಿವರಣೆಯೇ ಬೇಕಾಗದಷ್ಟು ಸ್ಪಷ್ಟವಾಗಿಕೇಳುತ್ತದೆ. ಆದರೆ ಕತೆಯುದ್ದಕ್ಕೂ ಸಂವೇದನಾಶೀಲವಾಗಿದ್ದು ಮಗಳ ಮನಸ್ಸನ್ನು ಸ್ವಲ್ಪವೂ ಅರ್ಥಮಾಡಿಕೊಳ್ಳಲಾಗದಂಥ ಮೌಲ್ಯ ಪ್ರಪಂಚ ಈ ತಂದೆಯದು. ನಿನ್ನ ಅಮ್ಮ ನಾನು ನೋಡಿದ ಇಪ್ಪತ್ತನೆಯ ಹುಡುಗಿ ಗೊತ್ತಿದೆಯೇ ? ಎಂಬುದು ಆತನಿಗೆ ತೀರಾ ಸಹಜ, ಎಮ್ಮೆ ವ್ಯಾಪಾರದಷ್ಟೇ ವ್ಯಾವಹಾರಿಕ. ಆದರೆ ಈ ಮಾತಿಗೆ ಇಂದಿ ನನ್ನನ್ನು ಸುಟ್ಟುಬಿಡುವಂತೆ ದುರುಗುಟ್ಟಿ ನೋಡಿದ್ದು ಮಾತ್ರ ಅವನಿಗೆ ತಲುಪಲಾರದ ವಿಷಯ.

ವಿವಾಹದ ಸಂಸ್ಥೆಯ ಈ ವ್ಯಾವಹಾರಿಕತೆ ಯಾವುದೂ ಅದರ ಬಗೆಗಿನ ಆಕರ್ಷಣೆಯನ್ನು ಅದು ಹೊತ್ತು ತರುವ ಕನಸುಗಾರಿಕೆಯನ್ನು ನಿಲ್ಲಿಸಲಾರದು. 'ಚಿಪ್ಪು' ಕಥೆಯ ಯಶೀ ತೋರುವ ಭಾವತುಮುಲ ಮದುವೆ ತನಗೆ ಬೇಕೆ, ಬೇಡವೆ ಎಂಬ ಸಂಧಿಗ್ಧ ಸ್ಥಿತಿಯನ್ನು ಬಿಂಬಿಸುವುದು ನಿಜ. ಒಳ್ಳೆಯ ಹುಡುಗಿ ಎಂಬ ಸಮಾಜ, ಸಂಪ್ರದಾಯಗಳ ನಿರೀಕ್ಷೆಗಳಿಗೆ ಒಗ್ಗಿಕೊಳ್ಳತೊಡಗಿದಾಗ ದಾಂಪತ್ಯದ, ವರನ ಬಗೆಗಿನ ಕನಸುಗಳು ಕಾಡುತ್ತವೆ. ಆ ಕನಸಿನ ತಳದಲ್ಲಿ ಎಲ್ಲೋ ಒಂದು ಎಳೆಯ ಒಡುಕಿಲ್ಲದ ದನಿ ನಿರಂತರ ಪ್ರಶ್ನೆಗಳನ್ನು ಕೇಳುತ್ತಿರುವುದನ್ನೂ ಕಥೆ ಸೂಚಿಸುತ್ತದೆ.

ಹೃದಯದೊಳಗೆ ಹೆಣ್ಣು ಬೈತಿಡುತ್ತ ಬಂದ ಇಂಥ ನೂರಾರು ಮೂಕ ಮರ್ಮರಗಳಿಗೆ ವೈದೇಹಿ ಬಾಯಿಕೊಡುವಂತೆ ಬರೆಯುವಾಗಲೇ ತನ್ನ ವಿಶಿಷ್ಟ ಸ್ಥಿತಿಯನ್ನು ಹೆಣ್ಣೇ ಅರಿವಿಗೆ ತಂದುಕೊಳ್ಳುವಂತೆಯೂ ಮಾಡುತ್ತಾರೆ. ಈ ಆತ್ಮ ನಿರೀಕ್ಷಣೆಯ ಮೂಲಕವಾಗಿ ಅವರ ಹೆಣ್ಣುಗಳು ಒಂದು ಮಾದರಿಯ ಪ್ರತಿಬಂಬವಾಗದೇ ಅನೇಕ ಬಿಡಿ ಬಿಡಿ ಮಾನದ ವ್ಯಕ್ತಿಗಳಾಗಿ ಬೆಳೆದುಬಿಡುತ್ತಾರೆ. ಸಮಾಜದ ಸಾಂಪ್ರದಾಯಿಕ ಭಾಷೆ ಹೆಣ್ಣನ್ನು ಗುರುತಿಸುವುದರಲ್ಲಿ ಹುಡುಗಿ, ಯುವತಿ, ಮುದುಕಿ ಮುಂತಾದ ವಯಸ್ಸನ್ನು ಮಾನದಂಡವಾಗಿ ಇಟ್ಟುಕೊಂಡಿರಬಹುದು. ಇಲ್ಲವೆ ತಾಯಿ, ಮಗಳು, ಅಜ್ಜಿ, ಅತ್ತೆ, ಸೊಸೆ, ಅಕ್ಕ ತಂಗಿಯೇ ಮೊದಲಾದ ಕೌಟುಂಬಿಕವಾಗಿ ಕಟ್ಟಲ್ಪಟ್ಟು ಸಾಮಾಜಿಕ ಸಂಬಂಧಗಳ ರೂಪದಲ್ಲಿರಬಹುದು. ಅಥವಾ ಕನ್ಯೆ, ಗೃಹಿಣಿ,

ವಿಧವೆ ವೇಶ್ಯೆಯರಂತೆ ವೈವಾಹಿಕ ನೆಲೆಗಳತ್ತ ಸೂಚಿಸುತ್ತಿರಬಹುದು. ಇದಾವುದೂ ಆಗಿರದೆ, ಕ್ರೂರಿ, ರಕ್ಕಸಿ, ಅನುಕಂಪವುಳ್ಳವಳು, ಉದಾರಿ, ಭ್ರಮಾದೀನೆ, ಗಯ್ಯಾಳಿ, ಸಾಧ್ವಿ, ಹುಚ್ಚಿ ಮುಂತಾದ ಮೌಲ್ಯಭಾರವುಳ್ಳ ಹೆಸರುಗಳ ಮೂಲಕವೂ ಆಗಿರಬಹುದು. ಇಲ್ಲದೆ ಸಿರಿವಂತೆ ಕೂಲಿಹೆಣ್ಣುಗಳಂತೆ ವರ್ಗಗಳನ್ನು, ಮೇಲು ಕೆಳ ಜಾತಿಗಳನ್ನೂ ಸೂಚಿಸುವಂತೆ ಕಲ್ಪಿತಳಾಗಿರಬಹುದು.

೨. ವಿವಾಹ ಮತ್ತು ದಾಂಪತ್ಯ ಜೀವನದಲ್ಲಿ ಹೆಣ್ಣು

ವಿವಾಹದ ಅಂಚಿಗೆ ಬಂದಿರುವ, ದಾಂಪತ್ಯ ಜೀವನದ ಒತ್ತಡದಲ್ಲಿ ಸಿಲುಕಿರುವ ಹೆಣ್ಣುಗಳ ಒಳತೋಟಿಗಳು ವೈದೇಹಿಯವರ ಕೆಲವು ಕಥೆಗಳಲ್ಲಿ ಮೂಡಿಬಂದಿದೆ. 'ಅಂತರಂಗದ ಪುಟಗಳು' ಕಥೆಯ ಅಚಲಾ ಒಬ್ಬ ಬಂಡಾಯ ಮನೋಧರ್ಮದ ಹೆಣ್ಣಾಗಿದ್ದಾಳೆ. ಈ ಕಥೆಯ ನಾಯಕಿ ಅಚಲಾ ತಮ್ಮ ಇಚ್ಛೆ, ಅನಿಚ್ಛೆಗಳನ್ನು ಹೇಳಲು ಹಂಬಲಿಸಿದ್ರೂ ಹೇಳಲಾರದ 'ಬೀಳು-ಬೇರು' ಚಿಪ್ಪು ಕಥೆಗಳ ನಾಯಕಿರಂತೆ ಅಲ್ಲ. ಈಕೆ ವರನಿಗಾಗಿ ಕಾಯುವ ತಲ್ಲಣ, ಕನಸುಗೂಡುಗಳ ಹುಡುಗಿಯಾಗಿರದೆ ತನ್ನನ್ನು ಒಪ್ಪಿದ ವರನನ್ನೂ ನಿರಾಕರಿಸಬಲ್ಲಳು. ಮದುವೆಯೆಂಬುದು ಹೆಣ್ಣನ್ನು ಚಿನ್ನ, ರೇಷ್ಮೆಗಳಲ್ಲಿ ಅದ್ದಿ ಒತ್ತಿಡುವ ವ್ಯವಸ್ಥೆಯಾಗಿರುವ ಬಗ್ಗೆ ಸಿಟ್ಟು, ಪ್ರಕಟಿಸಬಲ್ಲವಳು, ಅದೇ ಹೊತ್ತಿನಲ್ಲಿ ಮದುವೆ ಆಗದ ತನ್ನ ಸ್ಥಿತಿಯ ಬಗ್ಗೆ ಅಸುಖಿಯೂ ಆಗುವವಳು. ತನ್ನ ಚಪ್ಪರ, ವಾದ್ಯ, ಉಡುಪು, ಶೃಂಗಾರ, ಆಭರಣ, ಅಂತಸ್ತು, ಆಶೀರ್ವಾದ, ಅಕ್ಷತೆ ಕಾಳುಗಳ ಲೋಕದ ಬಗ್ಗೆ ತಿರಸ್ಕಾರ, ತಾನು ಬಯಸುವವನು ತನ್ನನ್ನು ಬಯಸುವವನೂ ಆಗಿ ಇವನ ಮಗುವನ್ನು ಭರಿಸಬೇಕೆಂಬ ಅದಮ್ಯ ಬಯಕೆಯನ್ನು ಉಕ್ಕಿಸುವವನೂ ಆಗಿರಬೇಕೆಂಬ ಉತ್ಕಟ ಹಂಬಲ ಇವು ಅಚಲ'ಳನ್ನು ಆ ಹೆಸರು ಸೂಚಿಸುವುದಕ್ಕಿಂತ ಭಿನ್ನವಾಗಿ ಚಿತ್ರಿಸುತ್ತವೆ. ಮಾತ್ರವಲ್ಲ ನೋಡಲು ಬಂದ ವರನ ಮುಂದೆ ಸಿಂಗರಿಸಿಕೊಂಡು ಕೂತ ಹೆಣ್ಣಿನ ಅಂತರಂಗದಲ್ಲಿ ದೊಡ್ಡ ಜ್ವಾಲಾಮುಖಿಯೇ ಹುದುಗಿರಬಹುದಾದ ಸ್ಥಿತಿಯೊಂದಕ್ಕೆ ಕನ್ನಡ ಹಿಡಿದು ತೋರಿಸುವುದರಲ್ಲಿ ವೈದೇಹಿಯವರು ಆ ಸಂಪ್ರದಾಯಿಕ ಶೃತಿಯೊಂದು ಕಥಾ ಸಾಹಿತ್ಯಕ್ಕೆ ತಂದು ಜೋಡಿಸುತ್ತಾರೆ.

ಮದುವೆ, ಕುಟುಂಬ, ದಾಂಪತ್ಯಗಳಂಥ ಪರಂಪರಾಗತ ಸಂಸ್ಥೆಗಳ ಬೇರು ಬಿಳಿಲುಗಳನ್ನೇ ಮತ್ತೆ ಮತ್ತೆ ಹಲವಾರು ಮಗ್ಗಲುಗಳಿಂದ ಪರೀಕ್ಷಿಸುವ ಪ್ರಯತ್ನ ಮರಗಿಡಬಳ್ಳಿಯ ಪುಟಗಳಲ್ಲಿ ಶುರುವಾಗಿದೆ. ಈ ತಲಶೋಧನೆ ತುಂಬ ಪಕ್ವವಾದ ಜೀವನದರ್ಶನಕ್ಕೆ ಯತ್ನಿಸುವುದು. ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ' ಸಂಕಲನದಲ್ಲಿ ಎನ್ನಬಹುದಾದರೂ, ಅದರ ಪೂರ್ವ ರಂಗವು ಮೊದಲೆರಡ ಸಂಕಲನಗಳಲ್ಲೇ ಸಿದ್ಧವಾಗುತ್ತದೆಂಬುದನ್ನು ಗಮನೀಸಬೇಕು. ಮದುವೆಯ ಸಂಸ್ಥೆಯ ಒಳಗೆ ಬದುಕುವ ಹೆಣ್ಣಿನ ನಾಲ್ಕು ಮಾನಸಿಕ ಸ್ಥಿತಿಗಳನ್ನು, ಒಂದು ಅಪರಾಧದ ತನಿಖೆ',; ಗೂಡಿನೊಳಗೊಂದು ಹಕ್ಕಿ ಮತ್ತು ಅಪರಿಚಿತ ಕಥೆಗಳು ಕಟ್ಟಿಕೊಡುತ್ತವೆ.

ಗಂಡನನ್ನು ಬಿಟ್ಟ ತವರಿಗೆ ಬಂದ ಕುಸುಮ ತನ್ನ ಸ್ಥಿತಿಯೊಂದಿಗೆ ಬಾಬಿಯ ದಾಂಪತ್ಯದ ವೈಪರೀತ್ಯಗಳನ್ನು ಹೋಲಿಸಿಕೊಳ್ಳುವಂತಾಗುವುದನ್ನು ಒದು ಅಪರಾಧದ ತನಿಖೆ ಚಿತ್ರಿಸುತ್ತದೆ. ಮೊದಲ ಹೆಂಡತಿಗೆ ಮಕ್ಕಳಾಗಲಿಲ್ಲವೆಂದು ಬಾಬಿಯನ್ನು ಮದುವೆಯಾದರೂ ಅವಳ ಗಂಡನಿಗೆ ಊರ ತುಂಬ ಮೇವು ಬೇರೆ. ಹೀಗಿದ್ದೂ ತನ್ನ ಕಿರಿವಯಸ್ಸಿನ ಮಗಳಿಗೆ ಆದಷ್ಟು ಬೇಗ ಮದುವೆ ಮಾಡುವ ತವಕ ಬಾಬಿಯದು. ಈ ವಿಷಯದಲ್ಲಿ ಹೆಣ್ಣಿನ ಮದುವೆಯ ಬಗ್ಗೆ ಸಮಾಜ ಹೊಂದಿರುವ ಆತಂಕಗಳೆಲ್ಲ ಬಾಬಿಯಲ್ಲಿರುವುದನ್ನು ಗಮನಿಸಬೇಕು. ಹೂಂ ಈಗಲೇ ಸಮ ಏನೂ ಗೊತ್ತಿಲ್ಲ. ಆಮೇಲೆ ಅಂಥವ ಬೇಕು ಇಂಥವ ಬೇಕು ಎಂತ ಕೂತುಕೊಳ್ಳುವುದು. ಕಡೆಗೆ ಯಾರನ್ನಾದರೂ ಕಟ್ಟಿಕೊಂಡು ಓಡಿಹೋಗುವುದು. ಇಲ್ಲ ಗಂಡನ ಮನೆಯಲ್ಲಿ ಬೇಯಲಿಕ್ಕಾಗದೆ ಅರ್ಧ ಆಟಕ್ಕೆ ವಾಪಸ್ಸು ಬಂದವರಂತೆ ಬರುವುದು ಎಂಬ ಬಾಬಿಯ ಸಹಜ ಒಡಬಡಿಕೆ ಕುಸುಮಳಿಗೇ ನಾಟವಂಥದೂ ಆಗುತ್ತದೆ. ಕುಸುಮಳ ಮನಕ್ಕೆ ಅದು ಅಪರಾಧದ ತನಿಖೆಯಾಗಿ ಕಾಣುತ್ತದೆ. ಮದುವೆಯಾದ ಈ ಇಬ್ಬರಿಗೂ ಆ ಬದುಕಿನಲ್ಲಿ ಅಸಂತೋಷವೇ ಇದೆ. ಆದರೆ ತಮ್ಮ ಅಸಹನೆಯ ಪ್ರತಿಕ್ರಿಯೆಯನ್ನು ಅವರು ತೋರುವ ರೀತಿ ಬೇರೆ ಬೇರೆ.

'ಗೂಡಿನೊಳಗೊಂದು ಹಕ್ಕಿ' ಕಥೆಯು ವಿವಾಹಿತ ಹೆಣ್ಣಿನ ಸ್ವಾತಂತ್ರ್ಯದ ಹಂಬಲಗಳ ನಿಜವನ್ನು ಶೋಧಿಸುತ್ತದೆ. ಹೊರಗೆ ಬೀಗ ಹಾಕಿಸಿಕೊಂಡು ಒಳಗೆ ಒಬ್ಬಳೇ ಇರಬೇಕೆಂತ ಆಸೆ, ಇರುವ ಮಾಲತಿ ಈ ಸ್ವಾತಂತ್ರ್ಯವನ್ನು ಪ್ರಯೋಗಿಸಿಯೂ

ನೋಡುತ್ತಾಳೆ. ಗಂಡನ ಬಟ್ಟೆಗಳನ್ನು ಹಾಕಿಕೊಂಡು ಕನ್ನಡಿಯಲ್ಲಿ ನೋಡಿಕೊಳ್ಳುವುದು, ಸಿಗರೇಟು ಸೇದಲು ಯತ್ನಿಸುವುದು, ಕೊನೆಗೆ ಬಟ್ಟೆಗಳನ್ನೆಲ್ಲ ಕಳಚಿ ಬಯಲಾಗುವುದೂ ಅವಳ ಪ್ರಯೋಗಗಳು, ಈ ಎಲ್ಲಾ ಸ್ವಾತಂತ್ರ್ಯ ಆಕೆ ದಕ್ಕಿಸಿಕೊಂಡದ್ದು ಹೊರಗಿನಿಂದ ಯಾರೂ ಬರಲಾಗದಂತೆ ಬೀಗ ಹಾಕಿಸಿಕೊಂಡ ಸ್ಥಿತಿಯಲ್ಲಿ ಯಾರೂ ಗಮನಿಸದ ಈ ಸ್ಥಿತಿಯಲ್ಲೂ ಮಾಲತಿಗೆ ನಿಜವಾಗಿ ತಾನು ಒಬ್ಬಳೇ ಎಂಬ ಸ್ಥಿತಿಯನ್ನು ಮನದಲ್ಲಿ ತಳೆಯುವುದೇ ಸಾಧ್ಯವಾಗದೆ ಕೊನೆಗೆ ಗಂಡ ವಾಪಸ್ಸು ಬರುವ ಹೊತ್ತಿಗೆ ತನ್ನ ಮಾಮೂಲಿ ವೇಷವನ್ನೇ ತೊಟ್ಟುಕೊಳ್ಳುತ್ತಾಳೆ. ಯಾವ ಕ್ಷಣಗಳೂ ಸ್ವಂತವಲ್ಲ. ಎಲ್ಲ ಬಾಡಿಗೆಯವೇ ಕೊಡುವ ಬಾಡಿಗೆಯಾದರೂ ಎಷ್ಟು. ತಾನೇ ದಿವಾಳಿಯಾಗುವಷ್ಟು, ವೇಷ ತೊಟ್ಟು ಕಳಚುವ ಕ್ರಿಯೆಯು ಎಷ್ಟು ಕಷ್ಟದ್ದೆಂಬ ಗಹನವಾದ ತಾತ್ವಿಕ ಪ್ರಶ್ನೆಯೊಂದು ಇಲ್ಲಿ ಏಳುತ್ತದೆ. ಹೆಣ್ಣಿನ ದೃಷ್ಟಿಕೋನದಿಂದ ದಾಂಪತ್ಯದ ಮಿತಿಗಳ ಬಗ್ಗೆ ಎತ್ತಿರುವ ಪ್ರಶ್ನೆ ಇದಾದರೂ ಆ ಸೀಮೆಯನ್ನೂ ಮೀರುತ್ತ ಮಾನವರೆಲ್ಲರ ಪ್ರಶ್ನೆಯಾಗಿ ಅದು ಸೂಚಿಸುವ ಆಯಾಮ ಗಮನಾರ್ಹ.

ಹೆಣ್ಣಿನ ಬಗೆಗಿನ ರೂಢಿಗತ ನಂಬಿಕೆ, ಕಲ್ಪನೆ, ಗ್ರಹಿಕೆಗಳನ್ನು ವೈದೇಹಿ ನಿರಾಯಾಸವಾದ ರೀತಿಯಿಂದ, ತೀರ ಸಹಜವಾಗಿದೆ ಎಂಬಂತೆ ಬುಡಮೇಲು ಮಾಡಿಬಿಡಬಲ್ಲರು. ಈ ಬುಡಮೇಲು ಮಾಡುವ ಕ್ರಿಯೆ ಹೆಣ್ಣಿನ ಅಂತರಾಳವನ್ನು ಬಚ್ಚಿಡುವಲ್ಲಿದೆ ಅವಳ ಮನದ ಮಸುಕಾದ ಭಾವ ಲೋಕಕ್ಕೆ ಥಟ್ಟನೆ ದೊಂದಿಯನ್ನು ಹಿಡಿವ ಹಾಗೆ ವೈದೇಹಿ ಹೆಣ್ಣುಗಳೊಳಗನ್ನು ಹಿಡಿದು ಕೊಡುತ್ತಾರೆ. ಇದರಿಂದಾಗಿ 'ಪಾತಿವ್ರತ್ಯ' ಗರತಿ ಗೌರಮ್ಮ, ಸೇವಾನಿಷ್ಠ, ಪತ್ನಿಯ ಸಂಪ್ರದಾಯಿಕ ಹೊರ ಚೌಕಟ್ಟನ್ನು ಒಡೆದಾಗಲೂ ಅಸಹಜತೆ, ವಿಕೃತಿಯ ಆರೋಪಕ್ಕೆ ಆಸ್ಪದವಾಗದಂತೆ ಹೆಣ್ಣನ್ನು ಅವರು ನಮ್ಮೆದುರು ನಿಲ್ಲಿಸುತ್ತಾರೆ. ಹೀಗೂ ಹೌದೆ ಎಂಬ ಒಂದು ವಿಸ್ಮಯ ಬೆರಗು ಬರೀ ಗಂಡಸರಿಗಷ್ಟೇ ಹುಟ್ಟುವುದಲ್ಲ. ಈ ಕಥೆಗಳನ್ನು ಓದಿಕೊಳ್ಳುವ ಹೆಣ್ಣಿಗೂ ಕೂಡ ತನ್ನ ಎದೆಮುಟ್ಟಿ ನೋಡಿಕೊಳ್ಳುವಂತೆ, ನಿರಾಳ ಉಸಿರು ಬಿಡುವಂತೆ ಆಗಬಲ್ಲುದು. ಈ ರೀತಿ ಒಳ್ಳೆಯತನ, ಸಭ್ಯತೆ, ವಿಧೇಯತೆ, ಸಹನೆಗಳ ಸಾಂಪ್ರದಾಯಿಕ ಸ್ತ್ರೀ ಪ್ರತೀಕಗಳ ಒಳಗುಟ್ಟನ್ನು ಒಡೆದು ತೋರುವುದರಿಂದ ಸಹಜವಾಗಿಯೇ ಓದುಗರು ಕಸಿವಿಸಿಗೊಂಡು ಬೆಚ್ಚಿಬೀಳಬೇಕಾಗುತ್ತದೆ.

ಈ ರೀತಿ ಬೆಚ್ಚಿ ಬೀಳಿಸುವುದು ಒಂದೇ ಉದ್ದೇಶವಲ್ಲ. ಅದಕ್ಕಿಂತ ಮುಖ್ಯ ಒಳಗಿನ ನಿಜದ ಪದರಗಳನ್ನು ಬಿಡಿಸಬೇಕೆಂಬ ಯತ್ನ. ಮಾಲತಿಯದು 'ಗೂಡಿನೊಳಗೊಂದು ಹಕ್ಕಿ'ಯ ಸ್ಥಿತಿ ಇರಬಹುದು. ಆದರೆ 'ಆತ' ಎಂಬ ಕಥೆಯ ನಾಯಕಿ ತನ್ನ ಹಳೆಯ ಗೆಳೆಯನನ್ನು ಬಹಳ ವರ್ಷಗಳ ನಂತರ ಭೆಟ್ಟಿಯಾದಾಗ - ಒಬ್ಬರು ಮತ್ತೊಬ್ಬರ ಕಣ್ಣಿನಲ್ಲಿ ತಮ್ಮ ಬದುಕಿನದೇ ಪ್ರತಿಬಿಂಬವನ್ನು ಕಾಣಲು ಯತ್ನಿಸುವುದು ಕುತೂಹಲಕರ. ಇಬ್ಬರದೂ ಅವರವರದೇ ಆದ ಸಂಸಾರವಿದೆ. ಆದರೆ ಬಸ್ಸಿನಲ್ಲಿ ಕುಳಿತಿರುವಾಕೆ, ಕೆಳಗೆ ತನ್ನನ್ನೇ ದಿಟ್ಟಿಸುತ್ತಿರುವ ಕಣ್ಣುಗಳನ್ನು ಗಮನಿಸಿದರೆ ತಾನು ಹಿಂದೆ ನೋಡಿದ್ದ ಭೇಟಿಯಾಗಿದ್ದ, ಮಾತನಾಡಿದ್ದ, ಮೆಚ್ಚಿದ್ದ ಅನೇಕ ಗಂಡಸರು ನೆನಪಿಗೆ ಬರುತ್ತಾರೆ. ಅದುವರೆಗೆ ಬಚ್ಚಿಟ್ಟುಕೊಂಡ ಭಾವನೆಗಳೂ ಮೇಲೆ ಬಂದಾಗ ಆಕೆಗೆ ರೇಜಿಗೆ ಅಂದಹಾಗೆ, ತನ್ನ ಗಂಡ ಮನೀಷನನ್ನು ನೆನಪಿಸಿಕೊಂಡರೆ ಯಾಕೆ ರೋಮಾಂಚನವಾಗುವುದಿಲ್ಲ ? ಎಂಬ ಪ್ರಶ್ನೆಯೂ ಹಾಗೆಯೇ ತಲೆಗೆ ಬರುತ್ತದೆ. ಮೆಚ್ಚಿದವನು ಕೈಹಿಡಿಯದೆ, ಕೈ ಹಿಡಿದವನನ್ನು ನಿಜವಾಗಿಯೂ ಮೆಚ್ಚಲೂ ಆಗದೆ ಬದುಕುತ್ತಿರುವ ತನ್ನ ಸ್ಥಿತಿಯ ಅರಿವನ್ನು ಮಾತ್ರವಲ್ಲ. ತನ್ನ ಹೆಣ್ತನ ಪುಲಕಗೊಳ್ಳುವುದರ ಮೂಲವೇನೆಂದೂ ಆಕೆ ಪ್ರಶ್ನಿಸಿಕೊಳ್ಳುತ್ತಾಳೆ.

ಈ ಕಥೆ ಕೂಡ ಮನುಷ್ಯರು ಬಯಸುವುದು, ಅವರಿಗೆ ದೊರಕುವುದು ಬೇರೆ, ಬೇರೆಯೇ ಅವುಗಳ ನಡುವಿನ ಅಂತರ ತುಂಬಲಾರದ್ದೆಂಬ ತಾತ್ವಿಕತೆಯುಳ್ಳದ್ದು. ಹೆಣ್ಣಿನ ಅನುಭವಕ್ಕೆ ನಿಷ್ಠವಾಗಿಯೂ ಅದರಾಚೆಗೆ ಮಾನವೀಯ ನೆಲೆಯನ್ನು ಸ್ಪರ್ಶಿಸುವ ಹಂಬಲವುಳ್ಳದ್ದು, ಸ್ವಾತಂತ್ರ್ಯದ ಪ್ರಶ್ನೆಯಂತೆ, ಈ ಬಯಸಿದ್ದನ್ನು ಪಡೆಯಲಾಗದ ಸ್ಥಿತಿ ಕೂಡ ಯಾರಾದರೂ ಅನುಭವಿಸುವಂಥಾದ್ದು. ಅದಕ್ಕೇ ಹೆಣ್ಣು, ಗಂಡೆಂಬ ತಾರತಮ್ಯವಿಲ್ಲ ಎನ್ನುವುದು ವೈದೇಹಿಯವರು ಮುಟ್ಟಿಸಿರುವ ಕಲಾತ್ಮಕ ರೀತಿ ಸೊಗಸಾದದ್ದು.

ಗಂಡನನ್ನು ಬಿಟ್ಟು ತವರಿಗೆ ಬಂದ ಕುಸುಮ ತನ್ನ ಸ್ಥಿತಿಯೊಂದಿಗೆ ಬಾಯಿಯ ದಾಂಪತ್ಯದ ವೈಪರೀತ್ಯಗಳನ್ನು ಹೋಲಿಸಿಕೊಳ್ಳುವಂತಾಗುವುದನ್ನು 'ಒಂದು ಅಪರಾಧದ ತನಿಖೆ' ಚಿತ್ರಿಸುತ್ತದೆ. ಮೊದಲ ಹೆಂಡತಿಗೆ ಮಕ್ಕಳಾಗಲಿಲ್ಲವೆಂದು ಬಾಬಿಯನ್ನು ಮದುವೆಯಾದರೂ ಅವಳ ಗಂಡನಿಗೆ 'ಊರ ತುಂಬ ಮೇವು ಬೇರೆ', ಹೀಗಿದ್ದೂ

ತನ್ನ ಕಿರಿವಯಸ್ಸಿನ ಮಗಳಿಗೆ ಆದಷ್ಟು ಬೇಗ ಮದುವೆ ಮಾಡುವ ತವಕ ಬಾಬಿಯದು. ಈ ವಿಷಯದಲ್ಲಿ ಹೆಣ್ಣಿನ ಮದುವೆಯ ಬಗ್ಗೆ ಸಮಾಜ ಹೊಂದಿರುವ ಆತಂಕಗಳೆಲ್ಲ ಬಾಬಿಯಲ್ಲಿರುವುದನ್ನು ಗಮನಿಸಬೇಕು. ಹೆಣ್ಣು ಈಗಲೇ ಸಮ. ಏನೂ ಗೊತ್ತಿಲ್ಲ' ಆಮೇಲೆ ಅಂಥವ ಬೇಕು ಇಂಥದ ಬೇಕು ಎಂತ ಕೂತು ಕೊಳ್ಳುವುದು. ಕಡೆಗೆ ಯಾರನ್ನಾದರೂ ಕಟ್ಟಿಕೊಂಡು ಓಡಿಹೋಗುವುದು. ಇಲ್ಲ ಗಂಡನ ಮನೆಯಲ್ಲಿ ಬೇಯಲಿಕ್ಕಾಗದೆ ಅರ್ಧ ಆಟಕ್ಕೆ ವಾಪಸ್ಸು ಬಂದವರಂತೆ ಬರುವುದು' ಎಂಬ ಬಾಯಿಯ ಸಹಜ ಬಡಬಡಿಕೆ ಕುಸುಮಗಳಿಗೆ ನಾಟುವಂಥದೂ ಆಗುತ್ತದೆ. ಕುಸುಮಳ ಮನಕ್ಕೆ ಅದು ಅಪರಾಧದ ತನಿಖೆಯಾಗಿ ಕಾಣುತ್ತದೆ. ಮದುವೆಯಾದ ಈ ಇಬ್ಬರಿಗೂ ಆ ಬದುಕಿನಲ್ಲಿ ಅಸಂತೋಷವೇ ಇದೆ. ಆದರೆ ತಮ್ಮ ಆಸಹನೆಯ ಪ್ರತಿಕ್ರಿಯೆಯನ್ನು ಅವರು ತೋರುವ ರೀತಿ ಬೇರೆ ಬೇರೆ.

'ಗೂಡಿನೊಳಗೊಂದು ಹಕ್ಕಿ' ಕಥೆಯ ವಿವಾಹಿತ ಹೆಣ್ಣಿನ ಸ್ವಾತಂತ್ರ್ಯದ ಹಂಬಲಗಳ ನಿಜವನ್ನು ಶೋಧಿಸುತ್ತದೆ. ' ಹೊರಗೆ ಬೀಗಹಾಕಿಸಿಕೊಂಡು ಒಳಗೆ ಒಬ್ಬಳೇ ಇರಬೇಕೆಂತ ಆಸೆ' ಇರುವ ಮಾಲತಿ ಈ 'ಸ್ವಾತಂತ್ರ್ಯವನ್ನು' ಪ್ರಯೋಗಿಸಿಯೂ ನೋಡುತ್ತಾಳೆ. ಗಂಡನ ಬಟ್ಟೆಗಳನ್ನು ಹಾಕಿಕೊಂಡು ಕನ್ನಡಿಯಲ್ಲಿ ನೋಡಿಕೊಳ್ಳುವುದು, ಸಿಗರೇಟು ಸೇದಲು ಯತ್ನಿಸುವುದು, ಕೊನೆಗೆ ಬಟ್ಟೆಗಳನ್ನೆಲ್ಲ ಕಳಚಿ ಬಯಲಾಗುವುದೂ ಅವಳ ಪ್ರಯೋಗಗಳು, ಈ ಎಲ್ಲಾ ಸ್ವಾತಂತ್ರ್ಯ ಆಕೆ ದಕ್ಕಿಸಿಕೊಂಡದ್ದು ಹೊರಗಿನಿಂದ ಯಾರೂ ಬರಲಾಗದಂತೆ ಬೀಗ ಹಾಕಿಸಿಕೊಂಡ ಸ್ಥಿತಿಯಲ್ಲಿ ಯಾರೂ ಗಮನಿಸದ ಈ ಸ್ಥಿತಿಯಲ್ಲೂ ಮಾಲತಿಗೆ ನಿಜವಾಗಿ ತಾನು ಒಬ್ಬಳೇ ಎಂಬ ಸ್ಥಿತಿಯನ್ನು ಮನದಲ್ಲಿ ಕಳೆಯುವುದೇ ಸಾಧ್ಯವಾಗದೆ, ಕೊನೆಗೆ ಗಂಡ ವಾಪಸ್ಸು ಬರುವ ಹೊತ್ತಿಗೆ ತನ್ನ ಮಾಮೂಲಿ ವೇಷವನ್ನೇ ತೊಟ್ಟು ಕೊಳ್ಳುತ್ತಾಳೆ. 'ಯಾವ ಕ್ಷಣಗಳೂ ಸ್ವಂತವಲ್ಲ. ಎಲ್ಲಿ ಬಾಡಿಗೆಯವೇ, ಕೊಡುವ ಬಾಡಿಗೆಯಾದರೂ ಎಷ್ಟು, ತಾನೇ ದಿವಾಳಿಯಾಗುವಷ್ಟು.

ವೇಷ ತೊಟ್ಟು ಕಳಚುವ ಕ್ರಿಯೆಯು ಎಷ್ಟು ಕಷ್ಟದ್ದೆಂಬ ಗಹನವಾದ ತಾತ್ವಿಕ ಪ್ರಶ್ನೆಯೊಂದು ಇಲ್ಲಿ ಏಳುತ್ತವೆ. ಹೆಣ್ಣಿನ ದೃಷ್ಟಿಕೋನದಿಂದ ದಾಂಪತ್ಯದ ಮಿತಿಗಳ ಬಗ್ಗೆ ಎತ್ತಿರುವ ಪ್ರಶ್ನೆ ಇದಾದರೂ ಆ ಸೀಮೆಯನ್ನು ಮೀರುತ್ತ ಮಾನವರೆಲ್ಲರ ಪ್ರಶ್ನೆಯಾಗಿ ಅದು ಸೂಚಿಸುವ ಆಯಾಮ ಗಮನಾರ್ಹ.

'ಅಕ್ಕು' ಮತ್ತು 'ಚಂದಲೆ', ಕಥೆಗಳು ' ಅಂತರಂಗದ ಪುಟಗಳು' ಸಂಕಲನದ ತುಂಬ ಸಂಕೀರ್ಣ ಕಥೆಗಳೆನ್ನಬಹುದು. ಮದುವೆ ಆದರೂ ಸಾಂಸಾರಿಕ ಸುಖವಿಲ್ಲದ ನತದೃಷ್ಟೆ ಹೆಣ್ಣು 'ಅಕ್ಕು'ವಿನ ಬದುಕಿನ ವಿವರಗಳನ್ನು ಬಿಚ್ಚಿ ತೋರುವ ಹೊತ್ತಿನಲ್ಲಿ ಒಂದೆಡೆ ಹೆಣ್ಣಿನ ನೋವು ಅವಮಾನ, ದಮನಗಳ ಮೂರ್ತಿ ರೂಪವಾದರೆ, ಮತ್ತೊಂದೆಡೆ ಅವಳು ಹುಚ್ಚುಹತ್ತಿ ಆಡುವ ಮಾತು, ತೋರುವ ಪ್ರತಿಕ್ರಿಯೆಗಳೆಲ್ಲ ಸಮಾಜದ ಕ್ರೌರ್ಯಕ್ಕೆ ಬರೆವ ಭಾಷ್ಯವಾಗುತ್ತದೆ. ಹೀಗೆ ಅಕ್ಕು ಕುಂಕುಮ, ಕರಿಮಣಿಗಳಿದ್ದೂ ಗಂಡನಿಲ್ಲದ, ಕೆಣಕಿದವರಿಗೆಲ್ಲ ಮುಟ್ಟಿನೋಡಿಕೊಳ್ಳುವಂತೆ ಉತ್ತರ ಕೊಡುವ ವಿಲಕ್ಷಣ ವ್ಯಕ್ತಿ. ಈ ಸಮಾಜದಲ್ಲಿನ ಮಾನವ ಸಂಬಂಧಗಳ ಲೈಂಗಿಕ ಸಂಬಂಧಗಳ ಗೋಜಲುಗಳ ಬಗ್ಗೆ ಮೌಲ್ಯಗಳ ಬಗ್ಗೆ ಸಮಾಜದ ಸ್ವಸ್ಥತೆಯ ಬಗ್ಗೆ ಅದರ ಕ್ರೌರ್ಯ, ಅಮಾನವೀಯತೆಗಳ ಬಗ್ಗೆ ಲೇಖಕಿಯ ವಿಮರ್ಶೆಯೂ ಆಗುವಂತೆ ಅವಳ ಪಾತ್ರದ ನಿರೂಪಣೆಯಿದೆ.

ಮದುವೆಯಾದ ಗಂಡು ಜವಾಬ್ದಾರಿಯನ್ನು ತೊರೆದು ತನ್ನ ಪಾಡು ಅರಸಿಕೊಂಡು ಹೋಗಿಬಿಟ್ಟರೆ ಆತನನ್ನು ನಂಬಿದ ಹೆಣ್ಣು ಹೇಗೆ ಬಾಳಬೇಕು ಎಂಬುದು ಸಮಸ್ಯೆಯಾಗುತ್ತದೆ. 'ಅಕ್ಕು' ಕತೆಯ ಅಕ್ಕು ತನ್ನ ಗಂಡನ ಅಂಥ ಸ್ಥಿತಿಯನ್ನು, ಮಾನಸಿಕ ಸ್ಥಿರತೆಯನ್ನು ಕೆಡಿಸಿಕೊಳ್ಳುವುದರ ಮೂಲಕ ಮೀರಲು ಪ್ರಯತ್ನಿಸುತ್ತಾಳೆ. ಸುಂದರವಾದದ್ದನ್ನು ವಿರೋಧಿಸುವ ಛಲ ಅವಳದು. ಇದಕ್ಕೆ ಮೂಲ ಸುಂದರವಾಗಿದ್ದ ತನ್ನನ್ನು ಗಂಡ ತೊರೆದು ಹೋದದ್ದು ಅವಳ ಮನಸ್ಸಿನಾಳದಲ್ಲಿರಬೇಕು. ಮತ್ತೆ ಬಂದ ಅವನನ್ನು ತನ್ನ ಬಳಿ ಕೂಡಿಸಿಕೊಳ್ಳದೆ ಹೊಡೆದು ಅಟ್ಟಿ ಬಿಡುತ್ತಾಳೆ. ಅವಳ ಅಂಥ ಸ್ಥಿತಿಯನ್ನು ವಿರೋಧಿಸಿ ಬಡಿಯುವ ವಾಸುಚಿಕ್ಕಪ್ಪಯ್ಯನಿಗೆ, ತಿಪ್ಪಣ್ಣಯ್ಯನ ಹೆಂಡತಿಯೊಡನೆ ಇಟ್ಟುಕೊಂಡಿರಬಹುದಾದ ಸಂಬಂಧವನ್ನು ಅಕ್ಕು ಬಹಿರಂಗ ಪಡಿಸುತ್ತಿದ್ದಾಳೆ ಎಂಬ ಕಾರಣವು ಹಿನ್ನೆಲೆಯಲ್ಲಿ ಪ್ರಮುಖವಾಗಿರಬಹುದು. ಆವರಣ ಅವಳನ್ನು ಗ್ರಹಿಸುವ ರೀತಿ ಬಹಳ ಪೇಲವವಾದುದು. ಆದ್ದರಿಂದ ಅವರೆಲ್ಲರನ್ನು ಮೀರಿಸುವಂತೆ ಸಹಜವಲ್ಲದ ಸ್ಥಿತಿಯಲ್ಲಿ ಕೂಡ ಅಕ್ಕು ಎದ್ದುಕಾಣುತ್ತಾಳೆ.

ಚಂದಲೆ' ಯಲ್ಲಿ ಸಮಾಜದ ನೈತಿಕ ನಂಬಿಕೆಗಳಿಗೂ ವೇಶ್ಯಾತನದ ಬದುಕಿನ ಮೌಲ್ಯಗಳಿಗೂ ಮುಖಾಮುಖಿಯಾಗುವಂತೆ ಮಾಡಿರುವ ಲೇಖಕಿ, ಇಲ್ಲಿಯೂ

ಶೋಧಿಸಲು ಯತ್ನಿಸುವುದು ಲೈಂಗಿಕ ಸಂಬಂಧಗಳನ್ನು ಮೌಲ್ಯಗಳನ್ನು ಇದೇ ರೀತಿ 'ಸುಶಿಕ್ಷಿತ, ಶಿಷ್ಯ, ಮಧ್ಯಮವರ್ಗದ ಲೈಂಗಿಕ ಕುತೂಹಲಗಳು, ಸಂಕೋಚಗಳು, ಬಯಕೆಗಳನ್ನು ಯುವತಿಯ ಮಾನಸಿಕ ಹೊಯ್ದಾಟಗಳು ಮುಂದಿನ ಸಂಕಲನದ 'ಸೌಗಂಧಿಯ , ಕಥೆ ಇನ್ನಷ್ಟು ಸೂಕ್ಷ್ಮವಾಗಿ ಶೋಧಿಸಲು ಯತ್ನಿಸುತ್ತದೆ.

ಈ ಮಧ್ಯೆ ದೊಡ್ಡವರು ವಯಸ್ಸಿಗೆ ಬಂದ ಹುಡುಗಿಯರ ಬಗೆಗೆ ಸಾಂಪ್ರದಾಯಿಕ ರೀತಿಯಲ್ಲಿ ನಿಯಂತ್ರಣಗಳನ್ನು ಹೇರುವ, ಅವರು ಯಾವುದನ್ನು ಕೇಳಬೇಕು ಮತ್ತು ಕೇಳಬಾರದು ಎಂಬುದನ್ನು ನಿರ್ಧರಿಸಿ ಬಿಟ್ಟವರಂತೆ ಕಾಣುವ ಆದರೆ ಅವರ ಎದುರೇ ಕೇಳಬಾರದು ಎನ್ನುವ ಸಂಗತಿಗಳನ್ನು ಗಟ್ಟಿಯಾಗಿ ಹೇಳುವ ಬೇಜವಾಬ್ದಾರಿ ನಡವಳಿಕೆಗಳೂ ಗಮನ ಸೆಳೆಯುತ್ತದೆ. ಯಾರ ಪರವಾಗಿಯೂ ನಿಲ್ಲದೆ ಆವರಣವನ್ನು ಸ್ಪಷ್ಟವಾಗಿ ಗ್ರಹಿಸುತ್ತಿರುವುದು ಲೇಖಕಿಯ ಬದುಕುಪರವಾದ ಕಾಳಜಿಗೆ ನಿದರ್ಶನವಾಗಿದೆ.

ಚಿಪ್ಪು ಕಥೆ ಮದುವೆಯೆಂಬುದು ಟೊಳ್ಳು ವ್ಯವಸ್ಥೆ ಎಂಬುದರ ಮೇಲೆ ಬೆಳಕನ್ನು ಚೆಲ್ಲುತ್ತದೆ. ಈ ಕಥಾ ನಾಯಕಿಯ ಒಳಮನಸ್ಸು ವಿವಾಹ ವ್ಯವಸ್ಥೆ ಮತ್ತು ಮದುವೆಯಾಗಿರುವ ಗಂಡನ್ನು ಪ್ರಶ್ನಿಸುತ್ತದೆ. ನಾಯಕಿಯ ತಂದೆಯ ಪ್ರಕಾರ ಹುಡುಗಿಯನ್ನು ಮದುವೆಯಾಗಲು ಒಬ್ಬ ವರನಿಗಿರಬೇಕಾದ ಅರ್ಹತೆ ಎಂದರೆ ಆಸ್ತಿ, ಓದು ಇಷ್ಟಿದ್ದರೆ ಸಾಕು. ಆದರೆ ಇಲ್ಲಿನ ನಾಯಕಿ ತನಗೆ ಗಂಡನಾಗುವವನಿಗೆ ಹಲವು ಗುಣಗಳಿರಬೇಕು ಎಂದು ಮನಸ್ಸಿನಲ್ಲೇ ಬಯಸುತ್ತಾಳೆ. ಆದರೆ ಕಥೆಯುದ್ದಕ್ಕೂ ಎಲ್ಲೂ ಹೊರ ವ್ಯಕ್ತಡಿಸುವುದಿಲ್ಲ. ಅವಳ ಮಾತುಗಳಲ್ಲೇ ಗ್ರಹಿಸುವುದಾದರೆ ಹೆಚ್ಚೇಕೆ ತನ್ನ ದಾಂಪತ್ಯ ತಾನು ಕಂಡ ದಾಂಪತ್ಯಗಳಂತೆ ಇರಬಾರದು. ಅಲ್ಲಿ ಪ್ರೀತಿ ವಿಶ್ವಾಸವೆಲ್ಲ ಯಾಂತ್ರಿಕವಾಗಿದೆ. ಈ ಯಾಂತ್ರಿಕತೆಯನ್ನು ಒಡೆಯಬೇಕು. ಅದಕ್ಕೆ ಜೀವ ತುಂಬಬೇಕು ಹೃದಯ। ಹೃದಯವನ್ನು ಪ್ರೀತಿಸಬೇಕೆ ವಿನಾ ಗುಂಗುರು ಕೂದಲಿನಲ್ಲಿ ಎಸಳು ಮೂಗಿನಲ್ಲಿ. ಬಿಳಿಯ ಚರ್ಮದಲ್ಲಿ, ನಸುನಗುವಿನಲ್ಲಿ ಮಾತ್ರವೇ ಒಲವು ಹುಡುಕಿ ಒಳಗಿನ ಆತ್ಮದ ಗುರುತನ್ನು ಹಚ್ಚಿದಂತೆ ನಟಿಸುವ ಈ ನಟನಗೆ ಪೂರ್ಣ ವಿರಾಮ ಬೀಳಬೇಕು. ತಾನು ಮೇಲೇರಬೇಕು. ತನ್ನ ಬದುಕೇ ..

ಇಷ್ಟೆಲ್ಲ ಆಲೋಚಿಸುವ ನಾಯಕಿ ಕೊನೆಗೆ ಧೈರ್ಯವಾಗಿ ಯಾವುದನ್ನು ವ್ಯಕ್ತಪಡಿಸಲಾಗದ ತನ್ನ ಅಸಹಾಯಕ ಸ್ಥಿತಿಯನ್ನು ಈ ಸಾಲುಗಳು ಹೇಳುತ್ತವೆ. ದಿನಗಳು ಕಳೆಯುತ್ತವೆ. ಇದೇ ಬೇಲಿಯೊಳಗಿನ ಹೆಪ್ಪುಗಟ್ಟಿ ಕೊಳೆಯತ್ತಿದ್ದ ಗಾಳಿಯನ್ನೇ ಸೇವಿಸುತ್ತ ಅಪ್ಪ ಬಂದು ಎಷ್ಟು ಸಾಧ್ಯವೋ ಅಷ್ಟೂ ಔಪಚಾರಿಕವಾಗಿ 'ಆಗಬಹುದಾ ನಿಂಗೆ?'ಎಂದು ಕೇಳಿದಾಗ, ಒಪ್ಪಿಗೆ ಅಪ್ಪಯ್ಯ ಎಂದು ಧೈರ್ಯವಾಗಿ ಹೇಳಲೂ ಶಕ್ತಿಗುಂದಿ ಮರದ ಮೇಜನ್ನು ಚಿವುಟುವ ಯತ್ನ ಮಾಡುತ್ತಾ ನೀವು ಒಪ್ಪಿದ ಮೇಲೆ ನನ್ನದೇನು ಅಪ್ಪಯ್ಯ, ಎಂದು ಕಳಕಿದ ದನಿಯಲ್ಲಿ ಅಂದು ಅಮ್ಮ, ರಂಗಜ್ಜಿಯರು ನಾಲ್ಕು ಜನರೆದುರು ತನ್ನನ್ನು 'ಈಗಿನ ಹುಡುಗಿಯರಂತಲ್ಲ' ಎಂದು ಮೆಚ್ಚುಗೆಯನ್ನಾಡುವಂತೆ ಮಾಡುತ್ತೇನೆ. ಆದರೆ ನಿಜಕ್ಕೂ ಈಗ ಅಭಿನಯಿಸಿದಷ್ಟು ನಾಚಿಕೆ ತನಗಿತ್ತೆ ? ಎಂದು ಪ್ರಶ್ನೆ ಹಾಕಿಕೊಂಡರೆ ಉತ್ತರ ಹುಡುಕಲು ಪುನಃ ತಾನು ಆ ಕೊಳಕು ಬೇಲಿಯೊಳಗಿನ ಕೊಳೆತ ಹವೆಯನ್ನು ಬಿಟ್ಟು ಅವರೆಲ್ಲರ ಕಣ್ಣು ತಪ್ಪಿಸಿಕೊಂಡು ಹೊರಬರಬೇಕಾಗುತ್ತದೆ. ಇಲ್ಲವೆಂಬ ಉತ್ತರ ಪಡೆದು ಘಮ್ಮೆನ್ನುವ ಸ್ವಂತಿಕೆಯ ಗಾಳಿಯನ್ನು ಸೇವಿಸಿದ್ದೇ ಅಯಸ್ಕಾಂತದಂತೆ ಮರುಕ್ಷಣವೇ ಬೇಲಿಯಿಂದ ಎಳೆಯಲ್ಪಡುತ್ತೇನೆ. ಕೊನೆಗೆ ಮನೆಯವರು ಒಪ್ಪಿದ ಗಂಡನ್ನು ವಿವಾಹವಾಗುತ್ತಾಳೆ.

ಅಂತರಂಗದ ಪುಟಗಳು ಕಥೆಯ ನಾಯಕಿ ಅಚಲ ತಮ್ಮ ಇಚ್ಛೆ, ಅನಿಚ್ಛೆಗಳನ್ನು ಹೇಳಲು ಹಂಬಲಿಸಿದರೂ ಹೇಳಲಾರದ 'ಬೀಳು-ಬೇರು', 'ಚಿಪ್ಪು', ಕಥೆಗಳ ನಾಯಕಿಯರಂತೆ ಇಲ್ಲ. ಈಕೆ ವರನಿಗಾಗಿ ಕಾಯುವ ತಲ್ಲಣ, ಕನಸುಗೂಡುಗಳ ಹುಡುಗಿಯಾಗಿರದೆ ತನ್ನನ್ನು ಒಪ್ಪಿದ ವರನನ್ನೂ ನಿರಾಕರಿಸಬಲ್ಲವಳು. ಮದುವೆಯೆಂಬುದು ಹೆಣ್ಣನ್ನು ಚಿನ್ನ, ರೇಶ್ಮೆಗಳಲ್ಲಿ ಅದ್ದಿ ಒತ್ತಿಸುವ ವ್ಯವಸ್ಥೆಯಾಗಿರುವ ಬಗ್ಗೆ ಸಿಟ್ಟು ಪ್ರಕಟಿಸಬಲ್ಲಳು. ಅದೇ ಹೊತ್ತಿನಲ್ಲಿ ಮದುವೆ ಆಗದ ತನ್ನ ಸ್ಥಿತಿಯ ಬಗ್ಗೆ ಅಸುಖಿಯೂ ಆಗುವವಳು. ತನ್ನ ಚಪ್ಪರ, ವಾದ್ಯ, ಉಡುಪು, ಶೃಂಗಾರ, ಆಭರಣ ಅಂತಸ್ತು, ಆಶೀರ್ವಾದ, ಅಕ್ಷತೆ ಕಾಳುಗಳ ಲೋಕದ ಬಗ್ಗೆ ತಿರಸ್ಕಾರ , ತಾನು ಬಯಸುವವನು ತನ್ನನ್ನು ಬಯಸುವವನೂ ಆಗಿ, ಇವನ ಮಗುವನ್ನು ಧರಿಸಬೇಕೆಂಬ ಅದಮ್ಯ ಬಯಕೆಯನ್ನು ಉಕ್ಕಿಸುವವನೂ ಆಗಿರಬೇಕೆಂಬ ಉತ್ಕಟ ಹಂಬಲ ಇವು 'ಅಚಲ'ಳನ್ನು ಆ ಹೆಸರು ಸೂಚಿಸುವುದಕ್ಕಿಂತ ಭಿನ್ನವಾಗಿ ಚಿತ್ರಿಸುತ್ತವೆ. ಮಾತ್ರವಲ್ಲ ನೋಡಲು ಬಂದ ವರನ ಮುಂದೆ ಸಿಂಗರಿಸಿಕೊಂಡು ಕೂತ ಹೆಣ್ಣಿನ ಅಂತರಂಗದಲ್ಲಿ

ದೊಡ್ಡ ಜ್ವಾಲಾಮುಖಿಯೇ ಹುದುಗಿರಬಹುದಾದ ಸ್ಥಿತಿಯೊಂದಕ್ಕೆ ಕನ್ನಡಿ ಹಿಡಿದು ತೋರಿಸುವುದರಲ್ಲಿ ವೈದೇಹಿಯವರು 'ಅ ಸಂಪ್ರದಾಯಿಕ' ಕೃತಿಯೊಂದನ್ನು ಕಥಾಸಾಹಿತ್ಯಕ್ಕೆ ತಂದು ಜೋಡಿಸುತ್ತಾರೆ.

ಈ ಎಲ್ಲಾ ಸ್ವೀಕೃತ ಮಾದರಿಗಳನ್ನು ಒಪ್ಪಿಯೇ ಸಾಗಿದರೂ ವೈದೇಹಿಯವರ ಹೆಣ್ಣುಗಳು ನಮಗೆ ಸಮಸ್ಯಾತ್ಮಕವಾಗಿಬಿಡುವುದು ಈ ಹೊರಮೈಯಿನ ವಿಭಜನೆಗಳಿಂದ ಮಾತ್ರವಲ್ಲ. ಈ ಹೊರಗಿನ ನೆಲೆಯಿಂದ ಸಿದ್ಧವಾಗುವ ಮತ್ತು ರೂಪುಗೊಳ್ಳುವ ಅವರೆಲ್ಲರ ಅಂತರಂಗಗಳ ನೂರು ಬಗೆಯ ಪದರಗಳು ಮಿಡಿವ ಧ್ವನಿಗಳು ನಮ್ಮನ್ನು ಕಾಡಿಸಲು ತೊಡಗುತ್ತದೆ. 'ಅಂತರಂಗದ ಪುಟಗಳು' ಎಂಬ ಸಂಕಲನದ ಕಥೆಗಳು ಇಂಥ ಒಳದನಿಗಳನ್ನು ಹೇಗೆ ಆಲಿಸಬೇಕೆಂಬ ಕಡೆಗೆ ಓದುಗರ ಗಮನ ಸೆಳೆಯುವ ಯತ್ನ ಮಾಡುತ್ತದೆ.

ತಾಂತ್ರಿಕವಾಗಿ ಪ್ರಯೋಗಶೀಲತೆಯೇ ಎದ್ದುಕಾಣುವ ಸಂಕಲನ 'ಗೋಲ' ಇಲ್ಲಿ ಸರಳ ರೇಖೆಯ ಕಥನವಿಲ್ಲ. ಘಟನೆಗಳಿಗೆ ಕಾಲಾನುಕ್ರಮಣೆಯೂ ಇಲ್ಲ. ನಿರ್ದಿಷ್ಟವಾದ ಭಾವಗಳು ಮಾತ್ರ ಕೇಂದ್ರವಾಗುತ್ತದೆ. ವೈಶಾಖದ ಒಂದು ರಾತ್ರಿ, ತರಂಗಗಳು, ಪ್ರಶ್ನೋತ್ತರಗಳ ಆಚೆ, 'ಗೋಲ, ಪಯಣ' ಮುಂತಾದವು ಅಮೂರ್ತ ಭಾವತೀವ್ರತೆಯನ್ನು ಹಿಡಿದುಕೊಡುವ ಯತ್ನಮಾಡಿವೆ. 'ಪುಟ್ಟ ಹಕ್ಕಿ ಮತ್ತು ಆಕಾಶರಾಯ' ಕಥೆಯಲ್ಲೂ ಸರ್ವಾಂತರ್ಯಾಮಿಯಾದ ದಮನಕಾರಿ ಶಕ್ತಿಯೊಂದನ್ನು ವ್ಯಾಪಕವಾಗಿ ಬೆಳೆಸುವ ಬಗೆ ತುಂಬ ಕುತೂಹಲಕರ. ಈ ಕಲಿ ಪುರುಷನ ಪೂರ್ವೋತ್ತರಗಳು ಯಾರಿಗೂ ತಿಳಿಯದಿದ್ದರೂ ಎಲ್ಲರೂ ಅವನಿಗೆ ಹೆದರಿ ನಡುಗುವ ದುಗುಡ, ಭೀತಿಗ್ರಸ್ತಕ ಸ್ಥಿತಿಯೊಂದು ಇಲ್ಲಿ ಅನಾವರಣಗೊಳ್ಳುತ್ತದೆ.

ಈ ಸಂಕಲನದ ಬಹುತೇಕ ಕಥೆಗಳು ವ್ಯಕ್ತಿಯ ಅನುಭವದ ಲಿಂಗ ಕೇಂದ್ರಿತ ವಲಯವನ್ನು ದಾಟಲು ಅಥವಾ ಅದನ್ನು ಮಾನವೀಯ ನೆಲೆಗೆ ವಿಸ್ತರಿಸಲು ಹವಣಿಸುತ್ತವೆ. ಈ ಯತ್ನ ತುಂಬ ಖಚಿತವಾಗಿ ಕಾಣುವುದು. 'ಶಕುಂತಲೆಯೊಂದಿಗೆ ಕಳೆದ ಅಪರಾಹ್ನ' ಕಥೆಯಲ್ಲಿ.

★ ಸಾಲು ದೀಪಗಳು, ಪು.ಸಂಖ್ಯೆ - 523

ಅಧ್ಯಾಯ-೪

ಈ ಕಥೆಗಳಲ್ಲಿ ಪ್ರಬುದ್ಧ ಹೆಣ್ಣು

ಪುಟ್ಟಮ್ಮತ್ತೆ ಮತ್ತು ಮೊಮ್ಮಗಳು ಅಕ್ಕು, ಅಮ್ಮಚ್ಚಿಯೆಂಬ ನೆನಪು, ಅವಲಂಬಿತರು, ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು, ಒಂದು ಅಪರಾಧ ತನಿಖೆ, ಸೌಗಂಧಿಯ ಸ್ವಗತಗಳು ಈ ಎಲ್ಲಾ ಕಥೆಗಳಲ್ಲಿ ಪರಂಪರೆಯ ಪ್ರಬುದ್ಧ ಜೀವನ ಕ್ರಮವು ಅಭಿವ್ಯಕ್ತವಾಗಿದೆ. ಇಲ್ಲಿ ಸಾಂಸ್ಕೃತಿಕ ನೆಲೆಯ ಘಟಕಗಳು ಒಂದು ಹಂತದಿಂದ ಇನ್ನೊಂದಕ್ಕೆ ಸ್ಥಳಾಂತರವಾಗುವಾಗ ಹಲವಾರು ಮಾರ್ಪಾಡುಗಳಾಗುತ್ತವೆ. ಇಂಥ ಕಡೆ ವ್ಯವಸ್ಥೆಯ ಪ್ರತಿನಿಧಿ ತನಗೆ ಸಹನೆಯಾಗದ ಆಶಯಗಳನ್ನು ವಿರೋಧಿಸುತ್ತದೆ. ತನ್ನ ಪರವಾಗಿರುವ ಸ್ಥಿತಿಗೆ ಬದುಕು ಸಾಂಪ್ರದಾಯಿಕ ರೀತಿಯಲ್ಲಿ ಹರಿಯಲಿ ಎಂದು ನಿರೀಕ್ಷಿಸುತ್ತದೆ. ಸಂಸ್ಕೃತಿಪರ ಜೀವನಪರವಾಗಬೇಕಾದ ಆಲೋಚನೆಗಳು ವ್ಯಕ್ತಿಯ ಹಿತಸಂಬಂಧಿಯಾಗಿ, ರಕ್ತಸಂಬಂಧದ ಭಾವುಕ ಹಿನ್ನೆಲೆಯಲ್ಲಿ ಸುರುಟಿ ಹೋಗುತ್ತಿವೆ. ಒಂದು ಹೆಣ್ಣಿನ ವೈಯಕ್ತಿಕ ಬದುಕು ಸಂಬಂಧಪಟ್ಟವರ ನಿಯಂತ್ರಣದಲ್ಲಿ ರೂಪುಗೊಳ್ಳಬೇಕಾಗಿದೆ. ಪರಂಪರೆ ತನ್ನ ಭದ್ರತೆಯನ್ನು ವ್ಯಕ್ತಿಯ ಆಂತರಿಕ ಬೆಳವಣಿಗೆಯನ್ನು ನಾಶಮಾಡುವುದರ ಮೂಲಕ ಕಾದುಕೊಳ್ಳುತ್ತದೆ.

ಒಟ್ಟಾರೆಯಾಗಿ ಇಲ್ಲಿಯವರೆಗೆ ಅಂದರೆ, ಕುಟುಂಬ ಮತ್ತು ಪಿತೃಪ್ರಧಾನ ವ್ಯವಸ್ಥೆಯಲ್ಲಿ ಮತ್ತು ವಿವಾಹ ಅಥವಾ ದಾಂಪತ್ಯ ಸಂದರ್ಭದಲ್ಲಿ ಹೆಣ್ಣು ಸಮಸ್ಯೆಗಳ ನಡುವೆ ಸಿಲುಕಿಯೂ ಹೊರಬರಲಾಗದ ಸ್ಥಿತಿಯನ್ನು ನೋಡಿದೆವು. ಆದರೆ ಇಲ್ಲಿಂದ ಮುಂದೆ ವೈದೇಹಿಯವರ ಕಥೆಗಳಲ್ಲಿನ ಪ್ರಬುದ್ಧ ಹೆಣ್ಣನ್ನು ಕಾಣಬಹುದು. ಅಂದರೆ ಸಮಸ್ಯೆಗಳ ಸುಳಿಯೊಳಗೆ ನರಳದೇ ಸಮಸ್ಯೆಗಳಿಂದ ಆದಷ್ಟು ಹೊರಬರಲು ಪ್ರಯತ್ನಿಸುವ ವ್ಯವಸ್ಥೆಯನ್ನು ವಿರೋಧಿಸುವ ಹೆಣ್ಣುಗಳನ್ನು ಈ ಅಧ್ಯಾಯದಲ್ಲಿ ಕಾಣುತ್ತೇವೆ.

ಸಾಂಪ್ರದಾಯಿಕ ಆವರಣದೊಳಗೆ ಚಿಂತಿಸುತ್ತಿರುವ ಹೆಣ್ಣು ತನ್ನ ನೆಲೆಯನ್ನು ನಿರ್ಧರಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ಮನೆಯಿಂದ ತೊಲಗಿಹೋಗಲಿ ಎಂದು ಕಾದು ಕೂತ ತವರು ಮತ್ತು ಯಾವ ಭಾವನೆಯೂ ಇಲ್ಲದ ತಮ್ಮ ಮೇಲೈಯನ್ನು

ಪ್ರದರ್ಶಿಸಲು ಬರುವ ಗಂಡುಗಳು - ಈ ಯಾವುದರಲ್ಲೂ ಅರ್ಥ ಕಾಣದ ನಿರೂಪಕಿ ಅಚಲ, ತನಗೆ ಇಚ್ಛೆಯಾಗುವ ಗಂಡನ್ನು ಮದುವೆಯಾಗಬೇಕೆನ್ನುವ ಹಂಬಲದಲ್ಲಿದ್ದಾಳೆ. ಆದರೆ ಕೊನೆಯವರೆಗೆ ತನ್ನನ್ನು ಗೆಲ್ಲುವ ಗಂಡು ಕಾಣಿಸಿಕೊಳ್ಳುವುದಿಲ್ಲ. ಇವಳನ್ನು ನೋಡಿದ ಗಂಡುಗಳು ಇಷ್ಟಪಡುತ್ತಾರೆ. ಆ ಕಾರಣಕ್ಕಾಗಿ ಅವರು ಇವಳಿಗೆ ಇಷ್ಟವಾಗುವುದಿಲ್ಲ. ತನ್ನ ಬದುಕನ್ನು ಪ್ರವೇಶಿಸುವ ಗಂಡು ಮಾನಸಿಕ ಮತ್ತು ದೈಹಿಕ ಸ್ಥಿತಿಗಳೆರಡರಲ್ಲೂ ಪೂರ್ಣನಾಗಿರಬೇಕು. ದೇಹ ಮತ್ತು ಮನಸ್ಸುಗಳ ಈ ಹಂಬಲವನ್ನು ಹೆಣ್ಣು ವ್ಯಕ್ತಪಡಿಸುತ್ತಿರುವುದು ಕನ್ನಡ ಸಾಹಿತ್ಯಕ್ಕೆ ಹೊಸದಲ್ಲ. ವೈದೇಹಿ ಅವರ ಸಂದರ್ಭದಲ್ಲಿ ಅದು ಒಂದು ವರ್ತುಲವನ್ನು ರಚಿಸುತ್ತಿದೆ ಎಂಬುದು ವಿಶೇಷವಾಗಿದೆ. ಗೆಳತಿ ಸರಿತ ತವರು ಒಪ್ಪಿದ ಗಂಡನ್ನು ಮದುವೆಯಾಗಿ ಮಕ್ಕಳು ಪಡೆದಿದ್ದಾಳೆ. ಗಂಡ ಹೊರದೇಶಕ್ಕೆ ಹೋಗಿ ಬರುವ ಸ್ಥಿತಿಯಲ್ಲಿದ್ದಾನೆ. ಆದರೆ ನಿರೂಪಕಿಗೆ ಅವಳ ಕಣ್ಣಿನಲ್ಲಿ ಈ ಬದುಕಿನ ಶ್ರದ್ಧೆಯ ಸಂಕೇತವಾದ ಬೆಳಕು ಕಾಣುವುದಿಲ್ಲ. ಸರಿತ ತನ್ನ ಅತೃಪ್ತಿಯನ್ನು ಅದುಮಿಕೊಂಡು ದೊರೆತದ್ದು ಇಷ್ಟೇ ಎಂಬ ಅನಿವಾರ್ಯತೆಯಲ್ಲಿ ಬಾಳುತ್ತಿದ್ದಾಳೆಯೇ ? ಅದು ಕತೆಯಲ್ಲಿ ಸ್ಪಷ್ಟವಾಗುವುದಿಲ್ಲ.

ಇನ್ನೊಬ್ಬ ಗೆಳತಿ ಮಂಜು, ಅಚಲಳನ್ನು ನೋಡಲು ಬಂದ ಗಂಡನ್ನು ಮದುವೆಯಾಗಿದ್ದರೂ ಆ ಸಂಬಂಧ ಆತನ ಆಯ್ಕೆಯಾಗಿರುವಂತೆ ಇವಳ ಆಯ್ಕೆಯಾಗಿಲ್ಲ. ಅದಕ್ಕಾಗಿ ಅವಳು ಚಿಂತಿಸುತ್ತಿರುವಂತೆ ಕಾಣುತ್ತಿಲ್ಲ. ಗಂಡ ಲೈಂಗಿಕವಾಗಿ ಅಸಮರ್ಥನಾಗಿರಬಹುದಾದ ಸಾಧ್ಯತೆಯು, ಪರಗಂಡಿನೊಡನೆ ಆಕೆಯನ್ನು ಮಲಗುವಂತೆ ಪ್ರೇರೇಪಿಸುತ್ತದೆ. ಆದ್ದರಿಂದ ತಾತ್ಕಾಲಿಕವಾಗಿ ಅವಳಲ್ಲಿರುವ ಅತೃಪ್ತಿ ಇಡೀ ಬದುಕನ್ನು ಕಾಡುವ ಘಟಕವಾಗುವುದಿಲ್ಲ. ಇದು ಪೂರ್ಣ ಸಾಂಪ್ರದಾಯಿಕವಾಗಿರುವ ಸರಿತಳಿಗೆ ಆಘಾತವಾದರೆ ನಿರೂಪಕಿಗೆ ಸ್ವೀಕಾರಯೋಗ್ಯವಾಗುತ್ತದೆ. ಗಂಡನೊಡನೆ ಇದ್ದ ಸ್ಥಿತಿ ಸೂಳೆಗಾರಿಕೆ, ಪರಗಂಡಿನೊಡನೆ ಮಲಗುವುದು ನಿಜವಾದ ಬದುಕು ಎಂದು ಮಂಜು ತನ್ನ ವಿವಾಹೇತರ ಸಂಬಂಧಕ್ಕೆ ಪ್ರತಿಕ್ರಿಯಿಸುತ್ತಿರುವುದನ್ನು ಕಾಣುತ್ತೇವೆ. ಇದರಿಂದ ಮಂಜು ಹಿನ್ನೆಲೆಯಲ್ಲಿ ತನ್ನ ಗಂಡನ ಕ್ಷೇಮದ ಬಗೆಗೆ, ಆ ಮೂಲಕ ತನ್ನ ಬದುಕು ಕ್ರಮ ತಪ್ಪದಿರಬೇಕೆನ್ನುವುದರ ಬಗೆಗೆ ಸರಿತ ಆಸಕ್ತಿ ತೋರುತ್ತಾಳೆ. ಹೀಗೆ ಒಂದೇ ವಯಸ್ಸಿನ ಮೂವರು ಹೆಣ್ಣುಗಳ

ನಡುವೆ ಬದುಕು ಮೂರು ರೀತಿಯಲ್ಲಿ ಕಂಡುಕೊಳ್ಳಲು ಸ್ಥಾಪಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಆದರೆ ಇಲ್ಲಿ ಯಾವುದು ಯಾವುದನ್ನು ಗೆದ್ದಿದೆ ಎಂದು ಹೇಳಲು ಸಾಧ್ಯ ? ಈ ಪ್ರಶ್ನೆಯೇ ಆ ಸಂಕೀರ್ಣ ಘಟಕವನ್ನು ಸರಳೀಕರಿಸಿದಂತೆ ಮಾಡಿಬಿಡಬಹುದು. ಬದುಕು ಒಂದೇ ದಾರಿಯಲ್ಲಿ ಸಾಗುವುದಾದರೆ ಮನುಷ್ಯನೊಳಗೆ ಯಾವುದೇ ಸಂಘರ್ಷ ನಡೆಯುತ್ತಿರಲಿಲ್ಲ ಮತ್ತು ಬದುಕು ಜೀವಿಸಲು ಅರ್ಹವೂ ಆಗುತ್ತಿರಲಿಲ್ಲ. ಒಂದೇ ದಾರಿಯಲ್ಲಿ ತಿರುಗುವುದು ನೀರಸವಾಗುತ್ತದೆ. ಆದ್ದರಿಂದ ಅಂತರಂಗದಗ ಪುಟಗಳಲ್ಲಿ ವೈದೇಹಿ ಹಿಡಿದಿರುವ ದಾರಿ ಕೂಡ ಸರಳವಾಗಿಲ್ಲ. ವ್ಯವಸ್ಥೆ ತನ್ನನ್ನು ಭದ್ರಪಡಿಸಿಕೊಳ್ಳುತ್ತಿದೆ. ಸರಿತಳ ಸಂದರ್ಭದಲ್ಲಿ ಅದು ತಿರಸ್ಕಾರಕ್ಕೆ ಗುರಿಯಾಗುತ್ತಿದೆ. ಮಂಜು ಸಂದರ್ಭದಲ್ಲಿ, ಆದರೆ ಯಾವುದು ಏನು ಹೇಗೆ ಎಂಬುದನ್ನು ನಿರ್ಧರಿಸಲು ಸಾಧ್ಯವಿಲ್ಲದ ಬದುಕನ್ನು ರೂಪಿಸುವ ಸ್ಥಿತಿಗೆ ಪ್ರಜ್ಞಾಪೂರ್ವಕವಾಗಿ ಪ್ರತಿಕ್ರಿಯಿಸುತ್ತಿರುವ ಅಚಲಳ ಸಂದರ್ಭ ಪೂರ್ಣವಾಗಿ ಸ್ವತಂತ್ರವಾಗಿಲ್ಲ ಅನಿಸುತ್ತದೆ. ಆದ್ದರಿಂದ ಇಲ್ಲಿ ಗೊಂದಲ ಇದೆ. ವ್ಯಾವಹಾರಿಕ ಶೈಲಿಯಲ್ಲಿ ಬದುಕಿಗೆ ಹೆಜ್ಜೆ ಇಡುತ್ತಿರುವ ವೆಂಕಟು ಅವಳ ಕಣ್ಣಿಗೆ ತೀರಾ ಎಳಸಿನಂತೆ ಕಾಣುತ್ತಾನೆ. ಭೌತಿಕ ಘಟಕಗಳೆಲ್ಲವೂ ಅವನಲ್ಲಿ ಅಪಾರವಾಗಿವೆ. ಆದರೆ ತನಗೆ ಸಂಬಂಧಿಸಿರುವುದನ್ನು ಅರಿಯುವ ಮನಸ್ಸು ಖಾಲಿಯಾಗಿದೆ.

ಪುಟ್ಟಮ್ಮತ್ತೆ ಮತ್ತು ಮೊಮ್ಮಗಳು ವೃದೇಹಿಯವರ ಮಾತ್ರವಲ್ಲ ಕನ್ನಡದ ಅತ್ಯುತ್ತಮ ಕಥೆಗಳಲ್ಲೊಂದು. ಮೇಲ್ನೋಟಕ್ಕೆ 'ತಲೆಮಾರಿನ ಅಂತರ' ದ ಕಥೆಯಾಗಿ ಕಂಡರೂ ಆಳದಲ್ಲಿ ಬದುಕಿನ ಮೂಲಭೂತ ಸತ್ಯಗಳಿಗೆ ಕನ್ನಡಿ ಹಿಡಿಯಲು ಹೊರಡುವ ಕಥೆ. ಹಾಗೆ ನೋಡಿದರೆ, ಇಲ್ಲಿನ ಅಜ್ಜಿ ಮತ್ತು ಮೊಮ್ಮಗಳಲ್ಲಿ ಅನೇಕ ಸಾಮ್ಯ ಅಂಶಗಳೂ ಇವೆ. ಇಬ್ಬರೂ ಬದುಕಿಗೆ ಬೆನ್ನು ತಿರುಗಿಸಿದವರೂ ಅಲ್ಲ. ಎಂಥ ಹೊತ್ತಿನಲ್ಲಿಯೂ ತಿರುಗಿಸುವವರೂ ಅಲ್ಲ. ಆದರೆ ಇವರಿಬ್ಬರ ನಡುವೆ ಮೂಲಭೂತವಾದ ಕೆಲವು ಭಿನ್ನತೆಗಳೂ ಇವೆ. ಈ ಅಂಶವನ್ನು ಕೊಂಚ ಆಕರ್ಷಕವಾಗಿ ಮಂಡಿಸಬೇಕೆಂದರೆ ಪುಟ್ಟಮತ್ತೆಗೆ 'ಈಸು' ವುದರಲ್ಲಿ, ಈಸಿ ಜಯಿಸುವುದರಲ್ಲಿ ನಂಬಿಕೆ, ಕಮಲಾವತಿಗೆ 'ಕುಣಿಯೋಣ ಬಾರ' ದಲ್ಲಿ ನಂಬಿಕೆ, ಬದುಕಿನ ವಾಸ್ತವ

★ ಎನ್.ಕೆ. ಕೋದಂಡರಾಮು, ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕತ ಸಂಘರ್ಷ. ಪು.ಸಂಖ್ಯೆ - ೪೪೨.

ಪುಟ್ಟಮ್ಮತ್ತೆಯನ್ನು ಹಣ್ಣಾಗಿ ಮಾಡಿದೆ. ಬದುಕನ್ನು ಹೇಗಿದೆಯೋ ಹಾಗೆ, ಸ್ವೀಕರಿಸುವುದನ್ನು ಅವಳು ಕಲಿತಿದ್ದಾಳೆ. ಅಥವಾ ಕಲಿಸಲಾಗಿದೆ. ಆದರೆ ಕಮಲಾವತಿ ಆ ಸಿದ್ಧ ಪಾಠಗಳನ್ನು ಕಲಿಯಲು ನಿರಾಕರಿಸುತ್ತಾಳೆ. ಕಮಲಾವತಿಗೆ ಮುಖ್ಯವಾಗಿ ಎರಡು ಸಮಸ್ಯೆಗಳಿವೆ. ಒಂದು ಹೆಣ್ಣಾಗಿರುವುದು, ಇನ್ನೊಂದು ಬಡತನ.

ಹೆಣ್ಣಾಗಿರುವ ಕಾರಣದಿಂದಲೇ ಎದುರಾಗುವ ಸಮಸ್ಯೆಗಳನ್ನು ಹೆಣ್ಣು ಎನ್ನುವ ಕಾರಣಕ್ಕೆ ಪರಿಹರಿಸಿಕೊಳ್ಳಲು ಯತ್ನಿಸುವುದೇ ಕಮಲಾವತಿಯ ವಿಶೇಷ. ಬಗ್ಗುವುದನ್ನಾಗಲೀ, ತಗ್ಗುವುದನ್ನಾಗಲೀ ಅವಳು ಒಪ್ಪುವುದಿಲ್ಲ. ತಮಗೆ ಆಶ್ರಯ ಕೊಟ್ಟವರ ಮಗಳನ್ನು ಗಂಡು ನೋಡಲು ಬರುವ ಪ್ರಸಂಗದಲ್ಲಿನ ಕಮಲಾವತಿಯ ನಡವಳಿಕೆ ಇದಕ್ಕೆ ಒಳ್ಳೇ ಉದಾಹರಣೆ. ತನ್ನ ಸೌಂದರ್ಯದ ಆಕರ್ಷಕ ವ್ಯಕ್ತಿತ್ವದ ಸಂಪೂರ್ಣ ಅರಿವಿರುವ ಅವಳು ತನ್ನ ಕಾರಣಕ್ಕೆ ಬಂದ ಗಂಡು ನೋಡಲು ಬಂದಿರುವ ಹುಡುಗಿಯನ್ನು ತಿರಸ್ಕರಿಸಬಹುದು ಎನ್ನುವ ಸಾಧ್ಯತೆ ಗೊತ್ತಿದ್ದೂ ಅಲ್ಲೇ ಉಳಿಯಲು ಹಟ ಮಾಡುತ್ತಾಳೆ. ಅಜ್ಜಿಯ ಬಲವಂತಕ್ಕೆ ಅಲ್ಲಿಂದ ಹೊರ ಬೀಳುವ ಅವಳು ಇನ್ನೊಂದೇ ಸಾಹಸಕ್ಕೆ ತೊಡಗುತ್ತಾಳೆ. ಅವಳಲ್ಲಿರುವ ಬಂಡಾಯ ವಯಸ್ಸಿನ ಮೂಲದ್ದೂ ಹೌದು. ಬೆಳೆಯುತ್ತಿರುವ 'ಸ್ವ-ಪ್ರಜ್ಞೆಯ' ಮೂಲದ್ದೂಹೌದು. ಬದುಕು ಕೊಡದಿದ್ದರೂ ಅದರಿಂದ ಕಿತ್ತಾದರೂ ತಿನ್ನಬೇಕೆನ್ನುವ ತಹತಹ ಕಮಲಾವತಿಯಲ್ಲಿ ಕಾಣುತ್ತದೆ. ಅಪಾರ ಚೈತನ್ಯದ ಈ ಹುಡುಗಿಯನ್ನು ಹಿಡಿಯುವುದೇ ಪುಟ್ಟಮ್ಮತ್ತೆಗೆ ಕಷ್ಟವಾಗಿಬಿಡುತ್ತದೆ.

ಕಮಲಾವತಿಯ ವ್ಯಕ್ತಿತ್ವ ಅವಳಿಗೆ ಅರ್ಥವಾಗುವುದಿಲ್ಲವೆಂದಲ್ಲ. ಆದರೆ ಸಮಾಜ ಒಪ್ಪದ ಅದಕ್ಕೆ ಕಮಲಾವತಿ ಹಂಬಲಿಸುವುದು ಬೇಡವೆಂದೇ ಅವಳಿಗೆ ಕಾಣುತ್ತದೆ. ಬದುಕಿನ ಹೋರಾಟದಲ್ಲಿ ಪುಟ್ಟಮ್ಮತ್ತೆ ಸಮಾಜದ ನಿರ್ಬಂಧಗಳನ್ನು ಮೀರಲು ಹೆದರುತ್ತಾಳೆ. ಆದರೆ ಮೊಮ್ಮಗಳಿಗೆ ಸಾಮಾಜಿಕ ನಿರ್ಬಂಧಗಳೋ, ನೈತಿಕ ನಿಯಮಗಳೋ, ಮೂರು ಕಾಸಿಗೂ ಬೇಕಾಗದವು. ಬದುಕಿನ ಸುಖದ ಹುಡುಕಾಟದಲ್ಲಿ ಬರುವ ಅಡಚಣೆಗಳು ಅವು ಎನಿಸುತ್ತದೆ ಎಂದರೆ ಚೌಕಟ್ಟಿನೊಳಗೆ ಪುಟ್ಟಮ್ಮತ್ತೆ ತನ್ನ ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನಿಸಿದರೆ, ಮೊಮ್ಮಗಳು ಸಮಾಜಕ್ಕೆ ಸೆಡ್ಡು ಹೊಡೆದು ನಿಂತು ತನ್ನ ಸವಾಲನ್ನು ಘೋಷಿಸಬಲ್ಲವಳು. ಇಲ್ಲಿ ಇವರಿಬ್ಬರ ನಡುವೆ ಕೇವಲ

'ತಲೆಮಾರಿನ ಅಂತರ' ಮಾತ್ರವಲ್ಲ. ಪುರುಷ ಪ್ರಧಾನ ಸಮಾಜದ ಒತ್ತಡಗಳೂ ಕೆಲಸ ಮಾಡುತ್ತಿವೆ. ಕಮಲಾವತಿಯ ವ್ಯಕ್ತಿತ್ವವನ್ನು ಕುರಿತು ಪುಟ್ಟಮ್ಮತ್ತೆ ಅಷ್ಟು ಒದ್ದಾಡುವುದೇ ಅವಳ ಒಳಮನಸ್ಸಿಗೆ ತನ್ನ ಮೊಮ್ಮಗಳ ಮನಸ್ಸು ಅರ್ಥವಾಗದಿರುವುದರ ಸಂಕೇತ. ಕಮಲಾವತಿಯಲ್ಲಿ 'ಹೊಸ ಹೆಣ್ಣಿನ' ಉಗಮವೂ ಕಾಣಿಸುತ್ತದೆ. ಗಮನಿಸಿ, ಇಲ್ಲಿ ಕಮಲಾವತಿಗೆ ಯಾರೂ ಸ್ತ್ರೀವಾದದ ಪಾಠಗಳನ್ನು ಹೇಳಿಕೊಡುತ್ತಿಲ್ಲ. ಅತ್ಯಂತ ಸಹಜವೆನ್ನುವ ಹಾಗೆ ಅವಳ ವ್ಯಕ್ತಿತ್ವ ಇಲ್ಲಿ ಅರಳುತ್ತಾ ಹೋಗುತ್ತದೆ. ತನ್ನಿಂತಾನೇ ಮೂಡುವ ಇಂತಹ 'ಅರಿವಿನ'ನ ಬಗ್ಗೆ ವೈದೇಹಿಯವರಿಗೆ ತುಂಬಾ ಆಸಕ್ತಿ. ಇಂಥ ಸ್ವಮೂಲವಾದ ಅರಿವು ಮಾತ್ರ ಅವರ ವ್ಯಕ್ತಿತ್ವವನ್ನು ಕೊನೆಯವರೆಗೂ ರೂಪಿಸುತ್ತದೆ ಎಂದು ವೈದೇಹಿ ಭಾವಿಸುತ್ತಾರೆ. ಇದು ಶೋಷಣೆಯೆಂದೋ, ತಪ್ಪೆಂದೋ ಸ್ವತಃ ಅವಳಿಗೆ ಅನಿಸಬೇಕು. ಅದರ ತೀವ್ರತೆಯಲ್ಲಿ 'ಹೊಸಹೆಣ್ಣು' ಹುಟ್ಟುತ್ತಾಳೆ.

ಪ್ರಬುದ್ಧ ಹೆಣ್ಣಿನ ಸಾಲಿಗೆ ಸೇರುವ ಮತ್ತೊಂದು ಕಥೆ 'ಅಕ್ಕು'. ಮದುವೆಯಾದ ಗಂಡ ಅಕ್ಕುವನ್ನು ಬಿಟ್ಟು ಹೋಗುವುದರಿಂದ ಅವಳು ಮಾನಸಿಕ ಸ್ಥಿಮಿತತೆಯನ್ನು ಕಳೆದುಕೊಳ್ಳುತ್ತಾಳೆ.. ಆದರೆ ಮತ್ತೆ ಬಂದ ಗಂಡನನ್ನು ಅವಳು ಸೇರಿಸಿಕೊಳ್ಳುವುದಿಲ್ಲ. ತನ್ನ ಗಂಡನಿಗೆ ಬಸ್‌ಛಾರ್ಜು ಕೊಟ್ಟು ವಾಪಸ್ ಕಳುಹಿಸಬೇಕೆಂದು ಅಕ್ಕು ಹೇಳುತ್ತಾಳೆ. ಇಲ್ಲಿ ಅವಳ ಬಂಡಾಯ ಮನೋಭಾವವನ್ನು ಪ್ರಬುದ್ಧ ಮನಃಸ್ಥಿತಿಯನ್ನು ಗುರುತಿಸಬಹುದು. ಅಲ್ಲದೆ ತನ್ನ ಗಂಡನಿಗೆ ಕೇಳಿಸಲೆಂದು ಊರೊಳಗಿರುವ ಎಲ್ಲಾ ಪುರುಷರ ಸಂಪರ್ಕವನ್ನು ಮಾಡಿಯಾಯಿತೆಂದು ನುಡಿಯುತ್ತಾಳೆ. ಅಜ್ಜಯ್ಯ ಬೈದು ಹಾಗೆ ಮಾತನಾಡಬಾರದೆನ್ನುತ್ತಾನೆ. ಕೊನೆಗೆ ಎರಡು ದಿನಗಳಿದ್ದು ಅಕ್ಕುವನ್ನು ಕರೆದು ಕೊಂಡು ಹೋಗಬೇಕೆಂದು ಅಜ್ಜಯ್ಯನು ಸಂಕಪ್ಪಯ್ಯನಿಗೆ ಹೇಳಿದಾಗ ಅಕ್ಕು ತನ್ನ ಹೆಣ ಮಾತ್ರ ಸಂಕಪ್ಪಯ್ಯನೊಂದಿಗೆ ಹೋಗುವುದೆನ್ನುತ್ತಾಳೆ. ಸಂಕಪ್ಪಯ್ಯ ಎರಡು ದಿನ ಅಜ್ಜಯ್ಯನ ಮನೆಯಲ್ಲಿರುತ್ತಾನೆ. ಆದರೂ ಅಕ್ಕುವಿನ ಮನಸ್ಸು ಸ್ಥಿಮಿತಕ್ಕೆ ಬರುವುದಿಲ್ಲ. ಎಲ್ಲರೂ ಅಕ್ಕುವಿನ ಬಗ್ಗೆ ಮಾತನಾಡುತ್ತಾ ಕುಳಿತಿರುವಾಗ ಅಕ್ಕು ಬಂದು ತಾನು ಅಡ್ಡದ ಮನೆ ತಿಮ್ಮಪ್ಪಯ್ಯನಿಂದ ಬಸಿರಾಗಿರುವುದಾಗಿ ಹೇಳುತ್ತಾಳೆ. ಜೊತೆಗೆ ದೊಡ್ಡತ್ತೆಯ ಬಳಿ ಬಂದು ತಿಮ್ಮಪ್ಪಯ್ಯನ ಮುಖ, ತುಟಿಗಳನ್ನು ವರ್ಣಿಸಲಾರಂಭಿಸುತ್ತಾಳೆ. ಆಗ ವಾಸು ಚಿಕ್ಕಪ್ಪಯ್ಯ ಅಕ್ಕುವಿನ ಬಾಯ್ಮುಚ್ಚಿ ಅಡುಗೆಮನೆಗೆ ದರದರ ಎಳೆದುಕೊಂಡು ಹೋಗಿ ಸೌದೆಯಿಂದ ಚೆನ್ನಾಗಿ ಬಾರಿಸುತ್ತಾನೆ. ಅಂದಿನಿಂದ ಅಕ್ಕು ಯಾರ ಮನೆಗೂ

ಹೋಗಕೂಡದೆಂದು ಕಟ್ಟಪ್ಪಣೆಯಾಗುತ್ತದೆ. ಅಕ್ಕುವನ್ನು ಮನೆಯೆಂಬ ಜೈಲಿನಲ್ಲಿರಿಸಲಾಯಿತು. ಆದರೂ ಇಲ್ಲಿ ಅಕ್ಕುವಿನ ಮನಸ್ಸಿಗೆ ಚಿಕಿತ್ಸೆಯನ್ನು ಕೊಡಿಸುವ ಕೆಲಸವನ್ನು ಯಾರೂ ಮಾಡುವುದಿಲ್ಲ. ಅವಲಂಬಿತರು ಕಥೆಯ ಪುಟ್ಟ ಹುಡುಗಿ ಅಹಲ್ಯಾ. ತನ್ನ ಹೊಟ್ಟೆಗಾಗಿ ಪರರ ಹಂಗನ್ನು ಒಪ್ಪಿಕೊಳ್ಳುತ್ತಾಳೆ. ಆದರೆ ಇವಳನ್ನು ಸಾಕುತ್ತಿದ್ದೇನೆ ಎಂದು ಅಹಂಕಾರ ಪಡುವ ಒಡತಿ ತನ್ನ ಜೀವನದ ಪೂರ್ಣಭಾರವನ್ನು ಈ ಹುಡುಗಿಯ ಮೇಲೆ ಹಾಕಬಿಟ್ಟು ನೆಮ್ಮದಿಯಾಗುತ್ತದೆ. ನಿಜವಾಗಿ ಅಹಲ್ಯಳಿಗಿಂತ ಇವರು ಬೇರೊಂದರ ಅಸ್ತಿತ್ವದಲ್ಲಿ ತಮ್ಮ ಸ್ಥಿತಿಯನ್ನು ಕಾಪಾಡಿಕೊಳ್ಳಲು ಅವಲಂಬಿತರಾಗಿದ್ದಾರೆ. ಹೀಗೆ ವ್ಯವಸ್ಥೆಯು ಹೇಳುವ ಅವಲಂಬನೆಯ ತಿರುಗು ಮುರುಗಾದಂತೆ ಭಾಸವಾಗುತ್ತದೆ. ವೈದೇಹಿ ಇವರ ಸಾಂಸ್ಕೃತಿಕ ಇರಾದೆಗಳನ್ನು ವ್ಯಕ್ತಿಯ ಸ್ವಭಾವಕ್ಕೆ ಒತ್ತುಕೊಡುವುದರ ಮೂಲಕ ಶೋಧಿಸಲು ಪ್ರಯತ್ನಿಸಿದ್ದಾರೆ. ಶಾರದೆ ಅಹಲ್ಯಳ ಸಹಜ ನಡೆಗಳನ್ನು ತಿರಸ್ಕರಿಸುವಂತೆ ಪ್ರತಿಕ್ರಿಯಿಸುತ್ತಾಳೆ. ಆದರೆ ಮಗುವನ್ನು ಈ ಕೆಲಸದ ಹುಡುಗಿ ನಿಗಾ ಮಾಡುವ ಹಾಗೆ ಅದರ ತಾಯಿ ಶಾರದೆಯಿಂದ ಸಾಧ್ಯವಾಗುತ್ತಿಲ್ಲ ಎಂಬುದನ್ನು ಗಮನಿಸಬೇಕು. ಪ್ರೀತಿ ಪ್ರೇಮದ ನೋಟಗಳು ಆಂತರಿಕವಾದ ಸ್ಫೂರ್ತಿ ಘಟಕಗಳಿಂದ ಧಾರಣೆಯಾಗುತ್ತದೆ. ಅಹಲ್ಯಳಲ್ಲಿ ಒಳಗು ಹೊರಗು ಎರಡೂ ಶುದ್ಧವಾಗಿವೆ. ಒಂದು ಸ್ಥಿತಿಗೆ ಬದ್ಧವಾಗಿ ಕೆಲಸ ಮಾಡುವಾಗ ಅದಕ್ಕೆ ಪೂರ್ಣವಾಗಿ ತನ್ನನ್ನು ಕೊಟ್ಟುಕೊಳ್ಳುವ ಕಾಯಕ ಶ್ರದ್ಧೆ ಇದೆ. ಒಡತಿಯನ್ನು ಟೀಕೆ ಮಾಡುವಾಗಲೂ ಅವಳ ಸ್ವಭಾವ ಏರುಪೇರಾಗುವುದಿಲ್ಲ.

ಶಾರದೆ ತನ್ನ ಕೌಟುಂಬಿಕ ಆವರಣವನ್ನು ಅದರೊಡನೆ ಬದುಕುತ್ತಿದ್ದೂ ಅನುಮಾನದಿಂದ ಕಾಣುತ್ತಾಳೆ. ಆಕೆಯ ಗಂಡನ ನಡವಳಿಕೆ ಸಾಧುವಲ್ಲವೋ ಅಥವಾ ಅವನ ಬದುಕುವ ರೀತಿಯನ್ನು ತಾನು ನಿರ್ಧರಿಸಬೇಕು ಎಂಬ ಮೂರ್ಖತನವೋ ಹಾಗೆ ನಡೆದುಕೊಳ್ಳಲು ಕಾರಣವಾಗಿರಬಹುದು. ಯಾಕೆಂದರೆ, ಮೈನೆರೆದ ನಂತರ ಅಹಲ್ಯಳನ್ನು ಕಳುಹಿಸಿಬಿಟ್ಟು, ಮೈನೆರೆಯದ ಇನ್ನೊಂದು ಹುಡುಗಿಯನ್ನು ಕರೆತರಬೇಕೆನ್ನುವ ಅವಳ ಸ್ವಭಾವ ಮೇಲಿನ ಅನುಮಾನಕ್ಕೆ ಸಮರ್ಥನೆಯಾಗಿದೆ. ಇಲ್ಲಿನ ಅಹಲ್ಯ ಭವಿಷ್ಯದಲ್ಲಿ ಶಾರದಕ್ಕನ ಗಂಡನಿಗಿಂತ ಸುಂದರವಾದ ಗಂಡನ್ನು ಮದುವೆಯಾಗಿ ಬಾಳುತ್ತೇನೆ ಎನ್ನುವ ಅವಳ ಛಲ, ಅವಳನ್ನು ಅನಾದರಿಸುವ ಎಲ್ಲಾ ಘಟಕಗಳನ್ನೂ ಒಮ್ಮೆಲೆ ಮೆಟ್ಟಿ ನಿಂತು ಬಿಡುತ್ತದೆ. ಈ ಕಥೆಯಲ್ಲಿ ವೈದೇಹಿಯವರು ತೋರುವ ಅಡಕ

ಗುಣವು ಅದರ ಕಥಾಮಾದರಿಯ ಜೀವಂತಿಕೆಗೆ ಶ್ರೇಷ್ಠ ನಿದರ್ಶನವಾಗಿದೆ. ಯಾವುದನ್ನೂ ಆಡಂಬರದ ಹುಚ್ಚಿಗೆ ಬಲಿಗೊಡದೆ ವಾಸ್ತವವು ಎಷ್ಟನ್ನು ಬಿಟ್ಟುಕೊಡುತ್ತದೋ ಅಷ್ಟನ್ನು ಮಾತ್ರ ದಾಖಲಿಸುವ ರೀತಿಯು ಲೇಖಕಿಯ ಗ್ರಹಿಕೆ ಸಾಮಾಜಿಕವಾಗಿ ಹೇಗೆ ಆಕಾರಗೊಳ್ಳುತ್ತಿದೆ ಎಂಬುದನ್ನು ಸೂಚಿಸುತ್ತದೆ. ಮನುಷ್ಯ ತನ್ನ ಕೆಲಸಗಳನ್ನು ಮಾಡಿಸಿಕೊಳ್ಳಲು ಅತ್ಯಂತ ಕಡುಬಡವರನ್ನು ನೇಮಿಸಿಕೊಂಡು ಅವರಿಗೆ ಸಂಬಳವನ್ನು ಕೊಡದೆ ಕೆಲಸ ಮಾತ್ರ ಚೆನ್ನಾಗಿ ತೆಗೆದು ಶೋಷಣೆಯನ್ನು ಹೇಗೆ ಮಾಡುವರೆಂಬುದನ್ನು ಇಲ್ಲಿ ಚಿತ್ರಿಸಲಾಗಿದೆ. ಕೆಲಸಕ್ಕೆ ಇಟ್ಟುಕೊಂಡವರನ್ನು ನೌಕರರು ತುಂಬ ಅಭಿಮಾನದಿಂದ ಕಂಡರೂ ಅದಕ್ಕೆ ಪ್ರತಿಯಾಗಿ ಮಾಲೀಕರು ಅಭಿಮಾನ ತೋರಿಸದಿರುವುದನ್ನು ಯಾರಾದಸೂ ಖಂಡಿಸಲೇಬೇಕು. ಈ ಕಥೆಯಲ್ಲಿ ಅಹಲ್ಯ ಆ ಕೆಲಸವನ್ನು ಮಾಡುತ್ತಾಳೆ. (ಖಂಡಿಸುತ್ತಾಳೆ)

ಇಂಥದೇ ಸಾಲಿಗೆ ಸೇರುವ ಮತ್ತೊಂದು ಕಥೆ ಒಂದು ಅಪರಾಧ ತನಿಖೆ, ಈ ಕಥೆಯಲ್ಲಿ ಬರುವ ಬಾಬಿ ತನಗೆ ಗೊತ್ತಿಲ್ಲದೆ ಈಗಾಗಲೇ ಮದುವೆಯಾಗಿರುವ ಗಂಡನ್ನು ಮದುವೆಯಾಗುತ್ತಾಳೆ. ಮದುವೆಯಾದ ಮೇಲೆ ಎರಡನೆಯ ಬಾರಿ ಮದುಮಗ ನಾಗುತ್ತಿರುವುದು ಎಂತ ತಿಳಿದು ಬಾಬಿಯ ಸಿಟ್ಟು ಕೆದರಿ ಬಿಟ್ಟಿತ್ತು. ಮದುವೆಯಾದ ಎಂಟು ದಿನಕ್ಕೇ ಬಂದಳು ಬಾಬಿ. ಗಂಡನೊಂದಿಗೆ ಕೊರಳಲ್ಲಿ ಕರಿಮಣಿಯಿದ್ದರೂ ಮುಖದಲ್ಲಿ ಗೆಲುವಿರಲಿಲ್ಲ. ಬಂದವಳು ಗಂಡನನ್ನು ಚಾವಡಿಯಲ್ಲಿಯೇ ಬಿಟ್ಟು ತಾನು ಒಳಗೆ ಬಂದಳು. ಅಮ್ಮನ ಕಾಲಿಗೆರಗಿದಳು. 'ಎಂತಹವನಿಗೆ ಈ ಮದುವೆ ಮಾಡಿಸಿಬಿಟ್ಟರು ಕಂಡಿರ ಗೌರಕ್ಕ. ಚಳಿ ಚರ್ಮವಿದ್ದರಾಯಿತೆ? ಅವನಿಗೆ ಮೊದಲನೇ ಹೆಂಡತಿ ಇದೆಯಂತೆ. ಅದಕ್ಕೆ ಮಕ್ಕಳಿಲ್ಲವಂತೆ, ಪಿರ್ಕಿಯಂತೆ ಅದನ್ನು ಬಿಟ್ಟು ನನ್ನನ್ನು ಮದುವೆಯಾದನಂತೆ. ಊರು ತುಂಬ ಮೇವು ಬೇರೆ...' ಬಾಬಿಯ ಉರುಟು ಬಾಯಿ ಗಿಡ್ಡ ಕೊರಳು ನಡುಗುತ್ತಿತ್ತು. ಅಳು ಮಾತ್ರ ಇರಲಿಲ್ಲ. ನಾನು ಜಗಳಮಾಡಿಯೇ ಬಿಟ್ಟೆ. ಈಗ ನನ್ನನ್ನು ಬಿಟ್ಟು ಹೋಗುತ್ತೇನೆ ಎನ್ನುತ್ತಾನೆ. ಅದು ಹೇಗಾಗುತ್ತದೆ ನೋಡಬೇಕು-' ಎಂದು ಅವಳು ಆವೇಶಗೊಂಡಂತೆ ಹೇಳುವುದನ್ನು ಗಮನಿಸಿದರೆ ಅವಳ ಧೈರ್ಯ, ಛಲ ಎದ್ದು ಕಾಣುತ್ತದೆ. ಅಂತೆಯೇ ಗಂಡ ಬಿಟ್ಟು ಹೋಗುವಾಗ ಅವಳ ನಡೆದುಕೊಳ್ಳುವ ರೀತಿಯನ್ನು ಅವಳ ಮಾತುಗಳಲ್ಲೇ ಗ್ರಹಿಸುವುದಾದರೆ.

★ ಡಾ. ಎನ್.ಕೆ. ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ.

'ಹೆಣೆ ಬಾಬಿ, ನಿನ್ನ ಗಂಡ ಎಲ್ಲಿ ? ಇಲ್ಲಿ ಇಲ್ಲ' - ಎಂದಾಗ ಅವಲಕ್ಕಿಯನ್ನು ತುಸು ಬಾಯಿಗೆಸೆದುಕೊಂಡೇ ಧಿಗ್ಗಂತ ಎದ್ದು ಹೊರಬಂದಳು' ಹೋದರೇ ? ಹೋದರೆ ಎಲ್ಲಿ ಹೋದಾರು ? ಎಂದು ಸೀದ ಗೇಟಿನ ಬಳಿ ಗಂಡು ಹೆಜ್ಜೆಯಲ್ಲಿ ನಡೆದು ದೂರದವರೆಗೂ ಕಣ್ಣು ಹಾಯಿಸಿ 'ಆಗ! ಅಲ್ಲಿ ಹೋಗುತ್ತಿದೆಯಲ್ಲ ಘಟ !' ಎಂದಾಗ 'ಹೆಣೆ ನೀ ಮಾತು ಕಲಿಯುವುದು ಯಾವಾಗ ? - ಎಂದು ಅಮ್ಮ ಗದರಿಸಿ 'ಹೋಗು, ಓಡು ಅವನ ಹಿಂದೆ. ಅವ ಎಲ್ಲಿಗೆ- ಹೋಗುತ್ತಾನೆ. ಅಲ್ಲಿಗೇ - ಎಂತ ಹುರಿದುಂಬಿಸಿದಾಗ ' ನಂಗೆಡಿಯ ಗೌರಕ್ಕ . ಆ ಇಲ್ಲದ ಕಾಯಿಲೆಯವನೊಡನೆ ನಾ ಮಲಗುವುದಿಲ್ಲ.' - ಎಂದ ಅವಳ ಸ್ವರದಲ್ಲಿ ಅಳುವಿನ ಕಂಪನವಿತ್ತೇ ಹೊರತು ಕಣ್ಣಲ್ಲಿ ಒಟ್ಟು ನೀರೂ ಇರಲಿಲ್ಲ.

ನಿನ್ನ ಮುಸುಡಿಗೆ ಇನ್ನು ಸುರಸುಂದರ ಬರುತ್ತಾನೆ' ಎಂತ ನಾಗಮ್ಮ ಒಳಬದಿ ತಳಕಂಡಿಯಿಂದ ಮಾತು ಒಗೆದದ್ದೇ. ಹಿಂದಿರುಗಿ ಅವರನ್ನು ನೋಡಿದ ಬಾಬಿಗೆ ಏನೆನ್ನಿಸಿತೋ ಅಜ್ಜಿಯನ್ನೊಮ್ಮೆ ತಿರಸ್ಕಾರದಿಂದ ನೋಡಿ 'ಗೌರಕ್ಕ - ಅವ ಹತ್ತುವ ಬಸ್ಸು ಗೊತ್ತು ನನಗೆ. ಆ ಜನ ಬಸ್ಸು ಹತ್ತಲು ಬಸ್‌ಸ್ಟ್ಯಾಂಡಿಗೆ ಹೋದರೆ ನಾ ಇಲ್ಲಿಯೇ ಹತ್ತುತ್ತೇನೆ. ಬಸ್ಸು ಹೋಗುವುದು ಹೀಗಿಂದಲೇ ಅಲ್ಲವ? -- ಎಂತ ನಿರ್ಧಾರದಿಂದ ಹೇಳಿ ಗೊತ್ತುಗುಳಿಯಂತೆ ಗೇಟಿನ ಬಳಿ ಅಲ್ಲಾಡದೆ ನಿಂತು ಬಸ್ಸು ಬಂದ ಕೂಡಲೇ ಕೈ ಅಡ್ಡಹಾಕಿ ಹತ್ತಿಯೇ ಬಿಟ್ಟಳು ಬಾಬಿ ಹತ್ತುತ್ತಲೇ ಕೈ, ಬಾಯಿ ಸನ್ನೆ ಮಾಡಿ ಮುಂಬದಿ ಸೀಟಿನಲ್ಲಿ ತನ್ನ ಗಂಡ ಕೂತಿರುವುದನ್ನು ಅಮ್ಮನಿಗೆ ತೋರಿಸುತ್ತ ತೋರಿಸುತ್ತ ಹತ್ತಿದಳು.ಅವಳಿಗೆ ಸೀಟು ಸಿಕ್ಕಿತೋ ಬಿಟ್ಟಿತೋ ಬಸ್ಸು ಮಾಯವಾಯಿತು.

ಎಂಬ ಸಾಲುಗಳಲ್ಲಿ ಬಾಬಿಯ ಪ್ರಬುದ್ಧತೆ ಎದ್ದುಕಾಣುತ್ತದೆ. ತನಗೆ ದಾಂಪತ್ಯ ಜೀವನದಲ್ಲಿ ನೆಮ್ಮದಿ ಸುಖವಿಲ್ಲದಿದ್ದರೂ, ತನ್ನ ಅಮ್ಮ ಮತ್ತು ಸಮಾಜಕ್ಕಾಗಿ ಅವಳು ಅಂಥ ಬದುಕಿನಲ್ಲಿಯೇ ಮುಂದುವರೆಯಲು ನಿರ್ಧರಿಸುತ್ತಾಳೆ. ಇಷ್ಟವಿರದಿದ್ದರೂ ಬದುಕಿಗೆ ಬೆನ್ನು ತಿರುಗಿಸದೇ ಸವಾಲಾಗಿ ತೆಗೆದುಕೊಂಡ ಬಾಬಿ ಅಧೀರಳಾಗದೇ ದುಡಿದು, ದುಡ್ಡನ್ನು ಮಿಗಿಸಿಕೊಂಡು ತನಗೆ ಬೇಕಾದ ಆಭರಣಗಳನ್ನು ಮಾಡಿಸಿಕೊಳ್ಳುತ್ತಾಳೆ. ತನ್ನ ಆಭರಣಗಳನ್ನು ಗಂಡ ಇನ್ನೊಬ್ಬಳಿಗೆ ಕೊಟ್ಟಾಗ ಅವಳಲ್ಲಿಗೆ

★ ವೈದೇಹಿ, ಅಲೆಗಳಲ್ಲಿ ಅಂತರಂಗ. ಪು.ಸಂ. ೧೧೮.

ಹೋಗಿ ಬೈದು ಆ ಆಭರಣಗಳನ್ನು ವಾಪಸ್ಸು ತರುವ ಛಲಗಾತಿ ಈ ಬಾಬಿ. ಇದ್ದುದರಲ್ಲೇ ತೃಪ್ತ ಜೀವನವನ್ನು ನಡೆಸುತ್ತಾಳೆ.

ಹೆಣ್ಣಿನ ಮನಸ್ಸು ಆಧುನಿಕ ಜೀವನಕ್ಕೆ ತನ್ನನ್ನು ಒಳಗುಮಾಡಿಕೊಳ್ಳುವ ಮತ್ತೊಂದು ಕಥೆ 'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು' ಈ ಕತೆಯಲ್ಲಿ ಟಾಕೀಸಿನ ಪರಿಣಾಮವಾಗಿ ಊರಿಗೆ ಆಧುನಿಕತೆ ಕಾಲಿಡುತ್ತದೆ. ಮಾತ್ರವಲ್ಲದೇ ಪ್ರತಿಯೊಬ್ಬರ ಜೀವನದಲ್ಲೂ ಒಂದು ರೀತಿಯ ಬದಲಾವಣೆಗೆ ಕಾರಣವಾಗುತ್ತದೆ.

ಈ ಬದಲಾವಣೆಯನ್ನು ಕಥೆಯಲ್ಲಿನ ಸಾಲುಗಳಿಂದ ಹೀಗೆ ಗ್ರಹಿಸಬಹುದು. ದಿನೇ ದಿನೇ ಬಳೆ ಅಂಗಡಿಯಲ್ಲಿ ನಾನಾ ತರಹದ ಡಬ್ಬಿಗಳು ಮತ್ತಿತರ ಪ್ರಸಾಧನಗಳು ಹೊಸದಾಗಿ ಬರಲು ಪ್ರಾರಂಭಿಸಿ ಅಂಗಡಿಯವನ ಬಿಸಿನೆಸ್ ಕುದುರಿದ್ದು ದರ್ಜಿ ಹೆಂಗಸು ಹೊಸ ಫ್ಯಾಶನ್ನಿಗೆ ಸರಿಯಾಗಿ ಹೊಲಿಯುವುದೇ ಒದು ಸವಾಲಾಗಿ ಹಾಗೂ ಆಕೆ ಎಂತೋ ಎಣಿಸಿ ಹೊಲಿದದ್ದೇ ಫ್ಯಾಶನ್ ಆಗಿ ಆರೋಪಿಸಲ್ಪಟ್ಟು - ಉಡುಗೆಯ ಲೋಕದಲ್ಲಿ ಅಲ್ಲೋಲ ಕಲ್ಲೋಲವಾಗಿ ಅದು ಹೆಂಗಸರ ನಡೆ-ನುಡಿಗಳಿಗೂ ದಾಟಿಕೊಂಡದ್ದು ಮದುವೆ ಮಂಚಲುಗಳಲ್ಲಿ ಹೆಂಗಸರ ಅಲಂಕಾರ ಮತ್ತು ಮದುಮಗಳ ಅಲಂಕಾರಗಳನ್ನು ಸಿನಿಮಾ ಗಾಳಿ ಸವರಿದ್ದು, ರಂಗರಾಯರ ಮನೆ ಅಡುಗೆ ಹೆಂಗಸಿಗೆ ಧೂಪದ ಮರದ ಭೂತ ಮೈಮೇಲೆ ಬರಲು ಸುರುವಾಗಿ ಸಿನಿಮಾ ಕಾಸನ್ನು ಸುಳಿದು ಎದುರಿಟ್ಟೊಡನೆ ಇಳಿಯುತ್ತಿದ್ದದ್ದು, ಸಿನಿಮಾ ನೋಡಲಿಕ್ಕಾಗಿ ಹೆಂಗಸರು ಮುಟ್ಟಾಗುವುದನ್ನೇ ಕಾಯುತ್ತಾ ಮಡಿ ಮೈಲಿಗೆಯ ಪರಿಧಿಯಲ್ಲಿ ಒಂದು ಛಳಕವನ್ನೇ ಹುಟ್ಟಿಸಿದ್ದು, ಅವರೆಲ್ಲರೂ ತಂತಮ್ಮ ಸ್ವರ ಮರೆತು ಹಿನ್ನೆಲೆ ಗಾಯಿಕಿಯರೇ ತಾವು ಎಬಂತೆ ಎಲ್ಲೆಂದರಲ್ಲಿ ತಾಲೀಮು ನಡೆಸಲಾರಂಭಿಸಿದ್ದು, ಸ್ಕೂಲ್‌ಡೇಗಾಗಿ ಚಲನ ಚಿತ್ರಗೀತೆಗಳ ಸ್ಪರ್ಧೆಯೂ ಸೇರಿಕೊಂಡದ್ದು. ಭಜನೆಗೂ ಸಿನಿಮಾ ಹಾಡುಗಳು, ಧಾಟಿಗಳು ಮಿಸಕ್ಕನೆ ದಾಟಿಕೊಂಡದ್ದು , ಪ್ರೀತಿಸುವಾಗಲೂ ಸಿನಿಮಾ ಶಬ್ದಗಳು ಸಹಾಯ ಮಾಡುತ್ತ ಶಬ್ದವಿಲ್ಲದ್ದೆಲ್ಲ ಏಕಾಏಕಿಯಾಗಿ ಬೂಸು ಎಂದು ಕಾಣತೊಡಿಗಿದ್ದು, ಎಲ್ಲಕ್ಕಿಂತ ಹೆಚ್ಚು, ಮಗುವನ್ನು ತೂಗುತ್ತಾ ಜೋಗುಳವನ್ನು ಅಲ್ಲಲ್ಲೇ ಕಟ್ಟಿಕಟ್ಟಿ ಹಾಡುತ್ತಿದ್ದವರು ಈಗ ಅವನ್ನೆಲ್ಲ ಮರೆತು ಸಿನಿಮಾದ ಜೋಗುಳವನ್ನು

★ ವೈದೇಹಿ, ಅಲೆಗಳಲ್ಲಿ ಅಂತರಂಗ. ಪು.ಸಂ. ೩೨೨

ಗುನುಗತೊಡಗಿದ್ದು - ಹೀಗೆಲ್ಲಾ ಒಂದನೆಯ ಪರಿಣಾಮಗಳಾದರೆ, ಸಿನಿಮಾ ಇನ್ನೊಂದು ಪದರದಲ್ಲಿ ಇನ್ನೊಂದೇ ರೀತಿಯ ಕೈಕೋಚು ಸುರು ಮಾಡಿತ್ತು. ಅದೂ ಲಿಲ್ಲೀಬಾಯಿಯ ಮೂಲಕವೇ.

ಹೀಗೆ ಸಿನೆಮಾ ವಿವಿಧ ರೀತಿಯಲ್ಲಿ ಆಧುನಿಕತೆಯನ್ನು ಹರಡಲು ಕಾರಣವಾಗಿತ್ತು. ಇದಷ್ಟೇ ಅಲ್ಲದೆ ಸಿನಿಮಾ ಮುಖಾಂತರ ಊರಿನ ಇತರ ಮನೆಯ ಸುದ್ದಿಗಳೂ ಬೇರೆ ಜನರ ಮಾತಿಗೆ ಆಹಾರವಾದವು. ಹೇಗೆಂದರೆ ಊರಿನ ದೊಡ್ಡವರ ಮನೆಯ ಹೆಂಗಸರೂ ಸಿನಿಮಾ ನೋಡುವುದು ಇತರ ಸಾಮಾನ್ಯ ಜನರ ಕುತೂಹಲಕ್ಕೆ ಎಡೆಮಾಡಿಕೊಟ್ಟಿತ್ತು. ಅದು ಯಾವ ರೀತಿ ಇತ್ತೆಂದರೆ, ಊರಿನ ದೊಡ್ಡವರ ಮನೆಯ ಹೆಂಗಸರಂತೂ ಸಿನಿಮಾಕ್ಕೆ ಬರಲುಂಟೇ ? ಮರುದಿನವೇ ಪೇಪರು ಹೊರಟಾಯಿತು. 'ಅಮ್ಮ, ಓ ಅಮ್ಮ, ನಿನ್ನೆ ಇಂಥವರು ಸಿನಿಮಾಕ್ಕೆ ಬಂದದ್ದಲ್ಲವ ? ಅತ್ತೆ ಸೊಸೆ ಇಬ್ಬರೂ ? ಛೇ ! ಸಂತಸಕ್ಕೂ ಸಿನಿಮಾ ನೋಡುತ್ತ ನೋಡುತ್ತ ಅತ್ತೆಯೂ ಮರಕಿದ್ದು, ಸೊಸೆಯೂ ಮರಕಿದ್ದು ನಾನು ಸಿನಿಮಾ ಕಾಣುವುದನ್ನು ಬಿಟ್ಟು ಕಡೆಗೆ ಈ ಸಿನಿಮಾ ಕಾಣುತ್ತ ಕುಳಿತಿದ್ದಲ್ಲವೇ !''.

ಈ ಸುದ್ದಿ ಊರೆಲ್ಲಾ ಹರಡಿ, ಊರಿನ ಬೇರೆಯ ಮನೆಯ ಹೆಂಗಸರೂ ಅದನ್ನೇ ನೆಪ ಮಾಡಿಕೊಂಡು ಆಗ ಅಂಥವರೇ ಆ ಸಿನಿಮಾಕ್ಕೆ ಬಂದ ಮೇಲೆ ಅದು ಖಂಡಿತ ನೋಡುವಂತಹುದೆ ಇರಬೇಕು ಎಂದು ನಿರ್ಧಾರವಾಗುತ್ತದೆ. ಮನೆಯ ಗಂಡಸರ ಹತ್ತಿರ.....ಇಂಥವರ ಮನೆಯವರೂ ಬಂದಿದ್ದರಂತೆ....ಕೆಟ್ಟದು ಏನೂ ಇಲ್ಲವಂತೆ. ಮರಕಿ -ಮರಕಿ ಇಟ್ಟರಂತೆ....''ಇತ್ಯಾದಿ ಹೇಳಿ ಅಪ್ಪಣೆ ಕೇಳಲು ಸುಲಭವಾಗುತ್ತದೆ. ಸಾಮಾನ್ಯವಾಗಿ ಪೋಸ್ಟರನ್ನು ಕಂಡು ಇದು ತಮ್ಮ ಮನೆ ಹೆಂಗಸರು ನೋಡಲು ಹೇಳಿಸಿದ್ದೋ ಅಲ್ಲವೋ ? ಎಂದು ತೀರ್ಮಾನಿಸುವ 'ಹೆಂಗಸರಿಗೆಲ್ಲ ಸಿನೆಮವ ! ಮತ್ತೇನಲ್ಲವ ! ಎಂದು ಒಮ್ಮೆ ದೊಡ್ಡ ಸ್ವರ ತೆಗೆದು ಅವರ ಸದ್ದಡಗಿಸಬಲ್ಲಂಥ ಗಂಡಸರೂ ಇಂತಹ ಅರ್ಜಿ ಬಂದಾಗ ಗಮನಿಸುತ್ತಾರೆ. ಅಂತಹ ದೊಡ್ಡವರ ಮನೆಯವರೇ ಅಷ್ಟು ಅಳಬೇಕಾದರೆ ಅದರಲ್ಲಿ ಹೆಂಗಸರು ಕಾಣಬಾರದಂತಹ ದೃಶ್ಯಗಳು ಇರಲಿಕ್ಕಿಲ್ಲವೆಂದು ಲೆಕ್ಕಹಾಕಿ ಒಪ್ಪಿಗೆ ಕೊಡುತ್ತಾರೆ. ಇದೂ ಅಲ್ಲದೆ ಗೇಟಿನಲ್ಲಿ ಲಿಲ್ಲೀಬಾಯಿಯೇ ನಿಂತಿರುವುದರಿಂದ ಈಗ ಹೆಂಗಸರನ್ನು ತಾವೇ ಕರೆದುಕೊಂಡು

ಹೋಗಿ ಕೂಡಿಸಬೇಕೆಂದೇನೂ ಇಲ್ಲ. ಏನೂ ಧೈರ್ಯವಿಲ್ಲದ ಹೆಂಗಸರೂ ಲಿಲ್ಲೀಬಾಯಿಯಿದ್ದಾಳೆ ಎಂಬ ಧೈರ್ಯದ ಮೇಲೆ ರಸ್ತೆಗಿಳಿಯುತ್ತಾರೆ. ಹಾಗೆ ಹೋಗಿ ಹೋಗಿ ತಾನಾಗಿ ರಸ್ತೆಗಿಳಿಯುವ ಧೈರ್ಯವನ್ನು ಸಂಪಾದಿಸಿದ್ದಾರೆ. ಈ ರೀತಿ ಹಳ್ಳಿಗೆ ಆಧುನಿಕತೆಯ ಆಕ್ರಮಣಕಾರಿ ಆಶಯವಾಗಿರುವ ಟಾಕೀಸು, ಹೆಣ್ಣಿಗೆ ತಾನು ಇರುವ ಸ್ಥಿತಿಯನ್ನು ಸ್ಪಷ್ಟವಾಗಿಸುತ್ತದೆ. ಶ್ರೀಮಂತ ಮನೆಯ ಹೆಣ್ಣು ಸಿನಿಮಾ ನೋಡುವ ಹಣಕ್ಕೆ ಗಂಡಿನ ಮುಂದೆ ಕೈಚಾಚಿ ನಿಲ್ಲುವುದು ಅಸಹಾಯಕತೆ ಅನ್ನುವುದಕ್ಕಿಂತ, ವ್ಯವಸ್ಥೆಯ ಹಿಡಿತದಲ್ಲಿ ಗಂಡು ನಡೆಸುವ ಶೋಷಣೆಯಾಗಿದೆ ಎನ್ನುವುದು ಆ ಸಂದರ್ಭದ ಸಾಂಸ್ಕೃತಿಕ ವಿಶ್ಲೇಷಣೆಯಾಗಿರುತ್ತದೆ. ಪರಂಪರೆಯನ್ನು ನಿರ್ಲಿಪ್ತವಾಗಿ ದಾಖಲಿಸುವ ವಿಚಾರದಲ್ಲಿ ನಮ್ಮ ಲೇಖಕಿಯರಲ್ಲೇ ವೈದೇಹಿ ಪ್ರಬುದ್ಧತೆಯನ್ನು ತೋರುತ್ತಾರೆ. ಕತೆಗಳಲ್ಲಂತು ಈ ಮಾತು ಖಚಿತವಾಗಿದೆ. ವಾಸ್ತವವಾದಿ ಬರವಣಿಗೆ ಅವರದಾದ್ದರಿಂದ ಘಟಕಗಳು ಬದುಕು ನಿರ್ದೇಶಿಸುವ ರೂಪದಲ್ಲಿ ಮಾತ್ರ ಆಕಾರ ಪಡೆಯುತ್ತಾನೆ. ಈ ಕಥೆಗಳಲ್ಲಿ ಬದಲಾದ ಹೆಣ್ಣಿನ ಜೀವನ ರೀತಿ-ನೀತಿಗಳನ್ನು ಧ್ವನಿಸುತ್ತದೆ.

ಬದುಕನ್ನು ಕುರಿತು ಪ್ರಬುದ್ಧತೆ ಕಂಡು ಬರುವ ವೈದೇಹಿಯವರ ಬಹು ಪ್ರಮುಖವಾದ ಕಥೆ 'ಶಕುಂತಲೆಯೊಂದಿಗೆ ಕಳೆದ ಅಪರಾಹ್ನ' ಕಥೆಯಲ್ಲಿ ಇಲ್ಲಿನ ಶಕುಂತಲೆ ತನ್ನನ್ನು ಬಯಸಿದಾತನಿಗೆ ಅರ್ಪಿಸಿಕೊಂಡದ್ದನ್ನು ನಿರೂಪಿಸುವ ದೂರ್ವಾಸ ಶಾಪದ ಕಥೆಯನ್ನು ಒಳಗಿನಿಂದ ನೋಡಬಲ್ಲ ತುಂಬ ಪ್ರಬುದ್ಧ ಹೆಣ್ಣಾಗಿದ್ದಾಳೆ. ಸಿಟ್ಟು, ಆಕ್ರೋಶ, ಸಿನಿಕತೆ, ಹತಾಶೆಗಳನ್ನು ಮೆಟ್ಟಿನಿಂತ ಭಾವ-ವಿಚಾರಗಳ ಸುಂಕುಲಿತ ವ್ಯಕ್ತಿತ್ವ ಆಕೆಯದು.

'ಉಂಗುರ ತೋರಿಸಿ ಪ್ರೇಮದಾನ ಪಡೆಯುವಷ್ಟು' ತನ್ನನ್ನು ಸೊನ್ನೆಯೆಂದುಕೊಳ್ಳಲಾರದ ಈ ಸ್ವಾಭಿಮಾನಿ ಅದನ್ನು ಮುಚ್ಚಿಟ್ಟು, ಕಳೆದುಹೋಯಿತೆಂದು ನಟಿಸಿ, ಮದುವೆಯ ನಟನೆ ಮಾಡುವ ಗಂಡನಿಗೆ ತಕ್ಕ ಆಟವನ್ನು ಹೂಡುತ್ತಾಳೆಂದು ವೈದೇಹಿ ಶಕುಂತಲೆಯನ್ನು ಅರ್ಥೈಸಿರುವುದು ಮಾಸ್ತಿಯಂಥವರ

★ ವೈದೇಹಿ, ಅಲೆಗಳಲ್ಲಿ ಅಂತರಂಗ. ಪು.ಸಂ. ೩೨೪

ಅರ್ಥೈಸುವಿಕೆಗಿಂತ ಭಿನ್ನವಾಗಿರುವುದು ಗಮನಾರ್ಹ. ಮಹಾಕವಿಯ ಕಾಣ್ಕೆ, ಮಾಸ್ತಿಗೆ ಪ್ರಶ್ನಾರ್ಹವಾಗಿ ಕಾಣಸದು. ಅದರೊಳಗೇ ಮಾನವೀಯ ವಾಸ್ತವದ ಸಾಧ್ಯತೆಯೊಂದನ್ನು ಅವರ ಮೃದು ಮನಸ್ಸು ಕಾಣಿಸಲು ಯತ್ನಿಸುತ್ತದೆ. 'ಹೇಮಕೂಟದಿಂದ ಬಂದ ಮೇಲೆ' , ಗೌತಮಿ ಹೇಳಿದ ಕಥೆಗಳು ಪ್ರಕೃತಿ - ಸಂಸ್ಕೃತಿಗಳ ಸಂಘರ್ಷದ ಕಥೆ ಹೇಳುತ್ತದೆ. ಆದರೆ ವೈದೇಹಿಯವರು ಶಕುಂತಲೆಯ ಪ್ರತೀಕವನ್ನೂ ಪ್ರಶ್ನೆಗೀಡು ಮಾಡುತ್ತಾರೆ. ಕಾವ್ಯಸತ್ಯ, ಜೀವನ ಸತ್ಯಗಳನ್ನು ಮುಖಾಮುಖಿಯಾಗಿಸಿ, ಬದುಕನ್ನು ನೋಡುವ ಕ್ರಮ ಹೇಗಿರಬೇಕೆಂಬುದನ್ನೇ ಗಂಭೀರವಾಗಿ ಪ್ರಶ್ನೆಗೊಡ್ಡುತ್ತಾರೆ.

'ಈಕೆ ಯಾರು? ಪ್ರೇಮಿಯೇ ? ವಿರಹಿಣಿಯೇ ? ತಪಸ್ವಿಯೇ? ಅಥವಾ ಈ ಎಲ್ಲದರ ಪರಿಪಾಕವೇ? ಅಥವಾ ಎಲ್ಲವೂ ಆಗಿ ಎಲ್ಲವನ್ನೂ ಕಳೆದು ಚೊಕ್ಕದಾದ ತಾಜಾ ಪ್ರಕೃತಿಯೇ ? ಎಂದು ಆರಂಭದಲ್ಲಿ ಏಳುವ ಪ್ರಶ್ನೆ ಶಕುಂತಲೆಯ ಪ್ರತೀಕದ ಒಳಗನ್ನು ಕುರಿತದ್ದು. ಕವಿ ಶಾಪಗೀಪ ಇತ್ಯಾದಿಗಳನ್ನೆಲ್ಲಾ ಅಡ್ಡ ಇಟ್ಟು ಪುರುಷರ ಲಂಪಟತ್ವ ಮುಚ್ಚಿಡಲು ಹವಣಿಸಿದ. ಎಲ್ಲಾ ಜಾಣ ಮರೆವಿನ ಮಲ್ಲರನ್ನೂ ತನ್ನ ತೆಕ್ಕೆಯೊಳಗೆ ಸಂರಕ್ಷಿಸಿಡುವ, ಪುರುಷ ಕಟ್ಟಿದ ವಿಸ್ಮರಣೆಯ ಕಥೆ ರುಚಿಸಲೇಬೇಕು. ಕಾವ್ಯಮೀಯುವುದೇ ತನಗೆ ಬೇಕಾದ ಸುಖೋಷ್ಣ ಕಲ್ಪನೆಯಲ್ಲಿ' ಎಂಬ ಈ ಶಕುಂತಲೆಯು ಬದುಕಿನ ಸತ್ಯದ ಕಹಿಯನ್ನು ಕುಡಿದು ಅರಗಿಸಿಕೊಂಡವಳು. ಹಾಗಾಗಿ ಕಹಿ, ಹಠ, ಛಲ, ಸಾಧನೆಗಳನ್ನು ಮೀರಿದ ನಿಷ್ಠುರ ವಿಮರ್ಶೆಗೆ ತನ್ನ ಬದುಕನ್ನೇ ಒಡ್ಡಿಕೊಂಡವಳು.

ಮದುವೆ, ಕುಟುಂಬ, ದಾಂಪತ್ಯ ಮತ್ತು ಲೈಂಗಿಕ ಸಂತೃಪ್ತಿಯ ಸಮಸ್ಯೆಗಳು ಮತ್ತೆ ಮತ್ತೆ ವೈದೇಹಿಗೆ ವಸ್ತುಗಳಾಗಿವೆ. ಆದರೆ ಪ್ರತಿಬಾರಿಯೂ, ಹಿಂದಿನ ಕಥೆಗಿಂತ ಹೆಚ್ಚಿನದಕ್ಕೆ ತೆರೆದುಕೊಳ್ಳಲು, ಹಿಂದಿನದಕ್ಕಿಂತ ಹೊಸ ಅನುಭವವೊಂದನ್ನು ಕಟ್ಟಿಕೊಳ್ಳಲು ಅವರ ಕಥೆಗಳು ಯತ್ನಿಸುತ್ತವೆ. ಈ ವಿಕಸನ ಶೀಲಗುಣ ಹೆಚ್ಚು ಪಕ್ವವಾಗಿ ತೋರುವುದು 'ಸಮಾಜ ಶಾಸ್ತ್ರಜ್ಞೆಯ ಟಿಪ್ಪಣಿಗೆ ಸಂಕಲನದಲ್ಲಿ, ಸೌಗಂಧಿಯ ಸ್ವಗತಗಳು, ಆರತಿ ತಟ್ಟೆ, ಸಮಾಜ ಶಾಸ್ತ್ರಜ್ಞೆಯ ಟಿಪ್ಪಣಿ' ಗೆ ಹಕ್ಕಿಲ್ಲದವರು ಪುಟ್ಟಮ್ಮತ್ತೆ

ಮತ್ತು ಮೊಮ್ಮಗಳು, ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು ಮುಂತಾದ ಕಥೆಗಳೂ ದಾಂಪತ್ಯದ ಸಾಫಲ್ಯ ಸ್ವಾತಂತ್ರ್ಯ ಭದ್ರತೆ, ರಕ್ಷಣೆಗಳಂಥ ತಾತ್ವಿಕ ಪ್ರಶ್ನೆಗಳನ್ನೂ, ಗಂಡು ಹೆಣ್ಣಿನ ಸಂಬಂಧಗಳನ್ನೂ ಸೂಕ್ಷ್ಮವಾಗಿ ಪರಿಶೀಲಿಸುವ ಬೆಳವಣಿಗೆಯನ್ನು ದಾಖಲಿಸುತ್ತವೆ.

ನಶಿಸಿಹೋಗುತ್ತಿರುವ ಬದುಕಿನ ಕ್ರಮವೊಂದರ ನಂಬಿಕೆಗಳು, ನಡಾವಳಿಗಳು, ಹೆಮ್ಮೆಗಳು, ಹಮ್ಮುಗಳು, ಒಳಗೊಳಗೇ ಹುಟ್ಟಿಕೊಂಡ ಹೊಗರುಗಳನ್ನು ದಟ್ಟವಾದ ವಿವರಗಳಲ್ಲಿ ಹಿಡಿದಿಡುತ್ತಲೇ ಹೊಸಕಾಲದ ವಿಚಾರ, ಆಸೆ, ಆಸಕ್ತಿಗಳ ನಿಟ್ಟಿನಿಂದ ಅವುಗಳನ್ನು ಪರೀಕ್ಷಿಸುವ ವಿಶಿಷ್ಟ ಯತ್ನ ಈ ಸಂಕಲನದ ಕಥೆಗಳಲ್ಲಿ ಪ್ರಮುಖವಾಗಿದೆ.

★ ಸಾಲು ದೀಪಗಳು, ಪು.ಸಂಖ್ಯೆ - ೫೨೩.

ಅಧ್ಯಾಯ-೫

ಬದುಕನ್ನು ಕುರಿತ ಹೆಣ್ಣಿನ ಪ್ರೀತಿ, ಶ್ರದ್ಧೆ, ಬದ್ಧತೆ

ಬದುಕನ್ನು ಕುರಿತ ಹೆಣ್ಣಿನ ಪ್ರೀತಿ, ಬದ್ಧತೆ, ಶ್ರದ್ಧೆಗಳನ್ನು ವೈದೇಹಿಯವರ ಕೆಲವು ಕಥೆಗಳು ಪ್ರತಿನಿಧಿಸುತ್ತವೆ. ಗುಲಾಬಿಯ ಮೃದು ಪಾದಗಳು, ಸಂಸಾರ, ವರ್ತುಲ ನಮ್ಮ ಶಾಂತಿಯ ಬಯಕೆ, ಪುಟ್ಟಮ್ಮತ್ತೆ, ಶಕುಂತಲೆ, ಅಕ್ಕು ಹೀಗೆ ಯಾರೇ ಇರಬಹುದಾಗಿ ಹೆಣ್ಣು ಗಂಡಿಗಿಂತ ಹೆಚ್ಚು ಶಕ್ತಿವಂತಳೂ ಚೈತನ್ಯದಾಯಕಳೂ, ಆಗಿ ಕಾಣಿಸುವುದು ಪ್ರಧಾನವಾಗಿ ಈ ಅಂಶದಿಂದ. ಆದ್ದರಿಂದಲೇ ಬದುಕಿನ ಮೇಲೆ ಹೆಣ್ಣಿಗಿರುವ ಹಿಡಿತ ಅಪಾರವಾದದ್ದು. ಆಯ್ಕೆಯ ಬದುಕಿಲ್ಲದ, ಮನ್ನಣೆಯಿಲ್ಲದ, ಸ್ವೀಕಾರವಿಲ್ಲದ ಬದುಕನ್ನು ಕುರಿತು ಹೆಣ್ಣಿಗೆ ಇಂತಹ ಜೀವನ ಪ್ರೀತಿ ಹೇಗೆ ಸಾಧ್ಯವಾಗುತ್ತದೆ ಎನ್ನುವ ಕುತೂಹಲ. ಅದನ್ನು ಕುರಿತ ಹೆಮ್ಮೆ, ಮೆಚ್ಚುಗೆ, ವಿಷಾದ, ಅವಡುಕಚ್ಚಿದ ಕೋಪ ಎಲ್ಲವೂ ಅಲ್ಲಿ ಇದೆ. ಪುರುಷರನ್ನು ಕುರಿತ ವ್ಯಂಗ್ಯದ ಅಸೀಮ ತಿರಸ್ಕಾರದ ಎಳೆಯೊಂದು ಇವರ ಕಥೆಗಳಲ್ಲಿ ಉದ್ದಕ್ಕೂ ಹರಿಯುತ್ತಿರುತ್ತದೆ. ಅದು ಅಪ್ಪ ಇರಬಹುದು. ಗಂಡ ಇರಬಹುದು. ಅಣ್ಣ ತಮ್ಮ, ಸಹೋದರ ಯಾರೇ ಇರಬಹುದು. ಆದರೆ ಅದು ಎಲ್ಲೂ ಪುರುಷ ದ್ವೇಷದ ರೂಪದಲ್ಲಿ ಕಾಣಿಸಿಕೊಳ್ಳುವುದಿಲ್ಲ ಎಂಬುದನ್ನು ಗಮನಿಸಬೇಕು.

ಸ್ತ್ರೀವಾದಿಗಳು ಎದುರಿಸುವ ಅಪಾಯ ಹಾಗೂ ಆರೋಪಗಳಿಂದ ವೈದೇಹಿ ಪಾರಾಗಿರುವುದು ಪುರುಷ ದ್ವೇಷದ ಧ್ವನಿ ಅವರ ಸಾಹಿತ್ಯದಲ್ಲಿ ಇಲ್ಲದೇ ಇರುವುದರಿಂದಲೇ. ಸ್ತ್ರೀವಾದಿಗಳೆಲ್ಲರೂ ಕಡ್ಡಾಯವಾಗಿ ಪುರುಷದ್ವೇಷಿಗಳೇ ಆಗಿರುತ್ತಾರೆ ಎನ್ನುವುದು ಇದರ ಅರ್ಥವಲ್ಲ. ಸ್ತ್ರೀಯ ನೆಲೆಯನ್ನು ಪ್ರತಿಪಾದಿಸುವ ಶೈಲಿ ಅದಕ್ಕೆ ಬಳಸುವ ತಂತ್ರಗಳಿಂದಾಗಿಯೇ ಎಷ್ಟೋ ಭಾರಿ ಅಕಾರಣವಾಗಿ ಇಂತಹ ಆರೋಪಗಳಿಗೆ ಅವರು ಗುರಿಯಾಗಬೇಕಾಗುತ್ತದೆ.

ವೈದೇಹಿ ಸ್ತ್ರೀವಾದದ ನೇರ ಪ್ರತಿಸ್ಪರ್ಧಿ ಮೂಲವಾದ ದಾರಿಯನ್ನು ಅವರ ಸಾಹಿತ್ಯದಲ್ಲಿ ಬಳಸುವುದೇ ಇಲ್ಲ. ಹೆಣ್ಣನ್ನು ಅವಳ ಎಲ್ಲಾ ಸಾಧ್ಯತೆಯಲ್ಲಿ ಪರೀಕ್ಷಿಸುತ್ತಲೇ ಬದುಕು ಒಡ್ಡುವ ಎಲ್ಲಾ ಸವಾಲುಗಳನ್ನು ಅವಳು ಎದುರಿಸುವ

ವಿವರಗಳನ್ನು ಮಂಡಿಸುತ್ತಲೇ ಪರೋಕ್ಷವಾಗಿ ವ್ಯವಸ್ಥೆಯನ್ನು ಪ್ರಶ್ನಿಸುತ್ತಾ ಹೋಗುತ್ತಾರೆ. ಪುರುಷನಿಗಿಂತ ವ್ಯವಸ್ಥೆ ಮುಖ್ಯವಾಗಿ ಕಾಣಿಸುತ್ತದೆ.

ಹೆಣ್ಣಿನ ಚೈತನ್ಯ ಮೂಲಗಳನ್ನು ಹುಡುಕುವ, ಅವುಗಳ ಶಕ್ತಿ ಸೌಂದರ್ಯಗಳನ್ನು ಕಂಡುಕೊಳ್ಳುವುದು ವೈದೇಹಿಯವರ ಕೇಂದ್ರ ಬಿಂದುಗಳಲ್ಲೊಂದು. 'ತಾಯ್ತನ' ಅವರು ಗುರುತಿಸಿದ ಮುಖ್ಯವಾದ ಒಂದು ಚೈತನ್ಯ ಮೂಲ. ನಾನು ಆಗಲೇ ಪ್ರಸ್ತಾಪಿಸಿದ ಲೇಖನದ ಮುಂದುವರಿದ ಭಾಗದಲ್ಲಿ ಅವರು ಹೇಳುತ್ತಾರೆ. 'ಪುರುಷರ ಬಗ್ಗೆ ಯೋಚಿಸುವಾಗ ಎಷ್ಟೋ ಸಲ ಮರುಕ ಉಂಟಾಗುತ್ತದೆ. ಬದುಕಿನ ಎಷ್ಟೋ ದಿವ್ಯ ಅನುಭವಗಳ ಮೃದು ಸ್ಪರ್ಶದಿಂದ ಇವರೆಲ್ಲ ವಂಚಿತರಾಗಿದ್ದಾರೆಂದು.

ಮೂಲತಃ ಇದು ತಾಯ್ತನದ ಸುಖ, ಪುಳಕ, ರೋಮಾಂಚನ, ಹೋಲಿಕೆ ಇಲ್ಲದ, ಪರ್ಯಾಯವಿಲ್ಲದ ಅಪೂರ್ವ ಅನುಭವವನ್ನು ಕುರಿತದ್ದು, ಜಗತ್ತಿನ ಅಪೂರ್ವ ಸೃಷ್ಟಿಯಾದ ಮಗು ಬದುಕಿನ ಏಕತಾನತೆ ಬೇಸರ, ಜಿಗುಪ್ಸೆ ಎಲ್ಲವನ್ನೂ ಪರಿಹರಿಸಬಲ್ಲ ಮಾಂತ್ರಿಕ ಶಕ್ತಿ ಉಳ್ಳದ್ದು. ಬದುಕಿನಲ್ಲಿ ಉಲ್ಲಾಸವನ್ನು ತರುವ ಜೀವವಿಶೇಷ, ಹೆಣ್ಣಿನ ಬದುಕಿಗೆ ಸಾರ್ಥಕತೆಯನ್ನು ಧನ್ಯತೆಯನ್ನು ತರಬಲ್ಲದ್ದು. 'ಗುಲಾಬಿಯ ಮೃದು ಪಾದಗಳು' ಎನ್ನುವ ಕಥೆ ಈ ದೃಷ್ಟಿಯಿಂದ ಮುಖ್ಯವಾದದ್ದು. ಕಥೆಯ ನಾಯಕಿ ಆಕೆಗೆ ಮದುವೆಯಾಗಿದೆಯೋ ಇಲ್ಲವೋ, ಅವಳ ವಯಸ್ಸೂ, ಕೌಟುಂಬಿಕ ಹಿನ್ನೆಲೆ, ಅವಳ ಆತಂಕಗಳು, ನಿರಾಸೆಗಳು ಯಾವುದೂ ಕಥೆಯಲ್ಲಿ ಇಲ್ಲ. ಅದೇ ಕಥೆಯ ವಿಶೇಷವೂ ಹೌದು. ಯಾಕೆಂದರೆ ಯಾವುದೇ ವಯಸ್ಸಿನ, ಬದುಕಿನ ಯಾವುದೇ ಘಟ್ಟದಲ್ಲಿಯೂ ಹೆಣ್ಣು ತಾಯ್ತನಕ್ಕೆ ಹಂಬಲಿಸುತ್ತಾಳೆ. ತನ್ನ ದೇಹದಿಂದಲೇ ಹೊರಬರುವ ಈ ಜೀವ ಸೃಷ್ಟಿಯ ಅನುಭವಕ್ಕೆ ಸಮನಾದದ್ದು ಯಾವುದೂ ಇಲ್ಲವೆನ್ನುವುದನ್ನೂ ಇನ್ನೂ ತಾಯ್ತನದ ಅನುಭವವನ್ನು ಪಡೆಯದೇ ಇರುವ ನಾಯಕಿ, ಕಥೆಯುದ್ದಕ್ಕೂ ಅನುಭವಿಸುತ್ತಾ ಹೋಗುತ್ತಾಳೆ. ಆ ಮಗುವಿನ ತಾಯಿ ಅನುಭವಿಸುವಷ್ಟೇ ತೀವ್ರವಾಗಿ ಆಪ್ತವಾಗಿ ಅವಳು ಮಗುವಿನ ಬದುಕಿಗೆ ಸ್ಪಂದಿಸಲು ಹಂಬಲಿಸುತ್ತಾಳೆ.

ವೈದೇಹಿಯವರ ಮತ್ತೊಂದು ತಾಯ್ತನದ ಮಹತ್ವವನ್ನು, ಜವಾಬ್ದಾರಿಯನ್ನು ತಾಯಿಯ ಅಂತರಂಗದ ಮಿಡಿತವನ್ನು ತೋರಿಸಿಕೊಡುವ ಕಥೆ ಸಂಸಾರ. ಈ ಕಥೆಯ ನಾಯಕಿ ಇಬ್ಬರು ಹೆಣ್ಣುಮಕ್ಕಳನ್ನು , ಮಗ-ಸೊಸೆ ಮೊಮ್ಮಗನನ್ನು ತನ್ನ ಗಂಡನನ್ನು

ನೋಡಿಕೊಳ್ಳುವ ಜವಾಬ್ದಾರಿ ಈ ಹೆಣ್ಣಿಗಿದೆ. ಇವುಗಳ ಒತ್ತಡದಲ್ಲಿ ಅವಳು ತನ್ನ ಆರೋಗ್ಯದ ಕಡೆ ಗಮನಕೊಡುವುದೇ ಮರೆಯುತ್ತಾಳೆ. ಎಲ್ಲ ಮಕ್ಕಳ ಒತ್ತಡಗಳ ಬಗ್ಗೆ ಚಿಂತಿಸುತ್ತಾಳೆ. ಈ ಕಥೆಯು ಒಬ್ಬ ತಾಯಿಯ ಪ್ರೀತಿ, ಹೊಣೆಗಾರಿಕೆಯನ್ನು ತೋರಿಸಿಕೊಡುತ್ತದೆ. ಕಥಾನಾಯಕಿಯ ಮಕ್ಕಳಿಗೆ ಮದುವೆಯಾಗಿ ಮಕ್ಕಳಾಗಿದ್ದರೂ ಪ್ರತಿಯೊಂದು ಕೆಲಸಕ್ಕೂ ಉದಾ : ಪಾತ್ರೆ ಖರೀದಿ ಮಾಡಲೂ ಅಮ್ಮನಿಗೆ ಅವಲಂಬಿತವಾಗಿರುವುದನ್ನು ಈ ಕಥೆಯಲ್ಲಿ ಕಾಣಬಹುದು. ಒಟ್ಟಾರೆಯಾಗಿ ಮಕ್ಕಳ ಬಗೆಗಿನ ತಾಯಿಯ ಆತಂಕ ಈ ಕಥೆಯಲ್ಲಿ ಎದ್ದು ಕಾಣುತ್ತದೆ. ತಾಯ್ತನವನ್ನು ಕುರಿತು ಮದುವೆಗೆ ಮುಂಚೆಯೇ ಹೆಮ್ಮೆಯಿಂದ ಮಾತನಾಡುವ ಎರಡನೆ ಬಿ.ಎ. ಓದುತ್ತಿರುವ ಶಾಂತಿಯ ಅಭಿಪ್ರಾಯವನ್ನು ಅವಳ ಮಾತುಗಳಲ್ಲೇ ಗ್ರಹಿಸುವುದಾದರೆ ನನಗೇನೋ ಇದ್ದರೆ ಹನ್ನೆರಡು ಮಕ್ಕಳು ಇರಬೇಕು. ಎಲ್ಲರೂ ಚೆಂದವಾಗಿ, ಬುದ್ಧಿವಂತರಾಗಿ, ಅದೃಷ್ಟವಂತರಾಗಿ ಬೆಳೆದರೆ ಎಷ್ಟು ಹೆಮ್ಮೆ ಆವಾಗ! ಬೇಸಿಗೆಯ ರಜೆಯಲ್ಲಿ ಅವರವರ ಊರಿಂದ ಅವರು, ಅವರ ಮಕ್ಕಳು ಬಂದಾಗ ಮನೆಯೆಲ್ಲ ಗೆಲುವಾಗುತ್ತದೆ. ಸಣ್ಣವರಿರುವಾಗ ಸಾಕಲು ತುಸು ಕಷ್ಟವಾದೀತು ಅಷ್ಟೇ -ಎನ್ನುವ ಶಾಂತಿಯ ಮಾತುಗಳಲ್ಲಿ ತಾಯ್ತನವನ್ನು ಕುರಿತ ಪ್ರೀತಿ ಅಭಿಮಾನ ವ್ಯಕ್ತವಾಗುತ್ತದೆ.

ವೈದೇಹಿಯವರ ಇನ್ನೊಂದು ಮಹತ್ವಾಕಾಂಕ್ಷೆಯ ಕೃತಿ 'ಶಕುಂತಲೆಯೊಂದಿಗೆ ಕಳೆದ ಅಪರಾಹ್ನ' ದಲ್ಲಿಯೂ ಈ ಅಂಶ ಇನ್ನೊಂದು ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ತನ್ನ ಬದುಕಿನ ಪುನರಾವಲೋಕನಕ್ಕೆ ತೊಡಗಿಸಿಕೊಳ್ಳುವ ಶಕುಂತಲೆ ದುಶ್ಯಂತ ಹಾಗೂ ತನ್ನ ನಡುವಿನ ಸಂಬಂಧವನ್ನು ಕುರಿತು ಯೋಚಿಸುವಾಗ ದುಶ್ಯಂತನ ಮೇಲೆ ಆರೋಪ ಹೊರಿಸುವುದಕ್ಕೆ ಕಾರಣಗಳೇ ಇಲ್ಲ ಎನಿಸುತ್ತದೆ. ಪ್ರೀತಿಯ ದಿವ್ಯವಾದ ಅನುಭವವನ್ನು ಒದಗಿಸಿಕೊಟ್ಟ ಅವನಿಗೆ ತಾನು ಕೃತಜ್ಞಳಾಗಿರಬೇಕೆಂದೆ ಅವಳಿಗೆ ಅನ್ನಿಸುತ್ತದೆ. ತುಂಬಿದ ಸಭೆಯಲ್ಲಿ ಅವಳನ್ನು ದುಶ್ಯಂತ ನಿರಾಕರಿಸಿದಾಗ ಉಂಗುರವನ್ನು ತೋರಿಸಿ ತಮ್ಮಿಬ್ಬರ ಸಂಬಂಧವನು ಸಾಬೀತುಪಡಿಸುವುದು ಅವಳಿಗೆ ಹೇಸಿಗೆಯೆನ್ನಿಸಿ ಅಲ್ಲಿಂದ ಹೊರಬರುತ್ತಾಳೆ. ಇಡೀ ಲೋಕ ದುಶ್ಯಂತನನ್ನು ಅಪರಾಧಿ ಎಂದು ಸಾರುತ್ತಿದ್ದಾಗಲೂ ಶಕುಂತಲೆ ಅದಕ್ಕೆ ದನಿಗೂಡಿಸುವುದಿಲ್ಲ. ಈ ಘಟ್ಟದಲ್ಲಿ ತಾನು ಅದರ ಬಗ್ಗೆ ಅಷ್ಟೊಂದು

★ ಎಂ.ಎ. ಆಶಾದೇವಿ, ಸ್ತ್ರೀಮತವನುತ್ತರಿಸಲಾಗದೇ ? ಪು.ಸಂ. ೭೫.

ಯೋಚಿಸದೇ ಇರುವುದಕ್ಕೆ ಅವಳು ಕೊಡುವ ಕಾರಣ ಏನೆಂದರೆ ಲೋಕವನ್ನೇ ಧಿಕ್ಕರಿಸುವಂತಹ ಸುಖ ನನ್ನ ಹೊಟ್ಟೆಯಲ್ಲಿ ಬೆಳೆಯುತ್ತಿತ್ತು. ಆ ಸುಖದೆದುರಿಗೆ ದುಶ್ಯಂತನ ನಿರಾಕರಣೆ ಲೋಕಾಪವಾದ ಎಲ್ಲವೂ ಅವಳಿಗೆ ಎರಡನೆಯದಾಗಿ ಕಾಣಿಸುತ್ತದೆ. ಬದುಕಿನಲ್ಲಿ ಮಗು ಆಸೆಯನ್ನೂ, ಉತ್ಸಾಹವನ್ನೂ ಬೆಳಕನ್ನೂ ತರುವ ಸಾಧನವಾಗುತ್ತದೆ. ಆದ್ದರಿಂದಲೇ ತಾಯ್ತನ ಅವಳಿಗೆ ಸರ್ವಸ್ವ.

ಅಧ್ಯಾಯ-೬

ವೈದೇಹಿಯವರ ಕಥೆಗಳಲ್ಲಿ ಮೂಡಿಬಂದಿರುವ ಗ್ರಾಮೀಣ ಬದುಕು ಹಾಗೂ ಸಂಸ್ಕೃತಿ ಚಿತ್ರಣ

ವೈದೇಹಿಯವರ ಕಥೆಗಳಲ್ಲಿನ ಸಾಂಸ್ಕೃತಿಕ ಚಿತ್ರಣವನ್ನು 'ಮದುವೆ ಹೆಣ್ಣು ಸೀರೆ', ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ, ಆರತಿತಟ್ಟೆ, ಮುಂತಾದ ಕಥೆಗಳಲ್ಲಿ ಅತ್ಯಧಿಕವಾಗಿ ವ್ಯಕ್ತವಾದರೆ, ಗ್ರಾಮೀಣ ಬದುಕನ್ನು ಈ ಸಂಕಲನದ ಎಲ್ಲಾ ಕಥೆಗಳಲ್ಲಿ ಪ್ರತಿಬಿಂಬಿಸುತ್ತವೆ. ಈ ಸಾಲಿಗೆ ಸೇರುವ ಒಂದು ಮುಖ್ಯ ಕಥೆಯೆಂದರೆ ಬಂದು ಹೋಗುವವರು. ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ ಕಥೆ ಮದುವೆಯೊಂದರ ಸಡಗರ, ಸಂಭ್ರಮದ ಚಿತ್ರದೊಳಗಿನಿಂದ ಹಲವು ಪೀಳಿಗೆಗಳ, ಹಲವು ಮನೋಧರ್ಮಗಳ ಹೆಣ್ಣುಮಕ್ಕಳ ಒಳಲೋಕವನ್ನು ಅನಾವರಣ ಮಾಡುತ್ತದೆ. ಜರಿ ಸೀರೆಗಳನ್ನು , ಆಭರಣಗಳನ್ನು ಉಡುಗೆ-ತೊಡುವ ಸಡಗರ, ದೊಡ್ಡ ಗಂಟಲಿನಲ್ಲಿ ಯೋಗಕ್ಷೇಮ ವಿಚಾರಿಸುವ ಅಜ್ಜಿಯರ ಸಾಂಪ್ರದಾಯಿಕ ಮಾತುಕತೆ, ಹೊಸ ಪೀಳಿಗೆಯವರ ವೇಷ ವರ್ತನೆಗಳಿಗೆ ಮೂಗುಮುರಿದ ಹಳಬರು, ಒಂದು ಮದುವೆಯ ಸಂದರ್ಭದಲ್ಲೇ ಎಷ್ಟೋ ಹೊಸ ಮದುವೆಗಳ ಒಪ್ಪಂದಗಳಾಗುವುದು, ಅಪ್ಪ-ಅಮ್ಮಂದಿರು ಹೆಣ್ಣುಮಕ್ಕಳ ಮದುವೆಗೆ ತವಕಿಸಿದರೂ ಅವರ ಒಪ್ಪಿಗೆ ಕೇಳುವ ಪುರುಸೊತ್ತು ಮತ್ತು ಅವಶ್ಯಕತೆಗಳು ಇಲ್ಲವಾಗಿರುವುದು, ಹೇಳಿದ್ದನ್ನು ವಿಧೇಯವಾಗಿ ಒಪ್ಪುವ ಹೆಣ್ಣುಗಳನ್ನು ಮಾತ್ರ ಮೆಚ್ಚುವ ಹಿರಿಯರು, ಹೊಸ ವಿಚಾರಗಳಿದ್ದರೂ ಗಟ್ಟಿಯಾಗಿ ಹೇಳಲಾರದೆ ತಳಮಳಿಸುವ ಯುವತಿಯರು ಮುಂತಾಗಿ ಒಂದು ವಿಶಾಲ ಸಮಾಜವನ್ನೇ ಈ ಕಥೆ ತೆರೆದಿಡುತ್ತದೆ.

ಪೀಳಿಗೆಗಳ ಅಂತರದಿಂದ ಹುಟ್ಟುವ ಸಂಘರ್ಷದ ಇನ್ನೊಂದು ಮುಖವನ್ನು ಪುಟ್ಟಮ್ಮತ್ತೆ ಮತ್ತು ಮೊಮ್ಮಗಳು 'ಕಥೆ ವ್ಯಕ್ತಿಗಳ ಬದುಕಿನ ಸಂದರ್ಭದಲ್ಲಿ ಚಿತ್ರಿಸುತ್ತದೆ. ಆದರೆ ಇಡೀ ಒಂದು ಸಮುದಾಯವೇ ನಾಗರೀಕತೆಯತ್ತ ಬದಲಿಸುವ ಪ್ರಕ್ರಿಯೆಯನ್ನು ಹಿಡಿದಿಡುವ ಮನೋಜ್ಞ ಯತ್ನ. ' ಗುಲಾಬಿ ಟಾಕೀಸು.... ಕಥೆಯಾಗಿದೆ. ಗ್ರಾಮೀಣ

★ ಸಾಲು ದೀಪಗಳು, ಪು.ಸಂಖ್ಯೆ - ೫೨೪.

ಸಮಾಜಗಳ ಆಧುನಿಕತೆಯ ಪ್ರಕ್ರಿಯೆ. ಹಲವಾರು ಕಥೆಗಾರರಿಗೆ ವಸ್ತುವಾಗಿದೆ. ವೈದೇಹಿಯವರು ಲಿಲ್ಲೀಬಾಯಿ ಎಂಬ ಸೂಲಗಿತ್ತಿ, ಗುಲಾಬಿ ಟಾಕೀಸಿನಲ್ಲಿ ಟಿಕೇಟು ಹರಿಯುವ ಗೇಟ್‌ಕೀಪರ್ ಆಗಿ ಆ ಊರಿನ ಹೆಂಗಸರ ದೈನಂದಿನ ಜೀವನದಲ್ಲಿ ಮಾತ್ರವಲ್ಲ, ಇದೇ ಸಮಾಜದ ಸಾಂಸ್ಕೃತಿಕ ಸ್ಥಿತ್ಯಂತರಕ್ಕೆ ನಿಮಿತ್ತವಾದ ಬಗೆಯನ್ನು ತುಂಬ ಮಾರ್ಮಿಕವಾಗಿ ಅನಾವರಣಗೊಳಿಸುವ ರೀತಿ ಅನನ್ಯವಾದದ್ದು.

ವೈದೇಹಿಯವರ ಕಥೆಗಳಲ್ಲಿ ಕುಂದಾಪುರ, ಉಡುಪಿ ಪರಿಸರದ ಮಧ್ಯಮ ಹಾಗೂ ಕೆಳವರ್ಗಗಳ ಬದುಕು, ಸಂಸ್ಕೃತಿಗಳು ತಮ್ಮದೇ ಆದ ರೀತಿಯಲ್ಲಿ ಪ್ರತಿಬಿಂಬಿಸಿದೆ. ವೈದೇಹಿಯವರು ಗೀತಾನಾಗಭೂಷಣ ಮತ್ತು ನಾಗವೇಣಿಯವರಂತೆ ಈ ಬದುಕಿನ ಸಾಂಸ್ಕೃತಿಕ ವಿವರಗಳನ್ನು ಪ್ರಜ್ಞಾಪೂರ್ವಕವಾಗಿ ದಾಖಲಿಸ ಹೊರಟವರಲ್ಲ. ಅವರ ಹೆಚ್ಚಿನ ಕಥೆಗಳ ವಸ್ತು ಈ ವರ್ಗಗಳಿಗೆ ಸಂಬಂಧಿಸಿರುವುದರಿಂದ ಅವರ ಸಾಂಸ್ಕೃತಿಕ ವಿವರಗಳು ಪ್ರಾಸಂಗಿಕವಾಗಿ ಇಲ್ಲಿ ದಾಖಲಾಗಿವೆ. ಕಥನ ಸಾಹಿತ್ಯದಲ್ಲಿ ಪ್ರಾದೇಶಿಕ ಸೊಗಡನ್ನು ಮೇಳವಿಸಿದ ಪ್ರಥಮ ಲೇಖಕಿಯಾಗಿಯೂ ವೈದೇಹಿ ಗಮನ ಸೆಳೆಯುತ್ತಾರೆ. ಅದುವರೆಗೆ ಬೇರೆ ಯಾವ ಲೇಖಕಿಯೂ ಪ್ರಾದೇಶಿಕತೆಯನು ಇಷ್ಟು ಸಮರ್ಥವಾಗಿ ದುಡಿಸಿಕೊಂಡಿರಲಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಆಡುಬಾಷೆಯ ಧಾಟಿ ಇವರ ಕಥೆಗಳಿಗೆ ವಿಶಿಷ್ಟ ಪ್ರಾದೇಶಿಕತೆಯ ಮೆರುಗು ನೀಡುತ್ತದೆ. ಇಲ್ಲಿ ಬಳಕೆಯಾಗಿರುವುದು ಕುಂದಾಪುರದ ಕನ್ನಡ, ಈ ಆಡುಭಾಷೆಯಲ್ಲಿ ಸಹಜವಾಗಿಯೇ ಹಾಸ್ಯ, ವ್ಯಂಗ್ಯ, ಬೈಗುಳ, ಅಶ್ಲೀಲತೆ, ವಿಶಿಷ್ಟವಾದ ಬೇಧವಿಲ್ಲದಂತೆ ಬೆರೆತುಹೋಗಿರುತ್ತದೆ. ವೈದೇಹಿಯವರ ಕಥೆಗಳಲ್ಲಿ ಬರುವ ಮೇಲ್ಜಾತಿಯ ಬ್ರಾಹ್ಮಣರು, ಕೃಷಿಕಾರ್ಮಿಕರು, ಕೂಲಿ ಹೆಣ್ಣುಗಳು, ಮನೆಗೆಲಸದ ಹೆಣ್ಣುಗಳಲ್ಲ ಬಳಕೆಯಾಗುವ ಆಡುಭಾಷೆ ಅವರ ಸಂಸ್ಕೃತಿಯ ಪ್ರತಿಬಿಂಬವಾಗಿದೆ.

ದಕ್ಷಿಣ ಕನ್ನಡ ಎಂದೆನಿಸಿಕೊಂಡಿರುವ ಮಂಗಳೂರಿನ ಪ್ರಾಂತ್ಯದಲ್ಲಿ ಮಳೆಯ ಆರ್ಭಟ ಹೆಚ್ಚು. ಈ ಭಾಗದ ಜನರು ಹಳ್ಳಿಗಾಡುಗಳಲ್ಲಿ ಒಂಟೊಂಟಿ ಮನೆಗಳಲ್ಲಿ ಧೈರ್ಯದಿಂದ ಜೀವನವನ್ನು ನಡೆಸುವವರು. ಪ್ರಕೃತಿಯ ಪ್ರಸಾದದೊಡನೆ ಪ್ರಕೃತಿ ವಿಕೋಪವನ್ನು ಆಗಾಗ್ಗೆ ಧೈರ್ಯದಿಂದ ಈ ಜನ ಎದುರಿಸುತ್ತಾ ಬಂದಿದ್ದಾರೆ. ಸಾಮಾನ್ಯ ಜನರ ಜೀವನ ನಾನಾಬಗೆಯ ಕಷ್ಟ ಕಾರ್ಪಣ್ಯಗಳಿಂದ ಕೂಡಿದ್ದರೂ ಅವರು

ಧೈರ್ಯವನ್ನು ಕಳೆದುಕೊಂಡವರಲ್ಲ. ಜೀವನ ಪ್ರೀತಿ, ಉತ್ಸಾಹಗಳಿಗೆ ಅವರಲ್ಲಿ ಕೊರತೆ ಇಲ್ಲ. ವೈದೇಹಿಯವರು 'ಬಂದು ಹೋಗುವವರು ಎಂಬ ಈ ಸಣ್ಣ ಕಥೆಯಲ್ಲಿ ಈ ಜನರ ಏಳು- ಬೀಳುಗಳನ್ನು ಕಷ್ಟ ಸುಖಗಳನ್ನು ಮಳೆ - ಚಳಿ, ಗಾಳಿ, ಹುಟ್ಟು ಸಾವುಗಳಿಂದ ಉಂಟಾಗುವ ನೋವುಗಳಿಗೆ ಹೇಗೆ ಹೊಂದಿಕೊಂಡು ಬಾಳುತ್ತಿರುವರೆಂಬುದನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ. ಇದು ಗ್ರಾಮೀಣ ಬದುಕಿನ ದಟ್ಟ ವಿವರಗಳನ್ನೊಳಗೊಂಡ ಕಥೆಯಾಗಿದೆ. ಶಾಂತಮ್ಮ ಈ ಕಥೆಯ ಕೇಂದ್ರ ವ್ಯಕ್ತಿ.

ವೈದೇಹಿಯವರು ಬಂದು ಹೋಗುವವರು ಕಥೆಯ ಆರಂಭದಲ್ಲಿ ಮಂಗಳೂರು ಪ್ರಾಂತ್ಯದಲ್ಲಿ ಸುರಿಯುವ ಮಳೆ ಮತ್ತು ಅದರ ಪರಿಣಾಮಗಳನ್ನು ಚಿತ್ರಿಸಿಕೊಟ್ಟಿದ್ದಾರೆ. ಈ ಕಥೆಯ ನಿರೂಪಕಿ ಶಾಂತಮ್ಮ, ಇವರು ಸಾಧು ಸ್ವಭಾವದವರು. ಮನೆಯ ಕೆಲಸದಾಳುಗಳನ್ನು ಸಹಿತ ಗದರಿಸಿ ಕೆಲಸ ಮಾಡಿಸಿಕೊಳ್ಳುವವರಲ್ಲ. ಈ ಕಾರಣದಿಂದಲೇ ಇವರು ಮನೆಯಂಗಳದಲ್ಲಿ ಬಿಟ್ಟಿದ್ದ ಹಲಸಿನ ಹಣ್ಣು ಕೀಳಿಸಿಕೊಳ್ಳಲು ಸಾಧ್ಯವಾಗದಂತಹ ಪರಿಸ್ಥಿತಿ ಹಾಗೂ ಮಳೆ ಇಲ್ಲಿದೆ.

ಈ ಕಥೆಯಲ್ಲಿ ಶಾಂತಮ್ಮನವರ ಮನೆಯೊಂದು ಕೇಂದ್ರ ಸ್ಥಾನವೆಂಬಂತೆ ಇದೆ. ಎಲ್ಲಾ ಘಟನೆಗಳು ನಡೆಯುವುದೇ ಇಲ್ಲಿಯೇ. ಇಲ್ಲಿ ನಡೆಯುವ ಘಟನೆಗಳ ಪ್ರಸ್ತಾಪವೂ ಈ ಮನೆಯ ಅಂಗಳದಲ್ಲಿಯೇ ಪ್ರಸ್ತಾಪವಾಗುವುದು. ಚರ್ಚೆಗೆ ಒಳಪಡುವುದು, ನಾಟಕದ ತೆರೆಯ ಮೇಲೆ ನಡೆಯುವ ಪಾತ್ರಗಳಂತೆ ಶಾಂತಮ್ಮನವರ ಮನೆಗೆ ಒಬ್ಬರ ನಂತರ ಒಬ್ಬರು ಬಂದು ಹೋಗುತ್ತಿರುತ್ತಾರೆ. ಒಟ್ಟಾರೆಯಾಗಿ ಊರಿನ ಎಲ್ಲಾ ಘಟನೆಗಳ ಚರ್ಚೆ ನಡೆಯುವ ಸ್ಥಳವಾಗಿದೆ.

ಶಾಂತಮ್ಮನ ಮನೆಯ ಹತ್ತಿರ ಬರುವ ದುಗ್ಗು, ಕಾಮತರ ಮಗಳು ಅರಸಿನಮಂಡಿಗೆ ತಗುಲಿ ಸತ್ತಿದ್ದನ್ನು ತಿಳಿಸುತ್ತಾಳೆ. ಈ ವಿಷಯವನ್ನು ಕೇಳಿದ ಶಾಂತಮ್ಮನ ಮನೆಯ ಕೆಲಸದಾಕೆ ಚಂದು. ಮಾಡುವ ಕೆಲಸವನ್ನು ಅರ್ಧಕ್ಕೆ ಬಿಟ್ಟು ಓಡುತ್ತಾಳೆ. ಸಾವಿನ ಆಘಾತದಿಂದ ಬೆವರುತ್ತಿದ್ದ ದುಗ್ಗುವನ್ನು ಶಾಂತಮ್ಮ ಧೈರ್ಯ ತುಂಬಿದಳು. ದುಗ್ಗು ತನ್ನಎದೆಯ ಮೇಲೆ ಕೈಯಿರಿಸಿ ತನ್ನ ಎದೆ ಒಂದೇ ಸಮನೆ ಹೊಡೆದುಕೊಳ್ಳುತ್ತಿದೆ

★ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ. ಪು.ಸಂ. ೪೦೦.

ಎಂದಳು.ಏಕೆಂದರೆ ಎದೆಹೊಡೆದುಕೊಳ್ಳದಿದ್ದರೆ ಪ್ರಾಣ ಹೋದಂತೆ ಎಂದು ಆಕೆ ತಿಳಿದುಕೊಂಡಿರಲಿಲ್ಲ. ಅವಳು ಅನೇಕ ಭಾರಿ ಡಾಕ್ಟರರ ಬಳಿ ಹೋಗಿ ನನ್ನ ಎದೆ ಹೊಡೆದುಕೊಳ್ಳುತ್ತಿದೆ '' ಎಂದದ್ದುಂಟು. ಶಾಂತಮ್ಮ ದುಗ್ಗುವಿಗೆ ಸಮಾಧಾನ ಹೇಳುತ್ತಾಳೆ. ಕಾಮತರ ಮಗಳು ಔಷಧಿಗೆಂದು ತಂದೆಯ ಮನೆಗೆ ಬರದೆ ಗಂಡನ ಮನೆಯಲ್ಲಿದಿದ್ದರೆ ಬದುಕುತ್ತಿದ್ದಳೆಂಬುದು ದುಗ್ಗುವಿನ ತರ್ಕವಾಗಿತ್ತು.

ದುಗ್ಗು ಹೀಗೆ ಊರಿನ ಸುದ್ದಿಗಳನ್ನು ತಂದು ಹಬ್ಬುವವಳೇ ಹೊರತೂ ಏನೂ ಕೆಲಸವನ್ನು ಮಾಡುತ್ತಿರಲಿಲ್ಲ. ಆದ್ದರಿಂದ ಶಾಂತಮ್ಮನೇ ಜೇಡಗಳನ್ನು ಗುಡಿಸಿ ಹಾಕಲಾರಂಭಿಸುತ್ತಾರೆ. ದುಗ್ಗು ಹೇಳುವ ಮತ್ತೊಂದು ವಿಚಾರವೆಂದರೆ ಸಿದ್ದಿ ಮಗಳು ನರ್ಸ್ ಆಗಿ ವಿದೇಶಕ್ಕೆ ಹೋಗಿ ತಾಯಿಗೆ ದುಡ್ಡು ಕಳಿಸುತ್ತಿರುವುದರಿಂದ ಮನೆ, ತೋಟ ಮಾಡಿಕೊಂಡು ಅಲ್ಪಂಗೆ ಐಶ್ವರ್ಯ ಬಂದಂತೆ ಆಡುತ್ತಿರುವಳು ಎಂದೂ. ಆದರೆ ಆಕೆ ಏನೇನು ಮಾಡಿ ಹಣ ಮಾಡುತ್ತಾಳೋ ಎಂಬ ಕೆಟ್ಟದ್ವನಿಯನ್ನೂ ಸೇರಿಸದಿರಲಿಲ್ಲ.

ಆ ಹೊತ್ತಿಗೆ ಸಣ್ಣಿ ಗರ್ಭಿಣಿಯಾಗಿರುವುದರಿಂದ ನಿಧಾನವಾಗಿ ನಡೆದು ಬರುವುದನ್ನು ಗಮನಿಸಿ 'ತೇರು ಬಂತು'ಎಂದು ಹಾಸ್ಯ ಮಾಡುತ್ತಾರೆ. ಸಣ್ಣಿ ತುಂಬಿದ ಗರ್ಭಿಣಿಯಾಗಿರುವುದರಿಂದ ಆ ತಿಂಗಳೇ ಹಡೆಯುವುದಿತ್ತು. ಅವಳು ಏದುಸಿರು ಬಿಡುವುದನ್ನು ಕಂಡ ಶಾಂತಮ್ಮ ಬಾರ್ಲಿ ನೀರು ಕೊಡಲು ಸಿದ್ಧಳಾದಳು. ಈ ಸಣ್ಣಿ ಸಣ್ಣ ಸಣ್ಣ ವಿಷಯಗಳಿಗೂ ಅತ್ತುಬಿಡುತ್ತಿದ್ದಳು. ಆ ಹೊತ್ತಿಗೆ ಅಲ್ಲಿಗೆ ಬಂದ ಮಂಜ ಈಗಾಗಲೇ ಮೂರು ಮಕ್ಕಳನ್ನು ಕಳೆದುಕೊಂಡವನು ಸಣ್ಣಿಯ ಅಳುಮುಖವನ್ನು ಕಂಡು 'ಅಮ್ಮ ಕಂಡಿರಲ್ಲ ಸಣ್ಣಿಯನ್ನು' ಇದೇನಾದರೂ ಉಳಿಯುತ್ತದಾ ಹೆರಿಗೆಯಲ್ಲಿ'' ಎಂದಾಗ ಸಣ್ಣಿಯ ಅಳು ಹೆಚ್ಚಾಗುತ್ತದೆ. ಶಾಂತಮ್ಮ ಸಣ್ಣಿಯನ್ನು ಸಮಾಧಾನ ಮಾಡುತ್ತಾರೆ. ಮಂಜನಿಗೆ ಹೇಳಿ ಹಲಸಿನ ಹಣ್ಣನ್ನು ಕಿತ್ತಿಸಿಯಾಯಿತು. ಎಲ್ಲರೂ ಸೇರಿ ಹಲಸಿನ ಸೊಳೆಯನ್ನು ಬಿಡಿಸುತ್ತಾ ಹರಟೆಯನ್ನು ಮುಂದುವರೆಸುತ್ತಾರೆ.

ಕಾಮತರ ಮನೆಯ ಸಾವಿನ ಸುದ್ದಿಯನ್ನು ಹರಟುತ್ತಾ ಮೊದಲಿನಿಂದಲೂ ನಾದಿನಿಗೂ ಭಾವನಿಗೂ ಒಳ್ಳೆಯ ಸಂಬಂಧವಿದ್ದಿತೆಂದೂ ಆಕ್ಷೇಪ ಮಾಡುತ್ತಾರೆ. ಈ ಸಾಲುಗಳಲ್ಲಿ ಊರಿನ ಇತರರ ಮನೆಯ ಪ್ರಸ್ತಾಪಗಳು. ತಮ್ಮ ಕಷ್ಟ-ಸುಖಗಳು

ಪ್ರಸ್ತಾಪವಾಗಿರುವುದನ್ನು ಗಮನಿಸಬಹುದು. ಅಲ್ಲದೆ ಅಲ್ಲಿ ಕೆಳವರ್ಗಕ್ಕೆ ಸೇರಿದ ಸಣ್ಣಿಗೆ ಬಾರ್ಲಿ ಗಂಜಿಯನ್ನು ಮಾಡಿ ಕುಡಿಯಲು ಕೊಡುವ ಶಾಂತಮ್ಮನ ದೊಡ್ಡ ಗುಣವನ್ನು ಮಾನವೀಯ ಪರ ಕಾಳಜಿಯನ್ನು ಈ ಮೇಲಿನ ಸಾಲುಗಳು ತಿಳಿಸಿಕೊಡುತ್ತವೆ.

ಮುಂದಿನ ಸಾಲುಗಳಲ್ಲಿ ಮಂಜ ಕಾಫಿಗೆ ಹೋದ ನಂತರ ಸಣ್ಣಿ ಕೂತ ಸ್ಥಳದಲ್ಲಿಯೇ ಬಿದ್ದುಬಿಡುತ್ತಾಳೆ. ಅವಳು ಪ್ರಜ್ಞೆ ಕಳೆದುಕೊಂಡು ನರಳಲಾರಂಭಿಸುತ್ತಾಳೆ. ಆಗ ಎಲ್ಲರೂ ನೀರು ತಟ್ಟಿ ಎಚ್ಚರಿಸುತ್ತಾರೆ. ಹೆರಿಗೆ ನೋವು ಬಂದಿದ್ದ ಅವಳನ್ನು ಒಳಕೋಣೆಗೆ ಸಾಗಿಸಿ ಹೆರಿಗೆಗೆ ಸಿದ್ಧಮಾಡುತ್ತಾರೆ. ಅವರಿಗೆ ಜೀರಿಗೆ ಕಷಾಯವನ್ನು ಮಾಡಿ ಕುಡಿಸುತ್ತಾರೆ. ಈ ಕಡೆ ಸಣ್ಣಿ ಗಂಡು ಮಗುವಿಗೆ ಜನ್ಮ ನೀಡುತ್ತಾಳೆ. ಆ ಕಡೆ ಹಲಸಿನ ದಿಂಡನ್ನು ಗಂಟಲಿನಲ್ಲಿ ಸಿಕ್ಕಿಸಿಕೊಂಡ ಎಮ್ಮೆ ಸಾವನ್ನಪ್ಪುತ್ತದೆ. ಮಗುವಿನ ಜನನದಿಂದಾಗಿ ಮಂಜನಿಗೆ ಸ್ವರ್ಗಸುಖ ದೊರಕಿದಂತಾಗುತ್ತದೆ. ಶಾಂತಮ್ಮನ ಮನೆಗೆ ಬಂದದಕ್ಕೆ ತನ್ನ ಮಗು ಉಳಿಯಿತು ಎಂದು ಅವನು ಭಾವಿಸುತ್ತಾನೆ. ಮೂರು ದಿನ ಮಗು ಬಾಣಂತಿ ತನ್ನ ಮನೆಯಲ್ಲಿಯೇ ಇದ್ದು ಸ್ವಲ್ಪ ಸುಧಾರಿಸಿದ ಮೇಲೆ ಮನೆಗೆ ಹೋಗಲು ಶಾಂತಮ್ಮ ಹೇಳುತ್ತಾರೆ. ಆದರೆ ಮನೆಯಲ್ಲಿದ್ದ ಎಮ್ಮೆ ಸತ್ತದ್ದಕ್ಕೆ ಶಾಂತಮ್ಮನಿಗೆ ತುಂಬ ದುಃಖವಾಗುತ್ತದೆ. ಇದರಿಂದ ಅವರು ಕಣ್ಣೀರು ಹಾಕುತ್ತಾರೆ. ಇಲ್ಲೂ ಕೂಡ ಶಾಂತಮ್ಮನ ಮಾನವೀಯ ಗುಣವೇ ಎದ್ದು ಕಾಣುತ್ತದೆ. ಶಾಂತಮ್ಮ ತನಿಯನಿಗೆ ಎಮ್ಮೆಯ ದೇಹವನ್ನು ಸಾಗಿಸಲು ಹೇಳುತ್ತಾರೆ. ದುಗ್ಗು ಶಾಂತಮ್ಮನ ಮನೆಯಿಂದ ಹೋಗುವಾಗ ಒಂದು ಪಾತ್ರೆಯ ತುಂಬ ಹುಳಿಯನ್ನು ತೆಗೆದುಕೊಂಡು ಹೊರಡುತ್ತಾಳೆ. ಮತ್ತೆ ಮಳೆ ಬರುವ ಸೂಚನೆ ಕಾಣಿಸುತ್ತದೆ. ಅಷ್ಟರಲ್ಲಿ ಎಲ್ಲರೂ ಅವರವರ ಮನೆ ಸೇರಿಕೊಳ್ಳುತ್ತಾರೆ.

ಈ ಕಥೆಯಲ್ಲಿ ಶಾಂತಮ್ಮನ ಮನೆ ಕೇಂದ್ರಬಿಂದುವಾಗಿದ್ದು, ಇವರ ಮನೆಗೆ ಬಂದು ಹೋಗುವವರ ಜನರ ಜೀವನ ಚಿತ್ರಣವು ಸೊಗಸಾಗಿ ಮೂಡಿ ಬಂದಿದೆ. ಈ ಪಾತ್ರಗಳ ಮೂಲಕವೇ ಆ ಪರಿಸರದ ಮೇಲ್ವರ್ಗ, ಕೆಳವರ್ಗ, ಒಟ್ಟಾರೆ ಆ ಪ್ರದೇಶದ ಜನರ ಸಂಸ್ಕೃತಿಯನ್ನು ನಮ್ಮ ಕಣ್ಣ ಮುಂದೆ ಕಟ್ಟಿಕೊಡುತ್ತದೆ. ಅದರ ಜೊತೆಗೆ ಸದಾ ಮಳೆ ಸುರಿಯುತ್ತಲೇ ಇರುವ, ಸುತ್ತ ಮುತ್ತಲಿನ ಹಸಿರಾದ ಪರಿಸರ ಚಿತ್ರಣ ತುಂಬಾ ಮೋಹಕವಾಗಿ ಕಥೆಯಲ್ಲಿ ಚಿತ್ರಣಗೊಂಡಿದೆ. ಇದಕ್ಕೆ ಒಂದು ಉತ್ತಮ ನಿದರ್ಶನವೆಂದರೆ

ಹಲಸಿನ ಹಣ್ಣು ಕೀಳಲು ಸಾಧ್ಯವಿಲ್ಲದಷ್ಟು ಸದಾ ಸುರಿಯುತ್ತಿರುವ ಮಳೆಯಿಂದಾಗಿ ಮರದ ಬುಡ ಪಾಚಿಕಟ್ಟಿದೆ ಎಂಬ ಚಿತ್ರಣ ಕಥೆಯಲ್ಲಿ ನಮಗೆ ವ್ಯಕ್ತವಾಗುತ್ತದೆ.

ದಕ್ಷಿಣ ಕನ್ನಡ ಪ್ರಾಂತ್ಯದ ಜನರ ನಿತ್ಯ ಜೀವನದ ಸ್ವರೂಪವನ್ನು ಲೇಖಕಿಯವರು ಇಲ್ಲಿ ಅನಾವರಣ ಮಾಡಿದ್ದಾರೆ. ಶಾಂತಮ್ಮನ ಸರಳವೂ, ಪ್ರೀತಿಯುತವೂ ಔದಾರ್ಯ ಪೂರ್ಣವೂ ಆದ ವ್ಯಕ್ತಿತ್ವ ಅನುಕರಣಾರ್ಹವಾದುದಾಗಿದೆ. ಶಾಂತಮ್ಮನ ಸ್ವಭಾವದಲ್ಲಿ ಗ್ರಾಮೀಣ ಜನರಲ್ಲಿ ಸಾಮಾನ್ಯವಾಗಿ ಕಾಣುವ ಸೌಜನ್ಯ. ಔದಾರ್ಯಗಳನ್ನು ಕಾಣಬಹುದು. ತನ್ನ ಮನೆಯ ಕೆಲಸದವರನ್ನು ಶೋಷಣೆ ಮಾಡುವುದು ಈಕೆಗೆ ತಿಳಿದಿರಲಿಲ್ಲ. ಮಾನವೀಯತೆ ಮತ್ತು ಸಹಾಯಪರ ಗುಣಗಳು ಇವರಲ್ಲಿ ಅಡಕಗೊಂಡಿವೆ. ಒಟ್ಟಾರೆಯಾಗಿ ಈ ಬಂದು ಹೋಗುವವರು ಕಥೆಯು ಮಂಗಳೂರು, ಕುಂದಾಪುರ, ಉಡುಪಿ ಪ್ರದೇಶಗಳ ನಡುವಿನ ಸಂಸ್ಕೃತಿಯ ಚಿತ್ರಣವನ್ನು ಯಥಾವತ್ತಾಗಿ ಚಿತ್ರಿಸಿಕೊಟ್ಟಿದೆ. ಈ ಕಥೆಯು ವೈದೇಹಿಯವರ ಸಾಹಿತ್ಯದಲ್ಲಿ ಮೂಡಿ ಬಂದಿರುವ ಗ್ರಾಮೀಣ ಬದುಕು ಮತ್ತು ಸಂಸ್ಕೃತಿಯ ಚಿತ್ರಣಕ್ಕೆ ಒಂದು ಬಹುಮುಖ್ಯ ಕೊಡುಗೆಯೆನಿಸಿದೆ.

ಇದೇ ಗುಂಪಿಗೆ ಸೇರುವ ವೈದೇಹಿಯವರ ಮತ್ತೊಂದು ಕಥೆ ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ ಇದು ಮದುವೆಯೊಂದರ ಸಡಗರ, ಸಂಭ್ರಮದ ಚಿತ್ರದೊಳಗಿನಿಂದ ಹಲವು ಪೀಳಿಗೆಗಳ ಹಲವು ಮನೋಧರ್ಮಗಳ ಹೆಣ್ಣುಮಕ್ಕಳ ಒಳಲೋಕವನ್ನು ಅನಾವರಣ ಮಾಡುತ್ತದೆ. ಜರಿ ಸೀರೆಗಳನ್ನು, ಆಭರಣಗಳನ್ನು ಉಡುವ-ತೊಡುವ ಸಡಗರ, ದೊಡ್ಡಗಂಟಲಿನಲ್ಲಿ ಯೋಗಕ್ಷೇಮ ವಿಚಾರಿಸುವ ಅಜ್ಜಿಯರ ಸಾಂಪ್ರದಾಯಿಕ ಮಾತುಕತೆ, ಹೊಸ ಪೀಳಿಗೆಯವರ ವೇಷ ವರ್ತನೆಗಳಿಗೆ ಮೂಗು ಮುರಿಯುವ ಹಳಬರು ಒಂದು ಮದುವೆಯ ಸಂದರ್ಭದಲ್ಲೇ ಎಷ್ಟೋ ಹೊಸ ಮದುವೆಗಳ ಒಪ್ಪಂದಗಳಾಗುವುದು, ಅಪ್ಪ-ಅಮ್ಮಂದಿರು ಹೆಣ್ಣು ಮಕ್ಕಳ ಮದುವೆಗೆ ತವಕಿಸಿದರೂ ಅವರ ಒಪ್ಪಿಗೆ ಕೇಳುವ ಪುರುಸೊತ್ತು ಮತ್ತು ಅವಶ್ಯಕತೆಗಳು ಇಲ್ಲವಾಗಿರುವುದು, ಹೇಳಿದ್ದನ್ನು ವಿಧೇಯವಾಗಿ ಒಪ್ಪುವ ಹೆಣ್ಣುಗಳನ್ನು ಮಾತ್ರ ಮೆಚ್ಚುವ ಹಿರಿಯರು, ಹೊಸ ವಿಚಾರಗಳಿದ್ದರೂ ಗಟ್ಟಿಯಾಗಿ ಹೇಳಲಾರದೆ ತಳಮಳಿಸುವ ಯುವತಿಯರು ಮುಂತಾಗಿ ಒಂದು ವಿಶಾಲ ಸಮಾಜವನ್ನೇ ಈ ಕಥೆ ತೆರೆದಿಡುತ್ತದೆ.

ಮಂಗಳೂರು ಪ್ರಾಂತ್ಯದ ಮದುವೆಯ ಸಂಭ್ರಮ, ಸಡಗರಗಳು ಮದುವೆಗಳಲ್ಲಿ ನಡೆಯುವ ಚರ್ಚೆಗಳು, ವೈಮನಸ್ಸುಗಳು, ತಮ್ಮ ಸೀರೆ, ಒಡವೆಗಳ ಪ್ರದರ್ಶನ ಮತ್ತು ಸೀರೆ, ಒಡವೆಗಳ ಆಧಾರದಿಂದಲೇ ಸಿಗುವ ಮರ್ಯಾದೆ, ಗೌರವ ಮುಂತಾದವುಗಳನ್ನು 'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ' ಕಥೆ ವಿವರವಾಗಿ ತೆರೆದಿಡುತ್ತದೆ. ಇದೇ ಮದುವೆಯಲ್ಲಿಯೇ ಮದುವೆ, ಪ್ರೀತಿಯನ್ನು ಕುರಿತು ಆಧುನಿಕವಾಗಿ ಮಾತಾಡಿದ ಹುಡುಗಿಯೊಬ್ಬಳು ಹಿರಿಯರ ಕೆಂಗಣ್ಣಿಗೆ ಗುರಿಯಾಗುವುದು ಇವೆಲ್ಲವೂ ಒಂದು ಸಂಸ್ಕೃತಿಯ ಅನಾವರಣವನ್ನು ಮಾಡುತ್ತವೆ.

ಈ ಅಂಶಗಳನ್ನು ಕಥೆಯ ಸಾಲುಗಳಲ್ಲೇ ವ್ಯಕ್ತಪಡಿಸುವುದಾದರೆ 'ನನ್ನ ಕಾಲದಲ್ಲಿ ಹೀಗಿತ್ತೇ? ನಾಲ್ಕು ದಿನದ ಮದುವೆ, ಈಗಿನದೆಲ್ಲ ಎಂತದು. ಬರೀ ನಾಟಕದ ಹಾಗೆ. ಕಲ್ಯಾಣ ಮಂಟಪದ ಹೆಣ್ಣಿನ ಕಡೆಯವರ ಬಿಡಾರದಲ್ಲಿ ಕಾಲು ನೀಡಿ ಕುಳಿತು ಹೇಳಿದಳು ನಾಗತ್ತೆ. ಆ ಕೋಣೆಯಿಡೀ ದಿಬ್ಬಣ ಎದುರುಗೊಳ್ಳಲು ಸಜ್ಜಾಗುವುವರಿಂದ ತುಂಬಿದೆ. ಕೋಣೆಗೆ ಒಂದು ನಿಮಿಷವೂ ಬಿಡುವಿಲ್ಲ. ನಾಚಿಕೆಯ ಬೇಲಿಯೇ ಇಲ್ಲದೆ ಎಲ್ಲರೂ ಎಲ್ಲರ ಸಮ್ಮುಖದಲ್ಲಿಯೂ ನಿಂತ ಜಾಗದಲ್ಲಿಯೇ ಸೀರೆ ಬಿಚ್ಚಿ ಉಡುವ ಕಾರ್ಯದಲ್ಲಿ ಮಗ್ನರಾಗಿದ್ದರೂ ಯಾರೂ ಯಾರನ್ನೂ ಗಮನಿಸುತ್ತಿಲ್ಲ. ಪಿಠಾರಿ ಪೆಟ್ಟಿಗೆ ಕಾಯುವ ಅಜ್ಜ ಮಾತ್ರವಲ್ಲದೆ ಮದುವೆ ಮನೆಗೆ ಸಂಬಂಧಪಟ್ಟ ಗಂಡಸರೂ ಅಲ್ಲಿಗೆ ಬರುತ್ತ ಹೋಗುತ್ತ ಇದ್ದಾರೆ. ಆದರೆ ಈಗ ನಾಚಿ ಸೀರೆ ಬದಲಿಸದೆ ಇರುವ ಸಮಯವೂ ಅಲ್ಲ. ಹಾಗೆಲ್ಲಾದರೂ ಹದಿಹರೆಯದ ಹುಡುಗಿಯರು 'ಇಲ್ಲಿ ಹೇಗಪ್ಪ ಉಡುವುದು? ಎಂದು ಚಿಂತಿತರಾದರೆ ಹಿರಿಯರಾದವರು. 'ಹೇಗೆ ಇರುವವರೆಲ್ಲ ಹೆಂಗಸರೇ, ಅಷ್ಟು ನಾಚತ್ತೆಂತದು ? ಕಣ್ಣು ಮುಚ್ಚಿ ತೆರೆಯುವುದರೊಳಗೆ ಸೀರೆ ಬದಲಾಯಿಸಿ ಬಿಡಬಹುದು'ಎಂದರು. 'ಈ ಅಜ್ಜಯ್ಯನನ್ನಾದರೂ ಹೊರಗೆ ಕಳಿಸಿ' ಎಂದುಕೊಂಡು ಎಳದನಿ. 'ಅಜ್ಜಯ್ಯನೇ ! ಪಾಪ ! ಅವರು ಆ ಗೋಚರದವರೇ ಅಲ್ಲ' ಎನ್ನುತ್ತಾರೆ.

ಹೀಗೆ ಮದುವೆಯ ಸಡಗರ ಸಂಭ್ರಮದಲ್ಲಿ ಹೆಣ್ಣುಗಳು ನಾಚಿಕೆಯನ್ನೂ ಮರೆತಂತೆ ತೋರುತ್ತದೆ. ಈ ಮದುವೆಯಲ್ಲಿ ವಿಧವೆಯರದೇ ಒಂದು ಗುಂಪಿದೆ. ಹಣೆಗೆ ಬೊಟ್ಟಿಲ್ಲದ, ಕರಿಮಣಿಯಿಲ್ಲದ, ಬೋಳುತಲೆಯ ಮೇಲೆ ಹಾಸಿದ ಕೆಂಪು ಸೆರಗಿನ, ಯಾವ ಉಪಚಾರವಿಲ್ಲದೆ ಸುಕ್ಕುಗಟ್ಟಿ ನಿವೃತ್ತರಾದ, ಮಂಟಪಕ್ಕೆ ಇನ್ನು

ಆಜೀವ ಪರ್ಯಂತ ರಂಗೋಲಿ ಬರೆಯಬಾರದು. ಮಂಟಪದ ಬಳಿಸುಳಿಯಲೂ ಕೂಡದ ಗಂಡಸರ ಕಣ್ಣಿಗೆ ಬೀಳದ ಜಾಗದಲ್ಲಿ ಕುಳಿತು ಮದುವೆ ಕಾಣಬೇಕಾದ ಮುತ್ತತ್ತೆ, ಕಾಟಜ್ಜಿ, ಹೆಬ್ಬಾಗಿಲಜ್ಜಿ, ಸರಸಜ್ಜಿ ಮುಂತಾದವರು ಕುಳಿತಿದ್ದಾರೆ. ಕುಳಿತಲ್ಲೇ ಆನೆಯಾಡುತ್ತಾ ಬೇಕೆಂದಾಗ ಒನಪು, ವೈನ, ಆಚಾರ, ಕ್ರಮ, ರೀತಿ ನೀತಿ ಹೇಳುತ್ತಾ ವಾಗತ್ತೆ ಹೇಳಿದ್ದಕ್ಕೆ ಹೂಂಗುಡುತ್ತಾ ತಮ್ಮದೇ ಒಂದು ಮಾತಿನ ಭಾರ ಸೇರಿಸುತ್ತಾರೆ.

ಈ ಮೇಲಿನ ಸಾಲುಗಳಲ್ಲಿ ಮಂಗಳೂರು ಕುಂದಾಪುರ ಪ್ರದೇಶಗಳ ಹವ್ಯಕರ ಸಂಭ್ರಮಗಳಲ್ಲಿ ವಿಧವೆಯರ ನಿಷೇಧವನ್ನು ತಿಳಿಸಿಕೊಡುತ್ತದೆ. ಆದರೂ ಈ ವಿಧವೆ ಅಜ್ಜಿಯವರು ಪ್ರತಿಯೊಂದು ವಿಷಯದಲ್ಲೂ ಮೂಗು ತೂರಿಸುತ್ತಿರುತ್ತಾರೆ. ಇದಕ್ಕೆ ಉತ್ತಮ ಉದಾಹರಣೆಯಾದ ವ್ಯಕ್ತಿ ನಾಗತ್ತೆ. ಇವಳು ಆದರಿಸುವ ಉಪಚರಿಸುವ ಕ್ರಮವೆಲ್ಲವೂ ಬರೀ ಮೇಲ್ನೋಟದ್ದು ಎನಿಸುತ್ತದೆ.

ಸಂಸ್ಕೃತಿಯೊಂದರ ಸ್ಥಿತ್ಯಂತರಕ್ಕೆ ಇಲ್ಲಿನ ಹಿರಿಯ ತಲೆಮಾರಿನವರು ಪ್ರತಿರೋಧವನ್ನು ವ್ಯಕ್ತಪಡಿಸುವುದು ಕಂಡುಬರುತ್ತದೆ. ಹೇಗೆಂದರೆ ರಾಮರಾಯರ ಮಗಳು ತೋಳಿಲ್ಲದ ರವಿಕೆಯನ್ನು ತೊಟ್ಟು ಬಂದದ್ದು ಹೆಬ್ಬಾಗಿಲಜ್ಜಿಗೆ ನರಕ್ ನರಕ್ ಎನಿಸಿದೆ. ಅವಳ ಸಂಬಂಧಿ ಮುತ್ತಜ್ಜಿಗಂತೂ ಹಸಿ ಕೆಸರು ಮೆಟ್ಟಿದ ಹಾಗಾಗಿದೆ - ಎಂಬುದು ಅಲ್ಲಿನವರಿಗೆಲ್ಲ ತಿಳಿದೂ ಆಗಿದೆ. ಆದರೆ ಇವರದೆಲ್ಲ ಕ್ಯಾರೇ ಇಲ್ಲವೆಂಬಂತಿರುವ ಅವಳನ್ನು ಇತರ ಹುಡುಗಿಯರು ಮತ್ತೆ ಮತ್ತೆ ನೋಡುತ್ತಿದ್ದಾರೆ. ಮತ್ತೆ ಯಾರೋ ಒಬ್ಬಳು - ಕೋಡಂಗಿ ಎಂದು ಬಿರುದನ್ನು ಅವಳಿಗೇ ತಿಳಿಯದೇ ಪಡೆದಿದ್ದಾಳೆ. ಪ್ರತಿಯೊಬ್ಬರೂ ಕನ್ನಡಿಯ ಮುಂದೆ ಮೈಮರೆತ ರೀತಿ ಹಳೆಯದರ ನೆನಪನ್ನು ಹಳೆಯವರಿಗೆ ಕೆದಕಿ ಕೊಡುವಂತಿದೆ. ತಮ್ಮ ಕಾಲದ ಮದುವೆಯ ಅಪ್ಪಟ ಪರಿಮಳವನ್ನು ಎಳೆದು ತರುವಂತಿದೆ. ಅವರೆಲ್ಲರೂ ಸಾಮೂಹಿಕ ನಿರ್ಧಾರಕ್ಕೆ ಬಂದಿದ್ದಾರೆ ? 'ಇನ್ನು ಬದುಕಿದರೆ ಕಷ್ಟವೇ' ಮತ್ತು 'ಈಗಿನ 'ಅಬ್ಬೆಯಂದಿರಿಗೆ ಬುದ್ಧಿ ಇಲ್ಲ. ಜುಟ್ಟು ಬಗ್ಗಿಸಿ ಬುದ್ಧಿ ಕಲಿಸುವುದು. ...ಬಿಟ್ಟು.....'

ಆಧುನಿಕತೆಯ ವಿರೋಧವು ಹಿರಿಯ ತಲೆಮಾರಿನಿಂದ ಹೇಗೆ ಆಗುತ್ತಿದೆ ಎಂಬುದು ಈ ಸಾಲುಗಳಲ್ಲಿ ತಿಳಿಯುತ್ತದೆ. ಅತ್ತೆಯಂದಿರ ಕಾಲಿಗೆ ಬಿದ್ದು

ನಮಸ್ಕರಿಸುವವರು ಮಾತ್ರ ಶ್ರೇಷ್ಠರು ಮತ್ತು ಅಂಥವರಿಗೆ ಮಾತ್ರ 'ಒಂದು ಒಳ್ಳೆಯ ಗಂಡ ಸಿಗಲಿ' ಎಂದೂ ಗಂಡು ಮಕ್ಕಳಿಗಾದರೆ ಆಫೀಸರನಾಗು ಎಂದು ಗಂಡು ಮಕ್ಕಳಿಗೂ ಅಭ್ಯಾಸ ಬಲದಿಂದ ಆಶೀರ್ವದಿಸುತ್ತಾಳೆ ವಾಗತ್ತೆ. ಸೀರೆಗಳ ಬಗ್ಗೆಯೂ ಚರ್ಚೆ ನಡೆಯುತ್ತವೆ. ಅಂತಸ್ಥಿಗೆ ತಕ್ಕಂತೆ ಸೀರೆಗಳನ್ನು ತಂದಿದ್ದರಿಂದ ಕೆಲವರು ಮದುವೆಯಿಂದ ಮುನಿಸಿಕೊಂಡು ಹೊರಟೂ ಹೋಗುತ್ತಾರೆ.

ಕಥೆಯಲ್ಲಿನ ಚರ್ಚೆಯಂತೆಯೇ ಬಳಸಿಕೊಳ್ಳುವುದಾದರೆ 'ಓಹೋ! ಈ ಸಲವೂ ಕೊಟ್ಟನೋ ! ಬೇಡವೆಂದರೆ ಕೇಳುವ ಅಸಾಮಿಯೇ ಅಲ್ಲವಲ್ಲ ಅವ ! ಧರ್ಮರಾಯ! ಎಂದು ಹೆಬ್ಬಾಗಿಲಜ್ಜಿ ಗಟ್ಟಿಯಾಗಿಯೇ ಹೇಳಿದ್ದನ್ನು ಸಂತೋಷದಿಂದಲೇ ಕೇಳಿಸಿಕೊಂಡರು ವಾಗತ್ತೆ. ಮೊಮ್ಮಗಳು ಅವರುಡುವ ಬಣ್ಣದಲ್ಲೇ ಎಷ್ಟು ಊಂಚಿನ ಸೀರೆ ಸಾಧ್ಯವೋ ಅಂತಹವನ್ನು ಕೊಟ್ಟು ನಮಸ್ಕರಿಸಿದ್ದಾಳೆ. ಈಗ ಅಲ್ಲಲ್ಲಿ ಸಣ್ಣ ಸಣ್ಣ ಗುಂಪುಗಳಾಗಿದೆ. ಕಂಡಂತೆ ಕಾಣದಂತೆ ಅವರವರಿಗೆ ಸಿಕ್ಕಿರುವ ಸೀರೆಯ ಬಣ್ಣ ಅಂಚು ಸೆರಗುಗಳ ವಿಮರ್ಶೆ ನಡೆಯುತ್ತಿದೆ. ಮತ್ತೊಬ್ಬಾಕೆಗೆ ಕೊಟ್ಟಂತಹ ಸೀರೆಯ ಅಂಚು ಸೆರಗು ಇರುವಂತಹುದನ್ನು ತನಗೂ ಕೊಡಬಹುದಿತ್ತು ಎಂದು ಒಬ್ಬಳಿಗೆ ಅನಿಸಿದರೆ ಈ ಸೆಗಣಿ ಬಣ್ಣದ್ದನ್ನು ಉಡುತ್ತಾರೆ ಯಾರು ? ನನ್ನ ಮಗಳೂ ಉಡಲಾರಳು. ಇದರಲ್ಲೇ ತುಸು ಕಡು ಬಣ್ಣವಿದ್ದಿದ್ದರೂ ಅಡ್ಡಿಲ್ಲವಿತ್ತು. ಇನ್ನಿದನ್ನು ಹಾಗೆಯೇ ಇಟ್ಟು ಮನೆಗೆ ಯಾರಾದರೂ ಅಪರೂಪಕ್ಕೆ ಬಂದರೆ ಕೊಡುವುದೇ ಸೈ - ಎಂಬ ಧೋರಣೆಯ ಮಾತಾಡಿ ಅಸಡ್ಡೆಯಿಂದ ಕೈಯಲ್ಲಿರುವ ಪ್ಯಾಕೆಟನ್ನು ಗೋಡೆ ನೋಡುತ್ತ ಚೀಲದೊಳಗೆ ತುರುಕಿಸಿಕೊಂಡಳು ಮತ್ತೊಬ್ಬಳು. ತೆಗೆದುಕೊಂಡ ಲೆಕ್ಕವಾಯಿತು. ಅಷ್ಟೇ. ಇವೆಲ್ಲ ಬಡ್ಡಿಯಿಲ್ಲದ ಸಾಲವಲ್ಲವೇ! ಎಂದು ಪಕ್ಕದವಳ ಕಿವಿಯಲ್ಲಿ ಪಿಸುಗುಟ್ಟಿದಳು ಇನ್ನೊಬ್ಬಳು. ಎಲ್ಲರಿಗೂ ಕಣ್ಣಿಗೆ ಹೋದ ವಿಷಯವೆಂದರೆ ವಾಗತ್ತೆಗೆ ಬಾದಾರಾಯಣ ಸಂಬಂಧಿಯಾದ ಎಂದ ಮೇಲೆ ಹುಡುಗಿಯ ತಂದೆಗೆ ಇನ್ನಷ್ಟು ದೂರದ ಸಂಬಂಧಿಯಾದ ಸುಬ್ಬಕ್ಕನಿಗೆ ಭರ್ಜರಿ ರೇಷ್ಮೆ ಸೀರೆಕೊಟ್ಟದ್ದು ಹಾಗೂ ಅಲ್ಲಿ ನೆರೆದವರಲ್ಲೆಲ್ಲ ಹುಡುಗಿಯ ತಂದೆಗೆ ಅತಿ ಹತ್ತಿರದ ಸಂಬಂಧಿಯಾದ ಕಾಟಜ್ಜಿ ಅವರು ಮೂವರಿಗೂ ಕಾಣಿಸದೇ ಹೋದದ್ದು ! ಕಾಟಜ್ಜಿಗೆ ಸೀರೆ ಕೊಡದುದಕ್ಕೆ ಹಲವು ಬಗೆಯ ವ್ಯಾಖ್ಯಾನಗಳಾದವು. ಕಾಟಜ್ಜಿ ತನಗೆ ಸೀರೆ ಕೊಡದಿದ್ದುದಕ್ಕೆ ಕೇಳಿಲ್ಲವೇ ಗಾದೆ? ಸರಿಸರಿ ಇದ್ದರೆ ಪರಿಪರಿ ನೆಂಟರು'- ಎಂದು ನೊಂದು ನುಡಿದಳು.

ಒಂದು ಮದುವೆಯಲ್ಲಿ ಎದುರಾಗುವ ವೈಮನಸ್ಸುಗಳನ್ನು ಈ ಮೇಲಿನ ಸಾಲುಗಳು ಹೇಳುತ್ತವೆ. ಈ ಮದುವೆ ಸಮಾರಂಭದಲ್ಲೇ ವಾಸುದೇವನ ಮೊಮ್ಮಗಳು ವಾರಿಜಳಿಗೆ ಭೀಮರಾಯರ ಮಗನೊಂದಿಗೆ ಮದುವೆ ನಿಶ್ಚಯವಾಗುತ್ತಿದೆ. ಹೀಗೆ ಒಂದು ಮದುವೆಯಲ್ಲಿ ಹಲವು ಸಂತೋಷಗಳಿಗೆ, ದುಃಖಗಳಿಗೆ, ವೈಮನಸ್ಯಗಳಿಗೆ ಎಡೆ ಮಾಡಿಕೊಡುತ್ತದೆ ಎಂಬುದನ್ನು ತಿಳಿಸಿ ಕೊಡುತ್ತದೆ. ಮದುವೆ ಇಡೀ ಹವ್ಯಕ ಸಮುದಾಯ।ವನ್ನು ಅನಾವರಣ ಮಾಡುತ್ತಿದೆ.

ಇದೊಂದು ಸಾಂಸ್ಕೃತಿಕ ಅಂಶಗಳನ್ನು ಹೇರಳವಾಗಿ ತನ್ನಲ್ಲಿ ಅಡಗಿಸಿಕೊಂಡಿರುವ ಕಥೆಯಾಗಿದೆ. ಇದೇ ರೀತಿ ಹವ್ಯಕ ಸಮುದಾಯದ ಮದುವೆ ಚಿತ್ರಣವನ್ನು ನಮಗೆ ತೋರಿಸಿಕೊಡುವ ಕಥೆ ಮದುವೆ ಹೆಣ್ಣು ಸೀರೆ. ಈ ಕಥೆಯಲ್ಲಿಯೂ ಕೂಡ ಮದುವೆಯಲ್ಲಿ ಹೆಣ್ಣಿನ ಸೀರೆ, ಒಡವೆಗಳಿಗೆ ಎಷ್ಟು ಮಹತ್ವವಿದೆ ಎಂಬುದನ್ನೇ ತೋರಿಸಿಕೊಡುವ ಕಥೆಯಾಗಿದೆ. ಸ್ವಂತ ಅಣ್ಣಂದಿರನ್ನು ಕಾಣದ ಸುಮ, ಅವಳ ದೊಡ್ಡಪ್ಪನ ಮಗ ರಾಮಣ್ಣನನ್ನು ಅಣ್ಣನಿಗಿಂತಲೂ ಹೆಚ್ಚಾಗಿ ಭಾವಿಸುತ್ತಾಳೆ. ಇಂತಹ ರಾಮಣ್ಣನ ಮದುವೆಗೆ ಹಾಕಿಕೊಂಡು ಹೋಗಲು ಒಂದು ಒಳ್ಳೆಯ ಸೀರೆ ಇಲ್ಲವಲ್ಲ ಎಂದು ಸುಮ ಚಡಪಡಿಸುತ್ತಾಳೆ. ಆದರೆ ಅಣ್ಣನ ಮೇಲಿನ ಪ್ರೀತಿಯ ಕಾರಣವಾಗಿ ಇರುವ ಸೀರೆಯನ್ನು ಹಾಕಿಕೊಂಡು ಹೋಗುತ್ತಾಳೆ. ಆದರೆ ಮದುವೆ ಮನೆಯಲ್ಲಿ ನಿಜ ಪ್ರೀತಿಗೆ ವ್ಯಕ್ತಿತ್ವಕ್ಕೆ ಬೆಲೆ ಕೊಡುವವರಿಲ್ಲದೇ ಬರಿಯ ಒಡವೆ ವಸ್ತ್ರಗಳಿಗೆ ಬೆಲೆ ಕೊಡುವವರೇ ತುಂಬಿರುತ್ತಾರೆ. ಅಂತಲ್ಲಿಗೇ ಹೋಗದೇ ಇದ್ದಿದ್ದರೆ ಲೇಸಾಗುತ್ತಿತ್ತು ಎಂದು ಸುಮ ಕೊರಗುವಂತಾಗುತ್ತದೆ.

ಸುಮಳ ಮನಃಸ್ಥಿತಿಯನ್ನು ಗ್ರಹಿಸುವುದಾದರೆ ಯಾರು ಮೌನವಾಗಿದ್ದರೂ ಖಂಡಿತ ದೊಡ್ಡಮ್ಮ ಮಾತ್ರ ಕರೆದೇ ಕರೆಯುತ್ತಾಳೆ. ಸೀರೆ ಮುಟ್ಟಿ ನೋಡಿ ಕೇಳಿಯೇ ಕೊಳ್ಳುತ್ತಾಳೆ. 'ಎಲ್ಲಿ ಕೊಂಡೆ ? ಇನ್ನೊಂದು ಇಂಥಹದೆ ಸೀರೆಯನ್ನು ಕಳಿಸಿಕೊಡು-ದುಡ್ಡು ಕೊಡುತ್ತೇನೆ' ಎನ್ನುತ್ತಾರೆ. ಮೊದಲೇ ಸೀರೆ ಚೆನ್ನವೆಂದರೆ ಆಕೆಗೆ ಬಲು ಪ್ರೀತಿ. ದೊಡ್ಡಮ್ಮನ ಗುಣ ಆಕೆಗೆ ಗೊತ್ತಿತ್ತು. ಸೊಗಸಾದ ಸೀರೆಗಳ ರಾಶಿಯೊ ಅವಳೊಡನೆ ಇತ್ತು. ಆದರೂ ಇನ್ನೊಬ್ಬರ ಸೀರೆಯತ್ತ ಅವಳು ದೃಷ್ಟಿಹರಿಸದೇ ಇರಲಿಲ್ಲ.

ಚೆನ್ನಾಗಿದ್ದರೆ ಅಂತಹ ಸೀರೆ ಒಂದು ವಾರದೊಳಗೆ ಅವಳ ಬೀರುವಿನ ಕತ್ತಲುಕೋಣೆ ಸೇರಲು ಧಾವಿಸುತ್ತಿತ್ತು.

ಅವಳೊಡನೆ ಇದ್ದಷ್ಟು ತರಹವಾರಿ ಪದಕ, ಸರ, ಕಂಠಹಾರಗಳು, ತನಗೆ ಬುದ್ಧಿ ಬಂದಂದಿನಿಂದ ಬೇರೆ ಯಾರ ಬಳಿಯೂ ನೋಡಿರಲಿಲ್ಲ. ಮನೆಗೆ ನೆಂಟರು ಬಂದಾಗ ಅವರು ಕೊಟ್ಟ ಆಭರಣದ ಮೇಲೆಲ್ಲ ಕಣ್ಣೋಡಿಸಿ ಸೊಗಸಾಗಿ ಕಂಡು ಬಂದವರನ್ನು ಹತ್ತಿರ ಬಂದು ಕೈಯಲ್ಲಿ ಎತ್ತಿ ಹಿಡಿದು ಸರಿಯಾಗಿ ನೋಡಿ ಅದರ ಕತೆಯನ್ನೆಲ್ಲ ಕೇಳದಿದ್ದರೆ ಅದು ದೊಡ್ಡಮ್ಮನಲ್ಲ.

ಹೀಗೆ ಸಾಗುತ್ತದೆ ಸುಮಳ ಮನೋಲಹರಿ. ಈ ಕಥೆ ಬ್ರಾಹ್ಮಣ ಮದುವೆಯಲ್ಲಿ ಸೀರೆಗೆ, ಒಡವೆಗೆ ಕೊಡುವ ಪ್ರಾಮುಖ್ಯತೆ ಎಷ್ಟೆಂದು ತಿಳಿಸಿಕೊಡುತ್ತದೆ.

ಅಧ್ಯಾಯ-೭

ವೈದೇಹಿಯವರ ಬರಹದ ಭಾಷೆ ಹಾಗೂ ಪ್ರಾದೇಶಿಕತೆ

ವೈದೇಹಿಯವರ ಕಥೆಗಳಲ್ಲಿ ಕುಂದಾಪುರ, ಮಂಗಳೂರು, ಉಡುಪಿ ಪರಿಸರದ ಮಧ್ಯಮ ಹಾಗೂ ಕೆಳವರ್ಗಗಳ ಭಾಷೆ ಬಳಕೆಗೊಂಡಿದೆ. ಆ ಸ್ಥಳಗಳ ಗ್ರಾಮೀಣ ಪರಿಸರದ ಸಂಸ್ಕೃತಿ ಚಿತ್ರಣಗಳನ್ನು ನೀಡಲು ಈ ಭಾಷೆ ಒಂದು ಸಹಜತೆಯ ಮಾಧ್ಯಮವಾಗಿದೆ. ವೈದೇಹಿಯವರು ಆ ಪರಿಸರದ ಸಂಸ್ಕೃತಿಯನ್ನು, ಒಟ್ಟಾರೆ ಜೀವನ ವಿಧಾನವನ್ನು ಹೇಳಲು ಅಲ್ಲಿನದೇ ಭಾಷೆಯನ್ನು ಬಳಸಿಕೊಂಡಿರುವುದರಿಂದ ಅವರ ಕಥೆಗಳು ಹೆಚ್ಚು ಸತ್ವಯುತವಾಗಿ, ಜೀವಂತವಾಗಿ ಕಂಡುಬರುತ್ತವೆ. ಕಥನ ಸಾಹಿತ್ಯದಲ್ಲಿ ಪ್ರಾದೇಶಿಕ ಸೊಗಡನ್ನು ಮೇಳವಿಸಿದ ಪ್ರಥಮ ಲೇಖಕಿಯಾಗಿಯೂ ವೈದೇಹಿ ಗಮನ ಸೆಳೆಯುತ್ತಾರೆ. ಅದುವರೆಗೆ ಪ್ರಥಮ ಲೇಖಕಿಯಾಗಿಯೂ ವೈದೇಹಿ ಗಮನ ಸೆಳೆಯುತ್ತಾರೆ. ಅದುವರೆಗೆ ಬೇರೆ ಯಾವ ಲೇಖಕಿಯೂ ಪ್ರಾದೇಶಿಕತೆಯನ್ನು ಇಷ್ಟು ಸಮರ್ಥವಾಗಿ ದುಡಿಸಿಕೊಂಡಿರಲಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಆಡುಭಾಷೆಯ ಧಾಟಿ ಇವರಕಥೆಗಳಿಗೆ ವಿಶಿಷ್ಟ ಪ್ರಾದೇಶಿಕತೆಯ ಮೆರುಗು ನೀಡುತ್ತದೆ.

ಇಲ್ಲಿ ಬಳಕೆಯಾಗಿರುವುದು ಕುಂದಾಪುರದ ಕನ್ನಡ. ಈ ಆಡುಭಾಷೆಯಲ್ಲಿ ಸಹಜವಾಗಿಯೇ ಹಾಸ್ಯ, ವ್ಯಂಗ್ಯ, ಬೈಗುಳ, ಅಶ್ಲೀಲತೆ ವಿಶಿಷ್ಟವಾದ ಬೇಧವಿಲ್ಲದಂತೆ ಬೆರೆತು ಹೋಗಿರುತ್ತದೆ. ಅಲ್ಲದೇ ವೈದೇಹಿಯವರ ಕಥೆಗಳಲ್ಲಿ ಬರುವ ಮೇಲ್ಜಾತಿಯ ಬ್ರಾಹ್ಮಣರು, ಕೃಷಿ ಕಾರ್ಮಿಕರು, ಕೂಲಿ ಹೆಣ್ಣುಗಳು, ಮನೆಗೆಲಸದ ಹೆಣ್ಣುಗಳಲ್ಲಿ ಬಳಕೆಯಾಗುವ ಆಡುಭಾಷೆ ಅವರ ಸಂಸ್ಕೃತಿಯು ಪ್ರತಿಬಿಂಬಿತವಾಗಿದೆ.

ಆದರೆ ವೈದೇಹಿಯವರು ಗೀತಾನಾಗಭೂಷಣ ಮತ್ತು ನಾಗವೇಣಿಯವರಂತೆ ಈ ಬದುಕಿನ ಸಾಂಸ್ಕೃತಿಕ ವಿವರಗಳನ್ನು ಪ್ರಜ್ಞಾಪೂರ್ವಕವಾಗಿ ದಾಖಲಿಸ ಹೊರಟವರಲ್ಲ. ಅವರ ಹೆಚ್ಚಿನ ಕಥೆಗಳ ವಸ್ತು ಈ ವರ್ಗಗಳಿಗೆ ಸಂಬಂಧಿಸಿರುವುದರಿಂದ ಅವರ ಸಾಂಸ್ಕೃತಿಕ ವಿವರಗಳು ಪ್ರಾಸಂಗಿಕವಾಗಿ ಇಲ್ಲಿ ದಾಖಲಾಗಿವೆ. ಈ ಬಗೆಯ ಪ್ರಾದೇಶಿಕತೆಯನ್ನು ಎತ್ತಿ ಸಾಗುವ ವೈದೇಹಿಯವರ ಪ್ರಮುಖ ಕಥೆಗಳಂದರೆ 'ಪುಟ್ಟಮ್ಮತ್ತೆ ಮತ್ತು ಮೊಮ್ಮಗಳು'', ಅಮ್ಮಜ್ಜಿಯೆಂಬ

ನೆನಪು, ಅಕ್ಕು, ಸಮಾಜ ಶಾಸ್ತ್ರಜ್ಞೆಯ ಟಿಪ್ಪಣಿಗೆ 'ಬಂದು ಹೋಗುವವರು' ಈ ಕಥೆಯಲ್ಲಿನ ಕೆಲಸದಾಳು ಮಂಜ ಮತ್ತು ಮನೆಯೊಡತಿ ಶಾಂತಮ್ಮನ ನಡುವೆ ಸಂಭಾಷಣೆಯನ್ನು ಹೀಗೆ ಗ್ರಹಿಸಬಹುದು. ಶಾಂತಮ್ಮನನ್ನು ಕಂಡವನೇ ರಸ್ತೆಯ ಆಚೆ ಬದಿಗಿದ್ದವನು ಈ ಬದಿಗೆ ಬಂದು 'ಏನಮ್ಮ, ಈ ಜಿರಾಪತಿ ಮಳೆಯಲ್ಲಿ ನಿಂತದ್ದು ಹಲಸಿನ ಕಾಯಿಯ, ತೆಂಗಿನಕಾಯಿಯ......'.

'ಗೊತ್ತಾಯಿತಲ್ಲ, ನಿಂಗೆ ? ಮಳೆ ಸ್ವಲ್ಪ ನಿಲ್ಲಲಿ ಮಾರಾಯ, ಆಮೇಲೆ ಹತ್ತು ಸಣ್ಣ ಹಿತ್ತಲಿನಲ್ಲಿರುವ ಬೊಕ್ಕೇ ಮರ'.

'ಮಳೆ ನಿಲ್ಲುತ್ತದೆ ಎಂತ ಕಾದರೆ ಆಗಲಿಕ್ಕಿಲ್ಲ ಅಮ್ಮ, ನೀವೆಂತದಕ್ಕೆ ಹೆದರುವುದು? ನಾ ತೆಗೆದುಕೊಟ್ಟರೆ ಸೈಯಲ್ಲ' - ಎಂದದ್ದು ಸರಿ. ಹತ್ತಲಿಲ್ಲ. ಗುರುಬು ತೆಗೆದು ಮೂಲೆಗಿಟ್ಟು ಜಗಲಿ ಏರಿದ. 'ಅಮ್ಮ' ಉಮೇದು ಇಲ್ಲ ಕಾಣಿ. ಆ ಸಣ್ಣಿಯನ್ನು ಮದುವೆ ಮಾಡಿಕೊಟ್ಟ ಲಾಗಾಯ್ತು ಹೀಗೆ. ಅದು ಒಂದು ದಿನ ಸುಖ ಕಂಡಿದ್ದರೆ ? ಈ ಸಾಲುಗಳಲ್ಲಿ ಒಡತಿಯ ಮಾತಿನ ದರ್ಪ ಲವಲೇಶವೂ ಇಲ್ಲ. ಆದರೆ ಕೆಲಸದಾಳು ಮಂಜನ ಧ್ವನಿಯಲ್ಲಿ ಮನೆಯೊಡತಿಯ ಬಗ್ಗೆ ಗೌರವ ಭಾವ ಇರುವುದು ಕಂಡುಬರುತ್ತದೆ.

ಈ ಪ್ರದೇಶದ ಭಾಷೆಯಲ್ಲಿ ಕಂಡುಬರುವ ಹಾಸ್ಯವನ್ನು 'ಒಂದು ಅಪರಾಧ ತನಿಖೆ' ಎಂಬ ಕಥೆಯಲ್ಲಿ ಕೆಲಸದ ಹೆಣ್ಣು ನಾಗಮ್ಮ ಕೋಪ ಬಂದು ಮುಚ್ಚಿ ಹಾಕಿಕೊಂಡು ಮಲಗಿದಾಗ, ನಾಗಮ್ಮ ಮೈಮೇಲೆ ಬಿದ್ದು ಹೊರಳಾಡಿದಾಗೆಲ್ಲ ಕೆಲಸದವರು ಮೋಜಿಗಿಂತ ಒಂದಲ್ಲ ಎಂಟು ಹತ್ತಾದರೂ ಕೊಡಪಾನ ನೀರು ಸುರಿದದ್ದುಂಟು. ಸಂತೆ ಸಾಮಾನು ತರುವ ಗೋವಿಂದ ಬೇಕೆಂದೇ ಎಲೆ ಅಡಿಕೆ ಹೊಗೆ ಸೊಪ್ಪು ತರದೆ ಅವರನ್ನು ರೇಗಿಸಿ ಕೂಗಿಸಿ ಭೂತ ಮೈಮೇಲೆ ಬರಿಸಿ ಅಮ್ಮ ಗದರುವವರೆಗೂ ನಕ್ಕಿದ್ದುಂಟು. ಅವರು ಕ್ಷೌರ ಮಾಡಿಕೊಂಡು ಸ್ನಾನಕ್ಕೆ ಬರುವಾಗ ಕೆಲಸದ ಕೊಲ್ಲು 'ಈಗ ಸಾಫಾಯಿತು. ನಾಗಮ್ಮನಿಗೆ ಇನ್ನೊಂದು ಮದುವೆ ಮಾಡಬಹುದು' - ಎಂತ ಅವರ ಬಾಯಿಗೆ ಕೋಲು ಹಾಕಿದ್ದುಂಟು. ಹೀಗೊಮ್ಮೆ

★ ಒಂದು ಅಪರಾಧ ತನಿಖೆ. ಪು.ಸಂ. 117.

ಹೇಳಿದಾಗ ಹುಚ್ಚಾಪಟ್ಟೆ ಮೈಮೇಲೆ ಬಂದಿತ್ತು. ಈ ಭಾಷೆಯಲ್ಲಿ ಹಾಸ್ಯವು ಹೇಗೆ ವ್ಯಕ್ತವಾಗಿದೆ ಎಂಬುದು ಈ ಮೇಲಿನ ಸಾಲುಗಳಲ್ಲಿ ವ್ಯಕ್ತವಾಗಿದೆ.

ವೈದೇಹಿಯವರ ಹಲವಾರು ಕಥೆಗಳಲ್ಲಿ ಸಿಟ್ಟು ಹಾಸುಹೊಕ್ಕಾಗಿ ಅಭಿವ್ಯಕ್ತಗೊಂಡಿದೆ. 'ಅಮ್ಮಚ್ಚಿಯೆಂಬ ನೆನಪು' ಕಥೆಯಲ್ಲಿ ವೆಂಕಪ್ಪಯ್ಯ ಅಮ್ಮಚ್ಚಿಗೆ ಬಡಿದಾಗ 'ಅಮ್ಮಚ್ಚೀ.....ರಕ್ತ ! ಹೆದರಿ ಹೆಪ್ಪಾದ ದನಿಯಲ್ಲಿ ಕೂಗಿಕೊಂಡರೆ ಅದು ಕೇಳೇ ಇಲ್ಲವೆಂಬಂತೆ ನಿಧಾನವಾಗಿ ಒಳಕೋಣೆಯತ್ತ ನಡೆಯುತ್ತಿದ್ದ ಅಮ್ಮಚ್ಚಿ ಸೀತತ್ತೆಯ ಕಡೆಗೆ ತಿರುಗಿ 'ನೀ ಸಾಯಿ. ನೀ ಯಾಕೆ ಇರ್ತ್‌ದ್ ? ನನ್ನ ಕೊಲ್ಲ್‌ಗಾ ? 'ಎನ್ನುತ್ತಾ ಬಾಗಿಲು ಹಾಕಿಕೊಂಡಳು.

ಇದೇ ರೀತಿಯ ಸಿಟ್ಟು ವೈದೇಹಿಯವರ ಇನ್ನೊಂದು ಕಥೆಯಲ್ಲೂ ವ್ಯಕ್ತಗೊಂಡಿದೆ. ಈ ವರ್ಷ ಅವಳನ್ನು ಹೊರಗೆ ಹಾಕಿದರೆ ಇವ ಬದುಕಿದ'-ಎಂದು ಚಿಕ್ಕಪ್ಪನಿಗೆ ಹೇಳುತ್ತ ಮೂಲೆಗೊರಗಿ ಕುಳಿತ ರಂಗಜ್ಜಿಯನ್ನು ಗುಂಡಿಟ್ಟು ಕೊಲ್ಲಬೇಕೆನಿಸುತ್ತದೆ ಎಂದು ಮನಸ್ಸಿನಲ್ಲಿಯೇ ಸಿಟ್ಟಾಗುತ್ತಾಳೆ. ಈ ಕಥಾ ನಾಯಕಿಯರೆ ಇದೇ ಕಥೆಯಲ್ಲಿ ಇಂಥದೇ ಸಂದರ್ಭ ಮತ್ತೊಮ್ಮೆ ಪುನರಾವರ್ತನೆಯಾಗುತ್ತದೆ. ''ರಂಗಜ್ಜೀ ಒಮ್ಮೆ ಸಾಯುತ್ತೀಯಾ ? ಜೀವನದಲ್ಲಿದ್ದು ನನ್ನನ್ನೇಕೆ ಕೊಲ್ಲುತ್ತೀ ? ನಿನಗೆ ಹೇಗೆ ಗೊತ್ತು ನಾನು ಯಾರೊಂದಿಗೂ ಜೀವನ ತೆಗೆಯುವವಳೆಂದು ? ನೀನು ಹೀಗೆ ಅಂದೆ ಎಂದು ಮನಸ್ಸಿನಲ್ಲಿಯೇ ಕೆಂಡ ಕಾರುತ್ತಾಳೆ.

ವೈದೇಹಿಯವರ ಕಥೆಗಳಲ್ಲಿ ಮೂಡಿ ಬಂದಿರುವ ಅಶ್ಲೀಲತೆಯನ್ನು ಚಿಪ್ಪು ಕಥೆಯ ಯಶೀಯ ಸ್ವಗತಗಳಲ್ಲಿ ಕಾಣಬಹುದು. ಮುಂಬಯಿಯ ಹುಡುಗನನ್ನು ಕುರಿತು ಈ ರೀತಿ ಆಲೋಚಿಸುತ್ತಾಳೆ....ಕೆನ್ನೆಯವರೆಗೆ ಇಳಿಬಿಟ್ಟಕೂದಲು, ಉದ್ದ ಮೀಸೆ, ಹುಲುಸಾಗಿ ಬೆಳೆದ ಕ್ರಾಪು, ಪ್ಯಾಂಟು, ಶರಟು-ಒರಟು, ಹಸಿದದ್ದೊ, ತಂಪಿನದೋ, ಶಾಂತವೋ, ಮತ್ತವೋ ಇನ್ನೇನೋ ತುಂಬಿದ ಕಣ್ಣುಗಳು....ಕೆಟ್ಟು ಹೋದವನೋ, ಕೆಡಲಿರುವವನೋ ಅಥವಾ ಜೀವನದ ಹಳೆಯ ತತ್ವಗಳಿಗೆ ಅಂಟಿಕೊಂಡು ಅವುಗಳನ್ನು ತೂಗಿ ನೋಡುವ ತೂಗಿ ಸಾಧಿಸುವ, ತೂಗಿ ತನ್ನದೇ ಆದ ಹೊಸ ತತ್ವಗಳನ್ನು ಸೃಷ್ಟಿಸುವ ವೀರ್ಯವನ್ನೇ ಕಳೆದು ಕುಳಿತಿರುವವನೋ !

★ ವೈದೇಹಿ, ಚಿಪ್ಪು.ಪು.ಸಂ. ೭೮.

ಹೆಂಡತಿಯನ್ನು ಆಳಬೇಕೆಂದಿರುವವನೊ ಆಳಲಾರದೆ ಆಳುವವನೋ ! ಅವಳನ್ನು ಅವಳ ಗೊಡವೆಗೆ ಬಿಡದಿರುವವನೋ, ಅಪ್ಪನಿಗೆ ಏನೂ ಕುತೂಹಲವಾಗುವುದಿಲ್ಲವೇ ಹಾಗಾದರೆ! ಎನ್ನುವ ಅವಳ ಸ್ವಗತಗಳಲ್ಲಿ ಅಶ್ಲೀಲತೆಯ ಎಳೆಯೊಂದು ಸೇರಿಕೊಂಡಿದೆ.

ವೈದೇಹಿಯವರ ತಮ್ಮ ಕಥೆಗಳಿಗೆ ಒಗ್ಗುವ ಭಾಷೆಯನ್ನು ಯಾವುದೇ ರೀತಿಯ ಎಗ್ಗಿಲ್ಲದೆ ಬಳಸಿರುವುದು ಕಂಡುಬರುತ್ತದೆ. ವೈದೇಹಿಯವರ 'ಅಕ್ಕು' ಕಥೆಯಲ್ಲಿ ಹಾಸ್ಯ ತುಸು ಹೆಚ್ಚಾಗಿಯೇ ಬಳಕೆಗೊಂಡಿದೆ. ಒಂದೇ ಒಂದು ಸಾಲಿನ ಮುಖಾಂತರ ಗ್ರಹಿಸುವುದಾದರೆ ಅಕ್ಕೂ, ನಿನ್ ಕೋಗಿಲೆ ಸ್ವರ ಕೇಂಬುಕೆ ಕಾಕಿ ಹಿಂಡೇ ಬಂದ್ ಕಂಡಿಯಾಗ್ ಕೂತಿತ್ತ್ ಕಾಣ್ ! ಎನ್ನದಿದ್ದರೆ ರಾತ್ರಿ ಅವರಿಗೆ ನಿದ್ದೆ ಬೀಳಲಿಕ್ಕಿಲ್ಲ ಎಂಬಸಾಲುಗಳಲ್ಲಿ ಅಭಿವ್ಯಕ್ತಗೊಂಡಿದೆ.

ವೈದೇಹಿಯವರ ಕಥೆಯಲ್ಲಿ ಅಭಿವ್ಯಕ್ತಗೊಂಡಿರುವ ಭಾಷೆಯ ಅಶ್ಲೀಲತೆಯ ಮತ್ತೊಂದು ಎಳೆಯನ್ನು ಅಕ್ಕು ಕಥೆಯಲ್ಲಿ ಕಾಣಬಹುದು. ಏ ತಮ್ಮಣ್ಣಯ್ಯ ಬಾಲ ಮಡ್ಚ್‌ಕಂಡ್ ಆಚೆಗೆ ಹೋಗ್, ನಿನ್ ಕೆಲ್ಸ ಕಾಣ್, ನನ್ ಸುದ್ದಿಗ್ ಬತ್ಯಾ ? ನಿನ್ ಹೆಂಡ್ತಿ ಮೊನ್ನೆ ಯಾರೊಟ್ಟಿಗೆ ಚಾಂಚ್ಕಂಡ್ ಮನ್ಕಂಡಿದ್ಲ್ ಅಂತೇಳಿ ಹೇಳುದಾ ಈಗ? ' ಎಂದು ದೊಡ್ಡಸ್ವರದಲ್ಲಿ ಕತ್ತಿ ಬೀಸಿದಂತೆ ಹೇಳುತ್ತಾಳೆ.

ವ್ಯಂಗ್ಯದ ಒಂದು ಎಳೆಯನ್ನು ವೈದೇಹಿಯವರ ಮತ್ತೊಂದು ಕಥೆ 'ಅಮ್ಮಚ್ಚಿಯ ನೆನಪು' ಎಂಬುದರಲ್ಲಿ ಕಾಣಬಹುದಾಗಿದೆ. ಸತ್ಯನಾರಾಯಣ ಪೂಜೆಗೆ ಹೊರಟ ಅಮ್ಮಚ್ಚಿಯನ್ನು ವೆಂಕಪ್ಪಯ್ಯ ದಾರಿಯಲ್ಲೇ ಎದುರುಗೊಂಡು 'ಏನಿಯ ? ಇದೇನಿಯ ? ಏಸ, ಬೊಂಬಾಯಿ ಲೇಡಿಯ ಹಂಗೆ, ವಾರೆ ಬಕ್ತಲೆ ! ಶಿ....ಶಿ.....ನಡಿ ಮನೆಗೆ. ಸರಿಯಾಯಿ ಬಾಚಿಂಡು ಹೋವು'ಎಂದು. ಅದಕ್ಕೆ ಅಮ್ಮಚ್ಚಿ 'ಹೋವುಯಾ ಹೋವು. ಹೋಯಿದ್ದ್ ಗಡದ್ದು ಒಂದು ಲೋಟ ಚಾಯ ಕುಡಿ. ಅಮ್ಮನ ಹಕ್ಕೈ ಹೇಳ್, ಹೆಂಗೂ ಮಾಡಿ ಕೊಡ್‌ತ್ಲ್...ನನ್ನ ಸುದ್ದಿಗೆ ಮಿನಿ ಬರಳೆ ಬೋಳುಮಂಡೆ ಕಾಕ. ನಿಂಗೆ ವಾರೆ ಬಿಡು, ಯಾವ ಬಕ್ತಲೆಯೂ ತೆಗೆಯಗಾಗದ ಸಂಕಟಕ್ಕೆ ನಂಗೆ ಯಾಕೆ ಹೇಳ್ತೆ ? ಎಂದವಳು ನನ್ನ ಕೈ ಹಿಡಿದು 'ಬಾಯಿ ಬೀಸ ನೀನು ಮೆಲ್ಲ ನಡೆದ್ರ

★ ಅಕ್ಕು ಪುಟ - ೧೫೨.

★ ಚಿಪ್ಪು ಪುಟ - ೭೮.

ಹಿಂಗೇ..ನಾಯಿ ಸಂತಾನಗಳೆಲ್ಲ ಎದುರಾತೋ 'ಎಂದು ಎಳೆದುಕೊಂಡು ಮುಂದೆ ನಡದೇಬಿಟ್ಟಳು. ಸುಟ್ಟದ್ ಎಲ್ಲಿ ತಯಾರಾಯ್ತೋ ನಮ್ಮ ಮನೆಗೆ.....ಅಂತೆಲ್ಲ ಗೊಣಗುತ್ತ.

ಹೀಗೆ ವೈದೇಹಿಯವರ ಕಥೆಗಳಲ್ಲಿ ಭಾಷೆ ಒಂದು ಮುಖ್ಯವಾದ ನೈಜ ಅಭಿವ್ಯಕ್ತಿ ಮಾಧ್ಯಮವಾಗಿ ಮೂಡಿಬಂದಿದೆ. ಇವರ ಸ್ಥ ಳೀಯ ಭಾಷೆಯ ಬಳಕೆಯಿಂದಾಗಿ ಆ ಪ್ರದೇಶದ ಸೊಗಡು ಒಪ್ಪವಾಗಿ ಕಂಡುಬಂದಿದೆ. ಅಲ್ಲದೇ ಭಾಷೆ ಆ ಪ್ರದೇಶದ ಸಂಸ್ಕೃತಿಯನ್ನು ಬಿಂಬಿಸುತ್ತದೆ.

★ ಅಮ್ಮಚ್ಚಿಯೆಂಬ ನೆನಪು. ಪು.ಸಂ.೫೭೬.

ಸಮಾರೋಪ

ವೈದೇಹಿಯವರ ಸಮಗ್ರ ಕಥೆಗಳಲ್ಲಿ ಕೆಲವು ಮುಖ್ಯ ಅಂಶಗಳನ್ನು ಶೋಧಿಸುವುದು ನನ್ನ ಈ ನಿಬಂಧದ ಉದ್ದೇಶವಾಗಿದೆ. ಸಮಯದ ಹೊಂದಾಣಿಕೆಯ ಅಭಾವವಿರುವುದರಿಂದ ಸಮಗ್ರ ಕಥೆಗಳಲ್ಲಿ ಕೆಲವನ್ನು ಮಾತ್ರ ಆಯ್ದುಕೊಂಡು ಈ ಪ್ರಬಂಧವನ್ನು ಸಿದ್ದಪಡಿಸಿದ್ದೇನೆ.

ಈ ನಿಬಂಧದಲ್ಲಿ ಕೆಲವು ಮುಖ್ಯ ಅಂಶಗಳ ಕಡೆಗೆ ಬೆಳಕನ್ನು ಚೆಲ್ಲುವುದರ ಮೂಲಕ ಶೋಧನೆಗೊಳಪಡಿಸುವುದು ನನ್ನ ಉದ್ದೇಶವಾಗಿದೆ. ಅವೆಂದರೆ ಇವರ ಕಥೆಗಳಲ್ಲಿ ಮೂಡಿ ಬಂದಿರುವ ಸಾಂಸ್ಕೃತಿಕ ಅಂಶಗಳನ್ನು ಗುರುತಿಸುವುದು. ನಂತರ ಇವರ ಎಲ್ಲಾ ಕಥೆಗಳಲ್ಲಿ ಮೂಡಿ ಬಂದಿರುವ ಹೆಣ್ಣಿನ ಅಂತರಂಗವನ್ನು ಕೆಲವು ಉಪ ಅಧ್ಯಾಯಗಳಾಗಿ ವಿಂಗಡಿಸಿಕೊಂಡು ವಿಶ್ಲೇಷಣೆಗೊಳಪಡಿಸಿದ್ದೇನೆ. ಉದಾ : ಕುಟುಂಬ ಮತ್ತು ಪಿತೃಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು. ಈ ಅಧ್ಯಾಯದಿಂದ ನಮಗೆ ತಿಳಿದುಬರುವ ಮುಖ್ಯ ಅಂಶವೆಂದರೆ ತಲೆಮಾರುಗಳ ನಡುವಿನ ಸಂಘರ್ಷ. ಉದಾ : ಚಿಪ್ಪು, ಸೌಗಂಧಿಯ ಸ್ವಗತಗಳು, ಅಂತರಂಗದ ಪುಟಗಳು, ಬೀಳು ಬೇರು, ಪುಟ್ಟಮ್ಮತ್ತೆ ಮತ್ತು ಮೊಮ್ಮಗಳು ಕಥೆಗಳಲ್ಲಿ ಬರುವ ಅಮ್ಮ-ಮಗಳು, ಅಜ್ಜಿ-ಮೊಮ್ಮಗಳು ಇವರ ನಡುವೆ ಅಂತರಂಗದ ಒಳಗೆ ಮತ್ತು ಹೊರಗೆ ಸಂಘರ್ಷ ಕಂಡುಬಂದರೂ ಈ ನಾಯಕಿಯರ ಭವಿಷ್ಯದಲ್ಲಿ ಯಾವುದೇ ರೀತಿಯ ಮಾರ್ಪಾಡುಗಳಾಗದೇ ಅಜ್ಜಿಯ ಅಥವಾ ಅಮ್ಮನ ಯಥಾ ಸ್ಥಿತಿಯೇ ಮುಂದುವರೆಯುವುದು ಕಂಡು ಬರುತ್ತದೆ.

ಇದೇ ಶೀರ್ಷಿಕೆಯಡಿಯಲ್ಲಿ ತಂದೆಯು ಒಪ್ಪಿದ ವರನನ್ನು ಯಾವುದೇ ಪ್ರತಿಭಟನೆಯಿಲ್ಲದೆ ಇಷ್ಟವಿಲ್ಲದಿದ್ದರೂ ಮೌನವಾಗಿ ಒಪ್ಪಿಕೊಳ್ಳುವ ಹೆಣ್ಣುಗಳನ್ನು ಗುರುತಿಸಬಹುದು. ಉದಾ : ಚಿಪ್ಪು ಕಥೆಯ ಯಶೀ.ಮುಂದುವರೆದಂತೆ ವಿವಾಹಿತರು, ದಾಂಪತ್ಯ ಸಂದರ್ಭದಲ್ಲಿ ಹೆಣ್ಣು ಎನ್ನುವ ಉಪ ಅಧ್ಯಾಯದಲ್ಲಿ ಕುಟುಂಬದ ವಿವಾಹ ದಾಂಪತ್ಯಗಳ ನಡುವೆ ಸಿಲುಕಿಕೊಂಡು ಜವಾಬ್ದಾರಿ ಒತ್ತಡಗಳ ನಡುವೆ ಅವಳು ತನ್ನ ಆರೋಗ್ಯವನ್ನು ಲೆಕ್ಕಿಸದಿರುವುದು, ಸಂಸಾರ ಕಥೆಯಲ್ಲಿ ಕಂಡುಬಂದರೆ ಇದೇ ರೀತಿ ಸಂಸಾರ ಬಂಧನದಲ್ಲಿ ಸಿಲುಕಿಕೊಂಡು ನಲುಗುತ್ತಿರುವ, ಅತ್ತೆಯ ಆಸೆಯಂತೆ

ನಡೆದುಕೊಳ್ಳುವುದು ಹೆಣ್ಣಾಗಿರುವ ಸೊಸೆಯಾಗದೆ ವರ್ತುಲ ಕಥೆಯ ನಾಯಕಿ ಕಂಡು ಬರುತ್ತಾಳೆ. ಕೊನೆಗೆ ಗಂಡನ ಅಭಿಮತದಂತೆ ಆ ವರ್ತುಲದಿಂದ ಹೊರಬರಲು ಸಹಾಯವಾಗುತ್ತದೆ. 'ನಮ್ಮ ಶಾಂತಿಯ ಬಯಕೆ' ಕಥೆಯ ನಾಯಕಿ ಹಲವು ಮಕ್ಕಳ ತಾಯಿಯಾಗಲು ಬಯಸಿದರೂ ಅದು ಹೇಳುವುದು ಸುಲಭ ವಾಸ್ತವದಲ್ಲಿ ಅನುಸರಿಸುವುದು ಕಷ್ಟ ಎಂಬುದನ್ನು ಮನಗಂಡು ತನ್ನ ಅಭಿಪ್ರಾಯವನ್ನು ಮಾರ್ಪಡಿಸಿಕೊಳ್ಳುತ್ತಾಳೆ.

ಬದುಕನ್ನು ಕುರಿತ ಹೆಣ್ಣಿನ ಪ್ರೀತಿ, ಬದ್ಧತೆ, ಶ್ರದ್ಧೆ ಮುಂತಾದವುಗಳನ್ನು ವೈದೇಹಿಯವರ ಕೆಲವು ಕಥೆಗಳಲ್ಲಿ ಗುರುತಿಸಬಹುದು. ಸಂಸಾರ, ವರ್ತುಲ, ಗುಲಾಬಿಯ ಮೃದುಪಾದಗಳು, ನಮ್ಮ ಶಾಂತಿಯ ಬಯಕೆ ಇನ್ನಿತರ ಕಥೆಗಳ ಮೂಲಕ ಚರ್ಚೆಗೊಳಪಡಿಸಿದ್ದೇನೆ. ಇಲ್ಲಿನ ಹೆಣ್ಣುಗಳು ಬದುಕಿನಲ್ಲಿ ಎದುರಾಗುವ ಇಕ್ಕಟ್ಟಿನ ಸಮಸ್ಯೆಗಳ ಸಂದರ್ಭದಲ್ಲೂ ಬದುಕಿಗೆ ಬೆನ್ನುತಿರುಗಿಸಿದೆ. ಬದುಕನ್ನು ಧೈರ್ಯದಿಂದ ಮುಖಾಮುಖಿಯಾಗುತ್ತಾರೆ. ಉದಾ : ಅಕ್ಕು, ಬಾಬಿ, ಪುಟ್ಟಮ್ಮತ್ತೆಯ ಮೊಮ್ಮಗಳು, ಅಚಲಾ, ಅಮ್ಮಚ್ಚಿ, ಹೀಗೆ ಈ ಸಾಲು ಮುಂದುವರೆಯುತ್ತದೆ.

ಇನ್ನುಳಿದಂತೆ ವೈದೇಹಿಯವರ ಭಾಷೆ ಮತ್ತು ಪ್ರಾದೇಶಿಕತೆಯನ್ನು ಕೆಲವು ಕಥೆಗಳ ಸಹಾಯದಿಂದ ಗುರುತಿಸಲಾಗಿದೆ. ಉದಾ : ಅಮ್ಮಚ್ಚಿಯೆಂಬ ನೆನಪು ಆರತಿ ತಟ್ಟೆ, ಅಕ್ಕು ಮುಂತಾದ ಕಥೆಗಳಲ್ಲಿ ವೈದೇಹಿಯವರು ಪೂರ್ಣ ಪ್ರಮಾಣದಲ್ಲಿ ಕುಂದಾಪುರದ ಕನ್ನಡವನ್ನು ಬಳಕೆ ಮಾಡಿದ್ದಾರೆ.

ಇವರ ಕಥೆಗಳಲ್ಲಿ ಕಂಡು ಬರುವ ಗ್ರಾಮೀಣ ಬದುಕು ಹಾಗೂ ಸಂಸ್ಕೃತಿಯನ್ನು ಹಲವಾರು ಕಥೆಗಳ ಮೂಲಕ ಗುರುತಿಸಲಾಗಿದೆ. ಇವರ ಎಲ್ಲಾ ಕಥೆಗಳಲ್ಲಿ ಗ್ರಾಮೀಣ ಬದುಕು ಮತ್ತು ಸಾಂಸ್ಕೃತಿಕ ಅಂಶಗಳನ್ನು ಗುರುತಿಸಬಹುದು. ಇದಕ್ಕೆ ಒಂದು ಉತ್ತಮವಾದ ಕಥೆಯಂದರೆ ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು ಮತ್ತು ಬಂದು ಹೋಗುವವರು. ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ ಆರತಿತಟ್ಟೆ ಮುಂತಾದ ಕಥೆಗಳಲ್ಲಿ ಈ ಪ್ರ ದೇಶದ ಸಂಸ್ಕೃತಿಯನ್ನು ಅಚ್ಚುಕಟ್ಟಾಗಿ ಗುರುತಿಸಿಕೊಟ್ಟಿದ್ದಾರೆ.

'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು' ಕಥೆ ಸಂಸ್ಕೃತಿಯ ಸ್ಥಿತ್ಯಂತರಕ್ಕೆ ಒಳಗಾಗುತ್ತಿರುವ ಒಂದು ಬಹುಮುಖ್ಯ ಕಥೆಯಾಗಿದೆ. ಟಾಕೀಸಿನ ಆಗಮನ ಆ ಊರಿಗೆ ನಾಗರೀಕತೆ ಕಾಲಿಡಲು ಪ್ರಮುಖ ಕಾರಣವಾಗಿದೆ. ಆ ಊರಿನ ಜನರ ಜೀವನದಲ್ಲಿ, ಅಂದರೆ ಮೇಲ್ವರ್ಗ, ಮಧ್ಯಮ ವರ್ಗ ಹಾಗೂ ಕೆಳವರ್ಗಗಳಲ್ಲಿ ಕಂಡುಬರುವ ಸಂಸ್ಕೃತಿಯ ಚಿತ್ರವನ್ನು ಈ ಕಥೆ ಗುರುತಿಸಿಕೊಡುತ್ತದೆ.

ವೈದೇಹಿಯವರ ಕಥೆಗಳಲ್ಲಿ ಭಾಷೆ ಹಾಗೂ ಪ್ರಾದೇಶಿಕತೆ ಎಂಬ ಅಧ್ಯಾಯದಲ್ಲಿ ವೈದೇಹಿಯವರ ಬರಹದ ಭಾಷೆ ಸಮಾಜದ ಮೇಲ್ಜಾತಿಯ ಬ್ರಾಹ್ಮಣರು, ಕೃಷಿ ಕಾರ್ಮಿಕರು, ಕೂಲಿ ಹೆಣ್ಣುಗಳು, ಮನೆಗೆಲಸದ ಹೆಣ್ಣುಗಳಲ್ಲಿ ಬಳಕೆಯಾಗಿರುವುದು ಗುರುತಿಸಲಾಗಿದೆ. ಅಲ್ಲದೇ ಅವರ ಭಾಷೆಯಲ್ಲಿ ಬೆರೆತಿರುವ ಹಾಸ್ಯ, ವ್ಯಂಗ್ಯ, ಬೈಗುಳ, ಅಶ್ಲೀಲತೆ ವಿಶಿಷ್ಟವಾಗಿ ಬೇಧವಿಲ್ಲದಂತೆ ಬೆರೆತು ಹೋಗಿರುವುದನ್ನು ಗುರುತಿಸಿಕೊಡಲಾಗಿದೆ.

ಇವಿಷ್ಟೇ ಅಲ್ಲದೇ ವೈದೇಹಿಯವರ ಕಥೆಗಳಲ್ಲಿ ಸಂಶೋಧನೆಗೊಳಪಡುವ ಅಂಶಗಳು ಹಲವಾರಿವೆ. ಏಕೆಂದರೆ ನಾನು ನನ್ನ ಅಧ್ಯಯನದ ಅನುಕೂಲಕ್ಕಾಗಿ ಮುಖ್ಯವಾಗಿ ಸಮಯದ ಹೊಂದಾಣಿಕೆಯ ಅಭಾವದಿಂದ ವೈದೇಹಿಯವರ ಸಮಗ್ರ ಕಥೆಗಳಲ್ಲಿ ಕೆಲವನ್ನು ಮಾತ್ರ ಆಯ್ಕೆ ಮಾಡಿಕೊಂಡಿದ್ದೇನೆ. ಉಳಿದ ಕಥೆಗಳು ಹಲವು ರೀತಿಯಲ್ಲಿ ಇತರರ ಸಂಶೋಧನೆಗೆ ಒಳಪಡಬಹುದಾಗಿದೆ.

ಗ್ರಂಥಸೂಚಿ

೧. ವೈದೇಹಿ : 'ಅಲೆಗಳಲ್ಲಿಅಂತರಂಗ' (ಸಮಗ್ರ ಕಥೆಗಳು)
ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ. (೧೯೭೯-೨೦೦೪)

೨. ಡಾ. ಎಚ್.ಎಸ್. ಶ್ರೀಮತಿ ; ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ : ೨೦೦೬
ಮಹಿಳಾ ಅಧ್ಯಯನ ಕೇಂದ್ರ ಗ್ರಂಥಮಾಲೆ, ಪ್ರಸಾರಾಂಗ, ಕನ್ನಡ ವಿ.ವಿ.ಹಂಪಿ.

೩. ಕೀರ್ತಿನಾಥ ಕುರ್ತಕೋಟಿ : ಯುಗಧರ್ಮ ಮತ್ತು ಸಾಹಿತ್ಯ ದರ್ಶನ - ೨೦೦೨, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೪. ಡಾ. ಕರೀಗೌಡ ಬೀಚನಹಳ್ಳಿ ; ಶತಮಾನದ ಸಣ್ಣಕಥೆಗಳ ಸಮೀಕ್ಷೆ
ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೫. ಡಾ. ಗಿರಡ್ಡಿ ಗೋವಿಂದರಾಜ : ಸಮಗ್ರ ವಿಮರ್ಶೆ ಸಂಪುಟ -೧,
ಸಪ್ನ ಬುಕ್‌ಹೌಸ್, ತುಂಗಾ ಕಾಂಪ್ಲೆಕ್ಸ್, ಗಾಂಧಿನಗರ

೬. ಡಾ. ಸಬಿಹಾ ಭೂಮಿಗೌಡ (ಸಂ.): ಮಹಿಳಾ ಸಾಹಿತ್ಯ
ಕರ್ನಾಟಕ ಸಾಹಿತ್ಯ ಅಕಾಡೆಮಿ

೭. ವಿವಿಧ ಲೇಖಕರು ; ಸಾಲು ದೀಪಗಳು
ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೮. ಡಾ. ಎಚ್.ಎಸ್. ಶ್ರೀಮತಿ : ಸ್ತ್ರೀವಾದ (ಚಿಂತನ ಮಾಲೆ),
ಪ್ರಸಾರಾಂಗ, ಕ.ವಿ.ವಿ. ಹಂಪಿ.

೯. ವೈದೇಹಿ : ಮಲ್ಲಿನಾಥನ ಧ್ಯಾನ, ಲೇಖನಗಳು
ಕನ್ನಡ ಸಂಘ, ಕ್ರೈಸ್ಟ್ ಕಾಲೇಜು,
ಬೆಂಗಳೂರು

೧೦. ಎನ್. ಗಾಯತ್ರಿ ; ಮಹಿಳೆ ಬಿಡುಗಡೆಯ ಹಾದಿಯಲ್ಲಿ
ನವಕರ್ನಾಟಕ ಪ್ರಕಾಶನ

೧೧. ಡಾ. ಎಚ್.ಎಸ್. ಶ್ರೀಮತಿ : ಚಹರೆ
ಇಳಾ ಪ್ರಕಾಶನ, ಬೆಂಗಳೂರು

೧೨. ಡಾ. ಚಂದ್ರಮತಿ ಸೋಂದಾ ; ಚಿಪ್ಪೊಡೆದ ಮೌನ
ಅಭಿರುಚಿ ಪ್ರಕಾಶನ, ಮೈಸೂರು-೬

೧೩. ಎಂ.ಎಸ್. ಆಶಾದೇವಿ : ಸ್ತ್ರೀಮತವನುತ್ತರಿಸಲಾಗದೆ ?
ಸಾಹಿತ್ಯ ಸಂಸ್ಕೃತಿ ಕುರಿತ ಲೇಖನಗಳು,
ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

೧೪. ಡಾ. ಸಬೀಹಾ ಭೂಮಿಗೌಡ(ಸಂ)': ಕನ್ನಡ ಸಾಹಿತ್ಯ ಮತ್ತು ಮಹಿಳೆ
ಡಾ. ಮಲ್ಲಿಕಾ ಘಂಟಿ ಕರ್ನಾಟಕ ಸಾಹಿತ್ಯ ಅಕಾಡೆಮಿ,
ಬೆಂಗಳೂರು

೧೫. ಡಾ. ಎನ್.ಕೆ. ಕೋದಂಡರಾಮ: ಕನ್ನಡ ಕಥಾಸಾಹಿತ್ಯದಲ್ಲಿ ಸಂಸ್ಕೃತಿಕ
ಸಂಘರ್ಷ, ಗಾಯತ್ರಿ ಸ್ಮಾರಕ ಗ್ರಂಥಮಾಲೆ
ಮೈಸೂರು

೧೬. ಗಾಯತ್ರಿ ನಾವಡ : ಮಹಿಳಾ ಸಂಕಥನ
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
೨೦೦೩

೧೭. ತೇಜಸ್ವಿನಿ ನಿರಂಜನ : ಸ್ತ್ರೀವಾದಿ ಸಾಹಿತ್ಯ ವಿಮರ್ಶೆ
ಸೀಮಂತಿನಿ ನಿರಂಜನ ಕನ್ನಡ ಸಂಘ, ಕ್ರೈಸ್ಟ್ ಕಾಲೇಜು,
ಬೆಂಗಳೂರು, ೧೯೯೪.

೧೮. ಡಾ. ಡಿ. ಮಂಗಳಾಪ್ರಿಯದರ್ಶಿನಿ : ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ
ಒಂದು ಪ್ರವೇಶಿಕೆ
ಮಹಿಳಾ ಅಧ್ಯಯನ ಕೇಂದ್ರ,
ಕನ್ನಡ ವಿ.ವಿ. ಹಂಪಿ.

೧೯. ಡಾ. ಡಿ. ಮಂಗಳಾ ಪ್ರಿಯದರ್ಶಿನಿ : ಬೈದವ್ವ ಕೇಳಾ ನನ ಮಾತಾ..
ಸಚಿನ್ ಪಬ್ಲಿಷರ್ಸ್

೨೦. ಡಾ. ಎಚ್.ಎಸ್. ಶ್ರೀಮತಿ : ಸ್ತ್ರೀವಾದ (ಚಿಂತನಮಾಲೆ)
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ

೨೧. ಎಸ್. ಗಾಯತ್ರಿ : ಮಹಿಳೆ ಬಿಡುಗಡೆಯ ಹಾದಿಯಲ್ಲಿ
ನವಕರ್ನಾಟಕ ಪ್ರಕಾಶನ

೨೨. ಎಚ್.ಎಸ್. ಶ್ರೀಮತಿ : ಮಹಿಳಾ ಅಧ್ಯಯನ ಮತ್ತು ದಕ್ಷಿಣಾಯನ
ಸಂಚಿಕೆ, ಪ್ರಸಾರಾಂಗ, ಕನ್ನಡ ವಿ.ವಿ.ಹಂಪಿ

೨೩. ಡಾ. ಎಸ್.ವಿ. ಪ್ರಭಾವತಿ : ಕನ್ನಡ ಮಹಿಳಾ ಸಾಹಿತ್ಯದಲ್ಲಿ ಸ್ತ್ರೀವಾದಿ
ನೆಲೆಗಳು,
ಬಿ.ಟಿ.ಎಂ.ಬಡಾವಣೆ, ಕುವೆಂಪು ನಗರ,
ಬೆಂಗಳೂರು

೨೪. ಬರಗೂರು ರಾಮಚಂದ್ರಪ್ಪ : ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ
ವಿವಿಧ ಲೇಖಕರು ಸ್ವರೂಪ, (ಪ್ರಸಂ.)ಕನ್ನಡ ಸಾಹಿತ್ಯ
ಅಕಾಡೆಮಿ, ಕನ್ನಡಭವನ, ಬೆಂಗಳೂರು

೨೫. ಶಶಿಕಲಾ ವೀರಯ್ಯಸ್ವಾಮಿ(ಸಂ.) : ಸಂವೇದನೆ
ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು

೨೬. ಡಾ. ಶೈಲಜ ಹಿರೇಮಠ (ಸಂ) : ಮಹಿಳಾ ಅಧ್ಯಯನ
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ

೨೭. ಜಿ.ಎಸ್. ಆಮೂರ : ಕನ್ನಡ ಕಥನ ಸಾಹಿತ್ಯ
ಶ್ರೀ ಹರಿ ಪ್ರಕಾಶನ, ಭಾರತೀ ನವೋದಯ
ನಗರ, ಧಾರವಾಡ-೨ (೧೯೯೪)

೨೮. ಡಾ. ಎಲ್.ಜಿ. ಮೀರಾ : ಸ್ತ್ರೀ ಸಂವೇದನೆಯಲ್ಲಿ ಕನ್ನಡ ಕಥನ
ಶಕ್ತಿ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್
ಬೆಂಗಳೂರು (೨೦೦೪)

೨೯. ಬೋಳುವಾರು ಮಹ್ಮದ್ ಕುಞ : ಶತಮಾನದ ಸಣ್ಣಕಥೆ
ಕರ್ನಾಟಕ ಸಾಹಿತ್ಯ ಅಕಾಡೆಮಿ, ೨೦೦೧.

೩೦. ಎಸ್. ದಿವಾಕರ (ಸಂ) : ಶತಮಾನದ ಸಣ್ಣಕಥೆಗಳು,
ಪ್ರಿಸಂ ಬುಕ್ ಪ್ರೈ. ಲಿ. ಬೆಂಗಳೂರು
೧೯೯೭

೩೧. ನೇಮಿಚಂದ್ರ : ಮಹಿಳಾ ಅಧ್ಯಯನ
ಅಂಕಿತ ಪ್ರಕಾಶನ, ಬಸವನಗುಡಿ,
ಬೆಂಗಳೂರು-೧ (೨೦೦೧)

೩೨. ಎಚ್.ಎಸ್. ರಾಘವೇಂದ್ರರಾವ್ : ಶತಮಾನದ ಸಾಹಿತ್ಯ ವಿಮರ್ಶೆ
ಕರ್ನಾಟಕ ಸಾಹಿತ್ಯ ಅಕಾಡೆಮಿ,
ಬೆಂಗಳೂರು, ೨೦೦೧.

೩೩. ಸಿ.ಎನ್. ರಾಮಚಂದ್ರನ್ : ಸಾಹಿತ್ಯ ವಿಮರ್ಶೆ
ಕರ್ನಾಟಕ ಸಾಹಿತ್ಯ ಅಕಾಡೆಮಿ,
ಬೆಂಗಳೂರು, ೨೦೦೨.

೩೩. ಎಲ್.ಎಸ್. ಶೇಷಗಿರಿರಾವ್ : ಹೊಸಗನ್ನಡ ಸಾಹಿತ್ಯ ಚರಿತ್ರೆ,
ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು
೨೦೦೨

೩೪. ರಂ.ಶ್ರೀ ಮುಗಳಿ : ಸಾಹಿತ್ಯ ಚರಿತ್ರೆ
ಮನೋಹರ ಗ್ರಂಥಮಾಲೆ, ಧಾರವಾಡ

೩೫. ವಿವಿಧ ಲೇಖಕರು : ಕನ್ನಡ ಸಾಹಿತ್ಯ ಸ್ತ್ರೀವಾದಿ ಚಿಂತನೆ
ಕರ್ನಾಟಕ ಸಾಹಿತ್ಯ ಅಕಾಡೆಮಿ,
ಬೆಂಗಳೂರು, ೧೯೯೩.